بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ವರ್ಷ: 02

ಸಂಚಿಕೆ: 03

ವಾರ್ಷಿಕ ಶುಲ್ಕ ರೂ.500/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

**21 ಡಿಸೆಂಬರ್ 2020, 21 ಫತಹ್ 1399 ಹಿಜರಿ ಶಮ್‌ಸಿ,**
**07 ಜಮಾದಿಉಸ್ಸಾನಿ 1442 ಹಿಜರಿ ಖಮರಿ.**


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

**اَللّٰھُمَّ اَیِّدْ اِمَامَنَا بِرُوْحِ الْقُدُسِ**
**وَبَارِكْ لَنَا فِیْ عُمُرِهٖ وَاَمْرِهٖ**

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْۤا اٰمِنُوْا بِاللّٰهِ وَرَسُوْلِهٖ وَالْكِتٰبِ الَّذِیْ نَزَّلَ عَلٰی رَسُوْلِهٖ وَالْكِتٰبِ الَّذِیْۤ اَنْزَلَ مِنْ قَبْلُ ؕ (النساء:137)

*(ಅನ್ನಿಸಾಅ್:137)*

**ಅಂದರೆ: ಎಲೈ ವಿಶ್ವಾಸಿಗಳೇ, ಅಲ್ಲಾಹನಲ್ಲೂ ಅವನ ಸಂದೇಶವಾಹಕನಲ್ಲೂ ಅವನ ಸಂದೇಶವಾಹಕನಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ಅದಕ್ಕೆ ಮುಂಚೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ವಿಶ್ವಾಸವಿರಿಸಿರಿ.**

## ಪ್ರವಾದಿ ಮುಹಮ್ಮದ್[ಸ]ರವರ ಉಪದೇಶ

ಹಝ್‌ರತ್ ಬರಾಅ್ ಬಿನ್ ಆಝಿಬ್(ರ) ವರದಿ ಮಾಡುತ್ತಾರೆ.

ಈದುಲ್–ಅಝುಹಾ ದಿನ ನಮಾಝಿನ ನಂತರ ನಬಿ(ಸ) ನಮ್ಮನ್ನು ಸಂಬೋಧಿಸಿ ಹೇಳಿದರು. ಯಾರು ನಮ್ಮ ರೀತಿಯಲ್ಲಿ ನಮಾಝ್ ನಿರ್ವಹಿಸುತ್ತಾರೋ ಮತ್ತು ನಾವು ಖುರ್‌ಬಾನಿ (ಬಲಿ) ಕೊಡುವ ರೀತಿಯಲ್ಲಿ ಖುರ್‌ಬಾನಿ (ಬಲಿ) ಮಾಡಿದಂತಾಗುತ್ತದೆ. ಯಾರದರು ನಮಾಝಿಗಿಂತ ಮುಂಚೆ ಖುರ್‌ಬಾನಿ ಮಾಡಿದರೆ. ಅವರ ಖುರ್‌ಬಾನಿ ಮಾನ್ಯವಾಗದು. ಆಗ ಹಝ್‌ರತ್ ಅಬೂ ಬರ್ದ ಬಿನ್ ನಿಯಾಝ್ ಅವರು ಹಝ್‌ರತ್ ಬಿರಾ ಬಿನ್ ಆಝಿಬ್ ಅವರ ಮಾವ ಆಗಿದ್ದರು. ಕೇಳಿದರು. ಓ ನಬಿವರ್ಯರೇ! ನಾನು ನನ್ನ ಮೇಕೆಯನ್ನು ನಮಾಝಿಗಿಂತ ಮುಂಚೆಯೇ ಝಿಬ ಮಾಡಿದ್ದೆ. ನಾನು ತಿಳಿಸಿದ್ದೆ ಇಂದಿನ ದಿನ ಊಟ ಉಪಹಾರದ ದಿನವಾಗಿದೆ. ಆದುದರಿಂದ ಮೊದಲು ನನ್ನ ಮೇಕೆಯೇ ನನ್ನ ಮನೆಯಲ್ಲಿ ಮೊದಲ ಝಿಬ ಆಗಲಿ ಎಂದು ಝಿಬ ಮಾಡಿದೆ. ಮತ್ತು ನಮಾಝಿಗೆ ಬರುವ ಮುಂಚೆಯೇ ಲಘು ಉಪಹಾರ (ನಾಶ್ತಾ) ಮಾಡಿ ಬಂದೆ. ಅವರು ಹೇಳಿದರು. ನಿಮ್ಮ ಮೇಕೆ ಮಾಂಸಕ್ಕೆ ಅಷ್ಟೇ ಸೀಮಿತವಾಯಿತು. ಅವರು ಹೇಳಿದರು. ಓ ನಬಿವರ್ಯರೇ! ನಮ್ಮ ಬಳಿ ಒಂದು ವರ್ಷದ ಹಸುವಿದೆ. ಅದು ನನಗೆ ಎರಡು ಮೇಕೆಗಳಿಗಿಂತಲೂ ಹೆಚ್ಚು ಪ್ರಿಯವಾಗಿದೆ. ಅದು ನನ್ನ ಕಡೆಯಿಂದ ಕುರ್‌ಬಾನಿ ಮಾಡಿದರೆ ಆದೀತೆ? ಅವರು ಹೇಳಿದರು. ಹೌದು ಆಗಬಹುದು. ನಿಮ್ಮ ನಂತರ ಯಾರಿಗೂ ಸಹ ಖುರ್‌ಬಾನಿಯಾಗಲಾರದು.

(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಈದೈನ್, ಮುದ್ರಣ 2006 ಖದಿಯಾನ್)

**ಈ ವರ್ಷ ಜಮಾಅತಿಗಾಗಿ, ಲೋಕದ ಕಲ್ಯಾಣಕ್ಕಾಗಿ, ಮಾನವೀಯತೆಯು ಅನುಗ್ರಹಪೂರ್ಣವಾಗಿರಲು ದುಆ ಮಾಡಿರಿ.**

**ನಾವು ನಮ್ಮ ಕರ್ತವ್ಯಗಳನ್ನು ಪಾಲಿಸುತ್ತ ಮೊದಲಿಗಿಂತ ಹೆಚ್ಚು ಅಲ್ಲಾಹನ ಮುಂದೆ ಬಾಗುವವರಾಗಬೇಕು. ಲೋಕದ ಜನರು ಸಹ ತಮ್ಮ ಜೀವಿತದ ಉದ್ದೇಶವನ್ನು ಮನವರಿಕೆ ಮಾಡಿಕೊಂಡು ಅಲ್ಲಾಹನ ಹಕ್ಕುಗಳನ್ನು ಪಾಲಿಸುವವರಾಗಬೇಕು.**

**ಪ್ರತಿಯೊಬ್ಬ ಅಹ್ಮದಿಯ ಮೇಲೆ ಇದೊಂದು ಬಹು ದೊಡ್ಡ ಕರ್ತವ್ಯವಾಗಿದೆ. ಅದನ್ನು ನಿಮಗೆ ಒಪ್ಪಿಸಲಾಗಿದೆ. ಮೊದಲು ತಮ್ಮೊಳಗೆ ಪ್ರೀತಿ, ಸ್ನೇಹ ಮತ್ತು ಭ್ರಾತೃತ್ವದ ವಾತಾವರಣ ಸೃಷ್ಟಿಸಬೇಕು. ಮತ್ತೆ ಲೋಕವನ್ನು ಆ ಧ್ವಜದ ಕೆಳಗೆ ಸೇರಿಸಬೇಕು. ಅದನ್ನು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಎತ್ತರಕ್ಕೆ ಹಾರಿಸಿದ್ದರು. ಅದು ಅಲ್ಲಾಹನ ಮಹತ್ವದ ಧ್ವಜವಾಗಿದೆ. ಆಗ ಮಾತ್ರ ನಾವು ಬೈಅತಿನ ಹಕ್ಕುಗಳನ್ನು ಪಾಲಿಸುವವರಾಗುವೆವು.**

**ಪ್ರತಿಯೊಬ್ಬ ಪುರುಷ, ಸ್ತ್ರೀ, ಯುವಕ, ವೃದ್ಧರಾಧಿಯಾಗಿ ಎಲ್ಲರೂ ಈ ಮಾತನ್ನು ಅರ್ಥೈಸಿಕೊಂಡು ಈ ವಚನವನ್ನು ಸಾರಬೇಕು. ಈ ವರ್ಷ ನಾವು ಲೋಕದಲ್ಲಿ ಒಂದು ಕ್ರಾಂತಿಯನ್ನು ಉಂಟು ಮಾಡಲು ತಮ್ಮೆಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸಿ ಕೊಳ್ಳಬೇಕಾಗಿದೆ ಎಂದು.**

## ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್[ಅಬಿಅ] ರವರ ನುಡಿಮುತ್ತುಗಳು

**ಸಯ್ಯದ್‌ನಾ ಹಝ್‌ರತ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ತಮ್ಮ ಖುತುಬ ಜುಮುಅ ಜನವರಿ 1, 2021 ರಲ್ಲಿ ಹೀಗೆ ನುಡಿದರು:** ಇಂದು ಹೊಸ ವರ್ಷದ ಮೊದಲ ದಿನ. ಅಂತೆಯೇ ಮೊದಲ ಜುಮುಅ ಆಗಿದೆ. ಈ ವರ್ಷವು ಜಮಾಅತಿಗಾಗಿ ಲೋಕಕ್ಕಾಗಿ, ಮಾನವೀಯತೆಗಾಗಿ, ಅನುಗ್ರಹಿತವಾಗಿರಲು ದುಆ ಮಾಡಿರಿ. ನಾವು ಸಹ ನಮ್ಮ ಕರ್ತವ್ಯಗಳನ್ನು ಪಾಲಿಸುತ್ತ ಮೊದಲಿಗಿಂತ ಹೆಚ್ಚು ಅಲ್ಲಾಹನ ಮುಂದೆ ಬಾಗುವವರಾಗಬೇಕು. ಮತ್ತು ತಮ್ಮ ಆರಾಧನೆಗಳ ಮಟ್ಟ ಸುಧಾರಿಸಿಕೊಳ್ಳಬೇಕು, ಮತ್ತು ಲೋಕದ ಜನರು ಸಹ ತಮ್ಮ ಜೀವಿತದ ಉದ್ದೇಶವನ್ನು ಮನವರಿಕೆ ಮಾಡಿಕೊಂಡು ಅಲ್ಲಾಹನ ಹಕ್ಕುಗಳನ್ನು ಪಾಲಿಸುವವರಾಗಬೇಕು. ಒಬ್ಬರು ಮತ್ತೊಬ್ಬರ ಹಕ್ಕುಗಳನ್ನು ದಮನಿಸುವ ಬದಲು ಅಲ್ಲಾಹನ ಆಜ್ಞೆಗಳನ್ನು ಪಾಲಿಸುತ್ತ ಒಬ್ಬರು ಮತ್ತೊಬ್ಬರ ಹಕ್ಕುಗಳನ್ನು ಪಾಲಿಸುವವರಾಗಬೇಕು. ಇಲ್ಲವಾಗಿದಲ್ಲಿ ಅಲ್ಲಾಹನು ತನ್ನದೆ ರೀತಿಯಲ್ಲಿ ಲೋಕದ ಜನರಿಗೆ ಅವರ ಕರ್ತವ್ಯಗಳನ್ನು ನೆನಪಿಸಿಕೊಡುವನು. ನಾವು ಮತ್ತು ಲೋಕದ ಎಲ್ಲಾ ಜನರು ಈ ಮರ್ಮ ತಿಳಿದುಕೊಳ್ಳುವವರಾದರೆ ಎಷ್ಟೊಂದು ಉತ್ತಮವಾದೀತು. ಆಗ ಮಾತ್ರ ನಾವು ಇಹ ಪರಗಳೆರಡೂ ಉತ್ತಮಪಡಿಸಿ ಕೊಳ್ಳುವವರಾಗುವೆವು.

ಅಂದ ಹಾಗೆ ನಾವು ತಮ್ಮ ಕರ್ತವ್ಯಗಳನ್ನು ಜನರಿಗೆ ಮನಮುಟ್ಟುವಂತೆ ಲೋಕಕ್ಕೆ ಮನವರಿಕೆಯಾದಂತೆ ರೂಢಿಸಿಕೊಂಡು ತಮ್ಮ ಆತ್ಮಾವಲೋಕನ ಮಾಡಿಕೊಂಡಾಗ ಮಾತ್ರ ಈ ವರ್ಷ ನಮಗೆ ಶುಭಕರವಾಗುವುದು, ನಾವು ಈ ಕಾಲಘಟ್ಟದ ವಾಗ್ದತ್ತ ಮಸೀಹ ಹಾಗೂ ಮಹದಿಯನ್ನು ನಂಬುವವರಾಗಿದ್ದೇವೆ. ನಮ್ಮ ಸ್ಥಿತಿಗತಿಗಳು ಆರೀತಿಯದ್ದಾಗಿವೆಯೋ ಎಂಬುದನ್ನು ವಿಮರ್ಶಿಸಿಕೊಳ್ಳಬೇಕಾಗಿದೆ. ನಾವು ಅಲ್ಲಾಹನ ಹಕ್ಕುಗಳನ್ನು ಪಾಲಿಸುವ ಜೊತೆಯಲ್ಲಿ ಆತ್ಮೀಯವಾಗಿ ಅವನ ದಾಸರ ಹಕ್ಕುಗಳು ಸಹ ಪಾಲಿಸುವವರಾಗಿದ್ದೇವೆಯೇ ಅಥವಾ ಇನ್ನು ನಾವು ತನ್ನ ಸ್ಥಿತಿಗಳನ್ನೇ ಸುಧಾರಿಸಿಕೊಳ್ಳುವ ಅವಶ್ಯಕತೆ ಇದೆ. ಒಬ್ಬರು ಮತ್ತೊಬ್ಬರೊಡನೆ ಪ್ರೀತಿ, ಸ್ನೇಹ ವೃದ್ಧಿಸಿಕೊಳ್ಳುವ ಅವಶ್ಯಕತೆ ಇದೆ. ಆದುದರಿಂದ ಪ್ರತಿಯೊಬ್ಬ ಅಹ್ಮದಿ ಯೋಚಿಸಬೇಕಾಗಿದೆ. ತನಗೆ ಬಹು ದೊಡ್ಡ ಕಾರ್ಯವಹಿಸಿಕೊಡಲಾಗಿದೆ. ಅದನ್ನು ಪೂರ್ಣಗೊಳಿಸಲು ಮೊದಲು ತಾವು ಪ್ರೀತಿ, ಸ್ನೇಹ ಮತ್ತು ಭ್ರಾತೃತ್ವದ ವಾತಾವರಣ ನಿರ್ಮಿಸಿಕೊಳ್ಳಬೇಕಾಗಿದೆ. ತನ್ನ ಸಮಾಜ, ಅಹ್ಮದಿ ಸಮಾಜ ಮತ್ತು ಲೋಕವನ್ನು ಹಝ್‌ರತ್ ಮುಹಮ್ಮದ್ ರಸೂಲುಲ್ಲಾಹ್(ಸ) ರವರು ಹಾರಿಸಿದ ಧ್ವಜದ ಕೆಳಗೆ ಸೇರಿಸಬೇಕು. ಅದು ಅಲ್ಲಾಹನ ಏಕತ್ವದ ಧ್ವಜವಾಗಿದೆ. ಆಗ ಮಾತ್ರ ನಾವು ನಮ್ಮ ಬೈಅತಿನ ಉದ್ದೇಶದಲ್ಲಿ ವಿಜಯಿಯಾಗುವೆವು. ಆಗ ಮಾತ್ರ ನಾವು ಅಲ್ಲಾಹನ ಅನುಗ್ರಹಗಳಿಗೆ ಪಾತ್ರರಾಗುವೆವು. ಆಗ ಮಾತ್ರ ನಾವು ಹೊಸ ವರ್ಷದ ಶುಭಾಶಯಗಳನ್ನು ಸಲ್ಲಿಸಲು ಹಾಗೂ ಪಡೆಯಲು ಅರ್ಹರಾಗುವೆವು. ಅಲ್ಲಾಹನು ಆ ಭಾಗ್ಯ ನಮಗೆ ದಯಪಾಲಿಸಲಿ, ಪ್ರತಿ ಅಹ್ಮದಿ ಪುರುಷ, ಸ್ತ್ರೀ, ಯುವಕ, ವೃದ್ಧರಾದಿಯಾಗಿ ಎಲ್ಲರೂ ಈ ಮಾತನ್ನು ಅರ್ಥೈಸಿಕೊಳ್ಳುತ್ತ ಪಣತೊಡಬೇಕು. ಈ ವರ್ಷ ನಾನು ಲೋಕದಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಲು ಶಕ್ತಿ ಸಾಮರ್ಥ್ಯಗಳನ್ನು ಉಪಯೋಗಿಸುವೆನು ಎಂದು. ಅಲ್ಲಾಹನು ಆ ಭಾಗ್ಯ ಪ್ರತಿಯೊಂದು ಅಹ್ಮದಿಗೆ ದಯಪಾಲಿಸಲಿ.

ನಮ್ಮ ಸಂತೋಷಗಳು ಅದು ವರ್ಷದ ಪ್ರಾರಂಭದ್ದಾಗಲಿ ಅಥವಾ ಹಬ್ಬಗಳದ್ದಾಗಲಿ ನಾವು ಲೋಕದಲ್ಲೆಡೆ ಅಲ್ಲಾಹನ ಏಕತ್ವದ ಧ್ವಜ ಹಾರಿಸಿದ ದಿನವೆ ಈಡೇರುವುದು. ಅದು ಮುಹಮ್ಮದ್ ರಸೂಲುಲ್ಲಾಹ್(ಸ) ರು ತಂದ ಧ್ವಜವಾಗಿದೆ. ಮಾನವರು ಮಾನವೀಯತೆಯನ್ನು ಮನವರಿಕೆ ಮಾಡಿಕೊಂಡ ದಿನವೇ ನಮಗೆ ನಿಜವಾದ ಸಂತೋಷವು ದೊರೆಯುವುದು. ಎಲ್ಲರ ದ್ವೇಷಗಳು ಪ್ರೀತಿಯಲ್ಲಿ ಬದಲಾವಣೆಗೊಂಡ ದಿವಸವೆ ನಮಗೆ ಸಂತೋಷ ದೊರೆಯುವುದು.

*(ಪುಟ ಸಂಖೆ 10 ರಲ್ಲಿ ಮುಂದುವರಿಸಲಾಗಿದೆ)*

لَا اِلٰهَ اِلَّا اللّٰهُ مُحَمَّدٌ رَّسُوْلُ اللّٰهِ

## ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬಹುಮಾನದ ಪಂಥಾಹ್ವಾನ

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದವು ನಾವು.

اِنَّ السُّمُوْمَ لَشَرُّ مَا فِی الْعَالَمِ ۞ شَرُّ السُّمُوْمِ عَدَاوَۃُ الصُّلَحَاءِ

**ಮೌಲ್ವಿ ಮುಹಮ್ಮದ್ ಹುಸೇನ್‌ರವರು "ಇಶಾಅತುಸ್ಸುನ್ನ" ದಲ್ಲಿ ದೇವವಾಣಿಯನ್ನು ಸಾಕ್ಷಿ ಮತ್ತು ಪುರಾವೆ ಎಂದು ಸ್ವೀಕರಿಸಿರುತ್ತಾರೆ. ಅದರ ವಿರುದ್ಧ ಸಾಬೀತುಮಾಡಿದರೆ ಅವರಿಗೆ ಒಂದು ನೂರು ರೂಪಾಯಿಗಳ ಬಹುಮಾನ.**

**(ಬದರ್ ಸಂಚಿಕೆ 49ರ ಪಂಥಾಹ್ವಾನದ ಉಳಿದ ಭಾಗ)**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅವರಿಗೆ ಬರೆದರು. ನಾನು ಹೇಳುವುದೇನೆಂದರೆ. ನಿಮ್ಮ ಮೊದಲ ವಿವರಣೆಯಲ್ಲಿ ತಾವು ಇಬ್ನು ಅರಬಿಯರ ಸಮರ್ಥಕರಾಗಿದ್ದರೆ ನೀವು ಸಮರ್ಥಕರಲ್ಲ ಎಂದಾದರೆ, ಬುಖಾರಿ ಹದೀಸನ್ನು ಏಕೆ ಪ್ರಸ್ತಾಪಿಸಿದ್ದೀರಿ? ಅದರಲ್ಲಿ ಬರೆಯಲಾಗಿದೆ. ಮುಹದ್ದಿಸ್ ಸಹ ನಬಿಯಂತೆಯೇ ಸಂದೇಶವಾಹಕರಾಗಿದ್ದಾರೆ. ನೀವು ಏಕೆ ಮುಹಮ್ಮದ್ ಇಸ್ಮಾಯಿಲ್ ಸಾಹಿಬ್‌ರವರ ಕಥನ ದಾಖಲಿಸಿದ್ದೀರಿ. ಮುಹದ್ದಿಸರ ದೇವವಾಣಿಯೂ ನಬಿಯಂತೆ ಶೈತಾನನ ಹಸ್ತಕ್ಷೇಪದಿಂದ ಮುಕ್ತವಾಗಿರುತ್ತದೆ ಎಂದು. ನೀವು ಬುಖಾರಿ ಹದೀಸ್ ನಂಬುಬುದಿಲ್ಲ ಎಂದಾದರೆ ಹಿಂದಿನ ಹೇಳಿಕೆಯನ್ನು ಸಮರ್ಥಿಸಿಕೊಳ್ಳಬೇಕು. ನಾನು ಮುಹದ್ದಿಸಿನ ದೇವವಾಣಿಯನ್ನು ಶೈತಾನನ ಹಸ್ತಕ್ಷೇಪದಿಂದ ಮುಕ್ತನೆಂದು ಭಾವಿಸುವುದಿಲ್ಲ ಎಂದು ನನಗೆ ಆಶ್ಚರ್ಯವಾಗುತ್ತದೆ. ನೀವು ಒಂದೆಡೆ ಬುಖಾರಿ, ಬುಖಾರಿ ಎನ್ನುತ್ತೀರಿ. ಇನ್ನೊಂದೆಡೆ ಅದರ ವಿರುದ್ಧ ನಡೆದುಕೊಳ್ಳುತ್ತೀರಿ. ಒಬ್ಬ ಮುಹದ್ದಿಸಿಗೆ ಒಂದು ಹದೀಸಿನ ಮರ್ಮ ಸ್ಪಷ್ಟವಾದರೆ ಪದೇ ಪದೇ ದೇವವಾಣಿಯಿಂದ ಪ್ರೇರಣೆ ನೀಡಲ್ಪಟ್ಟರೆ ಬುಖಾರಿ ಹದೀಸಿನ್ವಯ ಆ ಹದೀಸನ್ನು ದುರ್ಬಲವೆಂದು ಪರಿಗಣಿಸುವುದಿಲ್ಲವೇ, ಮುಹದ್ದಿಸಿನ ಆ ಹದೀಸನ್ನು ಒಪ್ಪಬೇಕಾಗಿದೆ ಎಂದು. ಅದಾಗ್ಯೂ ನಿಮ್ಮ ವಿಶ್ವಾಸ. ಹೇಗೆ ನಿಮ್ಮ ಮೇಲೆ ಮಿಥ್ಯಾರೋಪ ಮಾಡಿದಂತಾಯಿತು? ಹಝ್ರತ್ ಮೌಲ್ವಿ ಸಾಹಿಬ್ ತಾವು ಇಂತಹ ಪದಗಳನ್ನು ಏಕೆ ಉಪಯೋಗ ಮಾಡುತ್ತಿದ್ದೀರಿ. ಇತ್ತಬುಲ್ಲಾಹ್ (ಅಲ್ಲಾಹನಿಂದ ಭಯಪಡಿರಿ) ಎಂಬ ವಿಷಯ ಏಕೆ ಗ್ರಹಿಸುತ್ತಿಲ್ಲ (ಅದೇ ಪುಟ-544)

ಆಗ ಮೌಲ್ವಿ ಮುಹಮ್ಮದ್ ಹುಸೇನ್ ಬಟಾಲವಿ ಸಾಹಿಬ್ ಬರೆದರು. ನನ್ನ ಆದರಣಿಯ ಮಿತ್ರರೆ, ನಾನು ಬುಖಾರಿಯನ್ನು ನಂಬುತ್ತೇನೆ. ಈ ಹದೀಸಿನಲ್ಲಿ ಮುಹದ್ದಿಸರ ಪ್ರಾಮುಖ್ಯತೆ ಕುರಿತು ಏನು ಬರೆಯಲಾಗಿದೆಯೋ ಅದರಲ್ಲಿ ನನ್ನ ವಿಶ್ವಾಸವಿದೆ. ಅದರ ಜೊತೆಯಲ್ಲಿಯೇ ಈ ವಿಶ್ವಾಸವಿದೆ. ಯಾವ ವ್ಯಕ್ತಿ ಮುಹದ್ದಿಸ್ ಎಂದು ಹೇಳಿಕೊಂಡು, ಸಹೀ ಬುಖಾರಿ ಅಥವಾ ಸಹೀ ಮುಸ್ಲಿಂ ಹದೀಸುಗಳನ್ನು ದೇವವಾಣಿ ಎಂದು ಹೇಳಿ ಆ ಹದೀಸನ್ನು ದುರ್ಬಲ ಎಂದು ಹೇಳಿದರೆ ಅವನು ಮುಹದ್ದಿಸ್ ಅಲ್ಲ. ಶೈತಾನನ ಸಹಚರನಾಗಿದ್ದಾನೆ. ವಾಸ್ತವದ ಮುಹದ್ದಿಸ್ ಮತ್ತು ದೇವವಾಣಿ ಹೊಂದಿದ ವ್ಯಕ್ತಿ ಎಂದರೆ ಅವನು ಹದೀಸ್ ಮತ್ತು ದೇವವಾಣಿ ಪುರಾತನ ಪವಿತ್ರ ಖುರ್‌ಆನ್ ಸಹೀ ಹದೀಸುಗಳಿಗೆ ವಿರುದ್ಧವಾಗಿರಬಾರದು. ಮುಹದ್ದಿಸ್ ಅಥವಾ ದೇವವಾಣಿಯ ದಾವೆದಾರರು ಅದರ ಜೊತೆಯಲ್ಲಿ ಹೀಗೆ ನುಡಿಯಬೇಕು. ನನಗೆ ದೇವದೂತರು ನಿಮಿತ್ತ ಮಾಡಿದ್ದಾರೆ ಅಥವಾ ಅಲ್ಲಾಹನು ತನ್ನ ವಾಣಿಯನ್ನು ನೀಡಿದ್ದಾನೆ. ಅಥವಾ ರಸೂಲುಲ್ಲಾಹ್(ಸ) ನುಡಿದರು. ಸಹಿಹೈನ್ ಹದೀಸುಗಳು ದುರ್ಬಲವಾಗಿವೆ ಎಂದಾದರೆ ನಾನು ಅವನಿಗೆ ಶೈತಾನನ ಸಹಚರ ಎಂದು ಭಾವಿಸುವೆ, ಅವನು ಮುಹದ್ದಿಸ್ ಅಲ್ಲ, ಬದಲು ಸಾಕ್ಷಾತ್ ಶೈತಾನನೆಂದು ನಕಲಿ ಮುಹದ್ದಿಸ್‌ನೆಂದು ನಂಬುವೆನು. ಏಕೆಂದರೆ ಮುಹದ್ದಿಸ್ ಆಗಿ ಹೀಗೆ ಹೇಳುವುದು ನನಗೆ ದೇವವಾಣಿಯಾಗಿದೆ. ಪವಿತ್ರ ಖುರ್‌ಆನ್ ಅಲ್ಲಾಹನ ಗ್ರಂಥವಲ್ಲ. ಅಂತಹವನಿಗೆ ನಾನು ನಂಬುವೆನು. ನೀವು ಸಹ ಮುಹದ್ದಿಸ್‌ನೆಂದು ನಂಬಲಾರಿರಿ. ಅದೇ ಕಾರಣದಿಂದ ಪ್ರಸಕ್ತ ಕಾಲದಲ್ಲಿ ಮುಸ್ಲಿಮರು ಬುಖಾರಿಯನ್ನು ನಂಬುತ್ತಾರೆ. ಆದರೆ ನಿಮ್ಮನ್ನು ಮುಹದ್ದಿಸ್‌ನೆಂದು ಸ್ವೀಕರಿಸುವುದಿಲ್ಲ. ಅವರು ಬುಖಾರಿ ಹದೀಸನ್ನು ತಿರಸ್ಕರಿಸಲು ಸಾಧ್ಯವಿಲ್ಲ. (ಅದೇ ಪುಟ 78).

ಆಗ ಸಯ್ಯದನಾ ಹಝ್ರತ್ ಮಸೀಹ್ ಮೌಊದ್(ಅ) ಬರೆದರು. ನಿಸ್ಸಂಶಯವಾಗಿ ನೀವು ಯಾವುದೇ ಹದೀಸನ್ನು ಕಷ್ಫ (ದೈವಿಕ ಸ್ವಪ್ನ) ಅನ್ವಯ ದುರ್ಬಲ ಅಥವಾ ದುರ್ಬಲ ಹದೀಸನ್ನು ಸರಿ ಎಂದು ಹೇಳಿದರೆ, ತನ್ನ ಗ್ರಂಥ ಈಶಾಆತ್ತುನ್ನಾದಲ್ಲಿ ಅಂತಹವರನ್ನು ಶೈತಾನನೆಂದು ಪರಿಗಣಿಸಿಲ್ಲ. ಇದು ನಿಮ್ಮ ಮಿಥ್ಯ ಮಾತ್ರವಾಗಿದೆ ಮತ್ತು ಯುದ್ಧದ ನಂತರ ಪ್ರಸ್ತಾಪಿಸಿದಂತಿದೆ. ನೀವು ತನ್ನ ಬರಹದಲ್ಲಿ ಹೀಗೆ ಬರೆದಿರುವಿರಿ. ನನ್ನ ದೃಷ್ಟಿಯಲ್ಲಿ ಯಾವುದೇ ಸಹಿಹೈನಿನಲ್ಲಿರುವ ಸಹೀ ಹದೀಸನ್ನು ದುರ್ಬಲ ಎನ್ನುವವನು ಸಾಕ್ಷಾತ್ ಶೈತಾನನಾಗಿದ್ದಾನೆ. ನೀವು ಇಶಾಅತುಸ್ಸಿನದಲ್ಲಿ ಇಂತಹ ವಿಶ್ವಾಸಯುಳ್ಳವರನ್ನು ದೈವಿಕ ಸ್ವಪ್ನ ಪಡೆದವರನ್ನು ಎಂದೂ ಶೈತಾನನ ಸಹಚರನೆಂದು ಹೆಸರಿಸಿಲ್ಲ. ಬದಲು ಪ್ರಶಂಸಿದ್ದೀರಿ. ಮತ್ತು ಅದರ ವಿವರಣೆಯನ್ನು ನೀಡಿದ್ದೀರಿ. ಉದಾಹರಣೆಗೆ ನೀವು ನನ್ನ ಸಮರ್ಥನೆಯಲ್ಲಿ ಇಬ್ನು ಅರಬಿಯರ ಕಥನವನ್ನು ಬರೆದಿದ್ದೀರಿ. ಪುತುಹಾತ್ ಗ್ರಂಥದಿಂದ ಬರೆದಿದ್ದೀರಿ. ಕೆಲವು ಹದೀಸುಗಳು ದೈವಿಕ ಸ್ವಪ್ನಗಳ ಮೂಲಕ ದುರ್ಬಲವೆಂದು ಪರಿಗಣಿಸಲಾಗುತ್ತದೆ. ಸತ್ಯ ಹೇಳಿರಿ. ಆ ಸಮಯ ನಿಮ್ಮ ಇರಾದೆ ಏನಿತ್ತು. ಅಲ್ಲಾಹನ ಅಭಯ ನಿಮ್ಮ ಈ ನಿಯತ್ತು ಇತ್ತೇ. ಇಬ್ನು ಅರಬಿ ಕಾಫ್ಫರ್ ಮತ್ತು ಸಾಕ್ಷಾತ್ ಶೈತಾನವಾಗಿರುವರೇ? ಈ ಸಂಬಂಧ ಗಣ್ಯವ್ಯಕ್ತಿಗಳೆಲ್ಲ ಕಾಫರರೇ? ನೀವು ನಮ್ಮ ಒಂದು ಪತ್ರಿಕೆಯಲಿಲ ಮುಹಿಮುದ್ದೀನ್ ಇಬ್ನು ಅರಬಿಯರನ್ನು ಸುಫಿಗಳ ಸರದಾರರು ಮತ್ತು ಅಸ್ಲಿಮಾಗಳಲಿ ಪರಿಗಣಿಸಿದ್ದೀರಿ. ಆ ಮಹಾತ್ಮರುಗಳು ನಿಮ್ಮ ಅನಿಸಿಕೆ ಅನ್ವಯ ಅವರು ಶೈತಾನನ ಸಹಚರರೇ, ನೀವು ಒಂದು ಪತ್ರ ತಮ್ಮ ಗುರುವಿಗೆ ಬರೆದಿದ್ದರು. ಒಬ್ಬ ಶೈತಾನನ ಪುರಾವೆ ಒದಗಿಸಬೇಕಾಗಿತು! ಅದು ನಿಮ್ಮ ಪತ್ರಿಕೆ ಇಶಾಅತುಸ್ಸಿನದಲ್ಲಿ ನಮೂದಿತವಾಗಿದೆ. ನಾನು ತನ್ನ ಮೇಲೆ ಒಂದು ನೂರು ರೂಪಾಯಿಂದ ವಿಧಿಸಿಕೊಳ್ಳುತ್ತೇನೆ. ವಿವೇಕವಂತರೂ, ನ್ಯಾಯವಂತರು ಆ ಪತ್ರಿಕೆಯನ್ನು ಓದಿ ಈ ಅಭಿಪ್ರಾಯವನ್ನು ನೀಡಬೇಕು. ನೀವು ಆ ಸಜ್ಜನರನ್ನು ಕಾಫಿರ್ ಶೈತಾನನೆಂದು ಸಾರಿದ್ದರು. ಅವರು ದೇವವಾಣಿಗಳನ್ನು ಶೈತಾನನ ಮಾತುಕತೆ ಎಂದಿದ್ದರು. ಅದು ಸತ್ಯವೆಂದಾದರೆ ನಾನು ಒಂದು ನುರು ರೂಪಾಯಿಯನ್ನು ಕೊಡುವೆನು. ನೀವು ಪ್ರಕಟಿಸಿದ Reviewಯಿಂದ ಪಲಾಯನ ಮಾಡಬಯಸುತ್ತೀರಿ. ಮತ್ತು ಪುರಾತನ ಸಮುದಾಯಗಳ ಅಭ್ಯಾಸದಂತೆ ರದ್ದು ಬದಲು ಮಾಡುವುದರಲ್ಲಿ ಒತ್ತು ನೀಡುತ್ತಿದ್ದೀರಿ. (ಅದೇ ಪುಟ 122-123).

ಲೂಧಿಯಾನ ಮುಬಾಹಿಸ್ (ಚರ್ಚೆ) ಯಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಅತ್ಯಂತ ಹೀನವಾಗಿ ಸೋತ ಸ್ಥಿತಿಯ ಮೇಲೆ ಟಿಪ್ಪಣಿ ಬರೆಯುತ್ತಾ ಹಝ್ರತ್ ಮೌಲಾನ ಅಬ್ದುಲ್ ಕರೀಂ ಸಾಹಿಬ್ ಸಿಯಾಲ್ಕೋಟಿ(ರಿ) ಒಂದು ರೋಚಕ ಟಿಪ್ಪಣಿ ಪ್ರಸ್ತುತಪಡಿಸಿ ಈ ವಿಷಯ ಮುಕ್ತಾಯಗೊಳಿಸುತ್ತೇವೆ.

ಅವರು ಹೇಳುತ್ತಾರೆ. ಅಂತಿಮವಾಗಿ ಮುಬಾಹಿಸ್ (ಚರ್ಚೆ) ಪ್ರಾರಂಭವಾಯಿತು. 12 ದಿನಗಳವರೆಗೆ ಅದು ಜಾರಿಯಲ್ಲಿತ್ತು. ಆದರೆ ವಿಷಾದದ ಸಂಗತಿ ಎಂದರೆ ಫಲಿತಾಂಶದಲ್ಲಿ ಲೂಧಿಯಾನದ ಜನರು ಸಹ ಪೂರ್ಣ ಅರ್ಥದಲ್ಲಿ ಲಾಹೋರ್ ಸಹೋದರರ ನಸೀಬಿನಲ್ಲಿ ಸಹಭಾಗಿಯಾದರು. (**ಟಿಪ್ಪಣಿ:** ಲಾಹೋರಿನವರು ಹಝ್ರತ್ ಮೌಲ್ವಿ ಹುಸೇನ್ ನೂರುದ್ದೀನ್ ಸಾಹಿಬ್(ರ) ಅವರನ್ನು ಒತ್ತಾಯಪೂರ್ವಕವಾಗಿ ಹಾಗೂ ವಿನಂತಿಸಿ ಕರೆದರು. ವಾಸ್ತವಿಕತೆಯ ಬಗ್ಗೆ ಅವರಿಂದ ಕೇಳಿ ಸಂತೃಪ್ತಿ ಪಡೆಯಲು. ಅವರ ಈ ವಿನಂತಿಯ ಮೇರೆಗೆ ಲಾಹೋರ್ ತಲುಪಿದರು. ಅವರು ಭಾವಿಸಿದರು. ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಸಾಹಿಬ್ ಸಹ ಉಪಸ್ಥಿರಾದರೆ ಅವರಿಬ್ಬರ ಎದುರುಬದರಿನಲ್ಲಿ ಚರ್ಚೆ ಕೇಳಿ ಒಂದು ಉತ್ತಮ ಫಲಿತಾಂಶಕ್ಕೆ ಬರಬಹುದೆಂದು. ಆದರೆ ಮೌಲ್ವಿ ಮುಹಮ್ಮದ್ ಹುಸೇನ್ ಬಟೌಲ್ವಿ ಸಾಹಿಬಿ ಆಚೆ ಈಚೆಯ ಅಲ್ಲಸಲ್ಲದ ಮಾತುಗಳನ್ನಾಡಿ ಸಮಯ ವ್ಯರ್ಥ ಮಾಡಿದರು. ಮತ್ತು ಉದ್ದೇಶದೆಡೆ ಬರಲೇ ಇಲ್ಲ. ಅದರಿಂದ ಲಾಹೋರಿನವರು ತುಂಬ ದು:ಖಿತರಾದರು.)

ಮೌಲ್ವಿ ಸಾಹಿಬರು ಈಗಲೂ ಸಹ ಅದೇ ವಿಷಯ ಪ್ರಸ್ತಾಪಿಸಿದರು. ಅದಾಗ್ಯೂ ಅವರು ಆ ಗೊಂದಲ ನಿವಾರಿಸುವುದು ಅನಿವಾರ್ಯವಾಗಿತ್ತು. ಅವರ ಅನಿಸಿಕೆ ಪ್ರಕಾರ ಇಸ್ಲಾಂ ಹಾಗೂ ಮುಸ್ಲಿಮರಿಗೆ ಪುಷ್ಪದ ಸಮಸ್ಯೆಯಿತ್ತು. ಅಂದರೆ ಅವರಿಗೆ ಸತ್ಯ ಹಾಗೂ ಸಾಕ್ಷ್ಯದ ಮೇಲೆ ಪೂರ್ಣ ಭರವಸೆ ಇದ್ದಿದ್ದರೆ ಮೊದಲು ಅವರೇ ಎಲ್ಲಿಯೂ ಮಿರ್ಝಾ ಸಾಹೇಬರು ವ್ಯಕ್ತಪಡಿಸಿದ ಅಸಲು ವಿಷಯ ಮಸೀಹರ ಮರಣ' ಪೈಕಿ ಚರ್ಚಿಸಬೇಕಿತ್ತು. ಅದನ್ನು ಬಿಟ್ಟು ಆಚೆ ಈಚೆ, ಅಲ್ಲಸಲ್ಲದ ಮತುಗಳಲ್ಲಿ ತೊಡಗಿದರು. ಅವರ ಕರ್ತವ್ಯವಾಗಿತ್ತು. ಪವಿತ್ರ ಖುರ್‌ಆನ್‌ನಿಂದ ಹಝ್ರತ್ ಮಸೀಹರ ಜೀವಂತಿಕೆ ಕುರಿತು ಪುರಾವೆ ಒದಗಿಸುವುದು. ಅಥವಾ ಆ ವಚನಗಳ ಅರ್ಥಗಳ ಮೇಲೆ ಚರ್ಚಿಸಬೇಕಿತ್ತು. ಖುರ್‌ಆನ್‌ನ ಸಾಕ್ಷ್ಯದೊಂದಿಗೆ ಹದೀಸುಗಳ ವ್ಯಾಖ್ಯಾನ ಮಾಡಬೇಕಿತ್ತು ಅದನ್ನು ಹಝ್ರತ್ ಮಸೀಹ್ ಮೌಊದ್(ಅ) ಮರಣ ಕುರಿತು ಬರೆದಿದ್ದರು. ಅವರು ಹೇಗೋ ಮಾತಿನ ಮೃತ್ಯುವಿನ ಆ ಕಂಡಿಕೆಯನ್ನು ಸರಿಬಯಸುತ್ತಿದ್ದರು. ಆದರೆ ಅದು ಸಾಧ್ಯವಾಗಲಿಲ್ಲ. ಅಂತಿಮವಾಗಿ ಮೌಲ್ವಿ ಸಾಹೇಬರು ದಾರುಣ್ಯವಾದ ಮೃತ್ಯುವಿಗೆ ಶರಣಾದರು.

**"ಫಅತಬಿರು ಯಾ ಊಲಿಲ್ ಅಬ್ಸಾರ್"**- ಇದೀಗ ನಾನು ಆಶಿಸುತ್ತೇನೆ. ಪರಿಪೂರ್ಣ ಕಾರ್ಯ ನಿಮಿತ್ತ ಮತ್ತೆ ಲೋಕಕ್ಕೆ ಆಗಮಿಸಲಾರರು ಆದುದರಿಂದ ಲಾಹೋರಿನ ಪವಿತ್ರ ಜಮಾಅತ್ ಸಹ ಅವರನ್ನು ಮೃತರದಲ್ಲಿ ಪರಿಗಣಿಸಿ ನೋಡಲು ಮಾತ್ರ ಜೀವಂತರಂತೆ ಕಾಣುವ ಮೌಲ್ವಿಗಳನ್ನು ಕಂಡರು ಮತ್ತು ಅವರ ಮೇಲೆ ಭೌತಿಕ ಪಠಿಸಿದರು ನಾವು ಸಹ ಅವರಿಗೆ ಆಧ್ಯಾತ್ಮ ರೀತಿಯಲ್ಲಿ ಮೃತರೆಂದು ಭಾವಿಸುತ್ತೇವೆ ಮತ್ತು ಅವರ ಮರಣದ ಮೇಲೆ ಶೋಕ ವ್ಯಕ್ತಪಡಿಸುತ್ತೇವೆ. **ಇನ್ನಾ ಲಿಲಾಹಿ ವ ಇನ್ನ ಇಲೈಹಿ ರಾಜಿವೂನ್,** (ಅಲ್-ಹಖ್ ಮುಬಾಹಿಸ ಲುಧಿಯಾನ, ರೂಹಾನಿ ಖಝಾಈನ್, ಸಂಪುಟ-4, ಪುಟ-6,7)

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಾಹ್ ನಾವು ಹಝ್ರತ್ ಮಸೀಹ್ ಮೌಊದ್(ಅ) ರವರ ಇನ್ನೊಂದು ಬಹುಮಾನದ ಪಂಥಾಹ್ವಾನ ಓದುಗರ ಜೊತೆಯಲ್ಲಿ ಪ್ರಸ್ತುತಪಡಿಸುವೆವು. **(ಮನ್ಸೂರ್ ಅಹ್ಮದ್ ಮಸ್ರೂರ್)**

# ಖುತ್‌ಬ ಜುಮುಅ

**ಹಝ್ರತ್ ಪೈಗಂಬರರ(ಸ) ನಿಧನದ ನಂತರ ಅಂದೇ ಅಥವಾ ಮರುದಿನ ಹಝ್ರತ್ ಅಬೂಬಕರ್(ರ) ಕೈಯಲ್ಲಿ ಹಝ್ರತ್ ಅಲಿ(ರ) ಬೈಅತ್ ಮಾಡಿದ್ದರು. ಇದೇ ಸತ್ಯ. ಏಕೆಂದರೆ, ಹಝ್ರತ್ ಅಬೂಬಕರ್‌ರನ್ನು(ರ) ಹಝ್ರತ್ ಅಲಿ(ರ) ಎಂದಿಗೂ ಕೈಬಿಟ್ಟಿರಲಿಲ್ಲ ಮತ್ತು ಯಾವತ್ತೂ ಹಝ್ರತ್ ಅಬೂಬಕರರ(ರ) ಹಿಂದೆ ನಮಾಝ್ ಮಾಡುವುದನ್ನು ಬಿಟ್ಟಿರಲಿಲ್ಲ.**

**ಹಝ್ರತ್ ಅಲಿಯ(ರ) ಸಕಲ ಉತ್ತಮ ಗುಣವೈಶಿಷ್ಟ್ಯಗಳನ್ನು ಕಡೆಗಣಿಸಿದ್ದರು ಕೂಡ ನನ್ನ ಪ್ರಕಾರ ಇಂತಹ ಭೀಕರ ಸನ್ನಿವೇಶದಲ್ಲಿ ಖಿಲಾಫತನ್ನು ಅವರು ಸ್ವೀಕರಿಸಿದ್ದು ಬಹಳ ಧೈರ್ಯ ಮತ್ತು ಸಾಹಸದ ಸಂಗತಿಯಾಗಿತ್ತು. ಅದು ಬಹಳ ಶ್ಲಾಘನೀಯ ಸಂಗತಿಯಾಗಿತ್ತು. ಅವರು ತನ್ನ ಗೌರವ ಮತ್ತು ತನ್ನ ಅಸ್ತಿತ್ವಕ್ಕೆ ಇಸ್ಲಾಮಿನ ಮುಂದೆ ಯಾವುದೇ ಬೆಲೆ ಕೊಡಲಿಲ್ಲ. ಇಷ್ಟು ಹಿರಿದಾದ ಹೊಣೆಯನ್ನು ವಹಿಸಿದರು. (ಹಝ್ರತ್ ಮುಸ್ಲಿಹ್ ಮೌಊದ್(ರ))**

**ರಸೂಲುಲ್ಲಾಹ್(ಸ) ರವರ ಪ್ರೀಯ ಬದರಿ ಹಾಗೂ ನಿಷ್ಠಾವಂತ ಸಹಾಬಿ ಖಲೀಫ ರಾಶಿದ, ಅಳಿಯ ಹಾಗೂ ಅಬೂ ತುರಾಬ್ ಹಝ್ರತ್ ಅಲಿ(ರ)ರವರ ಪವಿತ್ರ ಜೀವನ ಚರಿತ್ರೆಯ ಪ್ರಸ್ತಾವನೆ**

**ಪಾಕಿಸ್ತಾನದ ಅಹ್ಮದಿಯರೊಡನೆ ನಾನು ಹೇಳಬಯಸುತ್ತೇನೆ. ಆದ್ದರಿಂದ ಹಿಂದಿಗಿಂತ ಬಹಳ ಅಧಿಕವಾಗಿ ದುಆಗಳ ಕಡೆಗೆ ಗಮನವಹಿಸಿರಿ. ಅಲ್ಲಾಹನು ಬೇಗನೇ ಈ ಕಷ್ಟತೆಗಳನ್ನು ನಮ್ಮಿಂದ ನೀಗಿಸಲಿ, ಸುಗಮತೆಯನ್ನು ಉಂಟುಮಾಡಲಿ, ಯಥಾರ್ಥ ಇಸ್ಲಾಮಿನ ಸಂದೇಶವನ್ನು ಪಾಕಿಸ್ತಾನದಲ್ಲೂ ಹಾಗೂ ಲೋಕದ ಪ್ರತಿಯೊಂದು ಮೂಲೆಯಲ್ಲೂ ಸ್ವತಂತ್ರವಾಗಿ ತಲುಪಿಸಲು ನಮಗೆ ಸಾಧ್ಯವಾಗುವಂತಾಗಲಿ.**

**ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ವಿಶೇಷ ಕೋರಿಕೆ**

**ನಾಲ್ಕು ದಿವಂಗತರಾದ ಸನ್ಮಾನ್ಯ ಡಾಕ್ಟರ್ ತಾಹಿರ್ ಅಹ್ಮದ್ ಸಾಹಿಬ್ ಇವರು ಅಬ್ದುರ್ರಝ್ಝಾಖ್ ಶಹೀದ್ ಸಾಹಿಬ್‌ರ ಮಗನಾಗಿದ್ದರು, ಚೌಧರಿ ಅಲ್ಲಾದತ್ತ ಸಾಹಿಬ್‌ರ ಮಗನಾದ ಸನ್ಮಾನ್ಯ ಹಬೀಬುಲ್ಲಾಹ್ ಮಝ್‌ಹರ್ ಸಾಹಿಬ್, ಸನ್ಮಾನ್ಯ ಖಲೀಫ ಬಶೀರುದ್ದೀನ್ ಸಾಹಿಬ್ ಹಾಗೂ ಖಲೀಫ ರಫೀಉದ್ದೀನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಅಮೀನ ಅಹ್ಮದ್ ಸಾಹಿಬ ಅವರ ಸದ್ಗುಣಗಳ ಪ್ರಸ್ತಾವನೆ ಹಗೂ ನಮಾಝೆ ಜನಾಝ ನಿರ್ವಹಣೆ**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **18-12-2020** ರಂದು ನೀಡಿದ **ಜುಮುಅ ಖುತ್‌ಬ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ۔ بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

إِيَّاكَ نَعْبُدُ وَإِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಹಝ್ರತ್ ಅಲಿ ರಝಿಯಲ್ಲಾಹುಅನ್‌ಹುರ ಪ್ರಸ್ತಾಪ ನಡೆಯುತ್ತಿತ್ತು. ಹಝ್ರತ್ ಪೈಗಂಬರರ(ಸ) ಕೊನೆಯರೋಗಾವಸ್ಥೆಯ ಸಮಯದಲ್ಲಿ ಹಝ್ರತ್ ಅಲಿ(ರ) ಮಾಡಿದ ಸೇವೆಯ ಬಗ್ಗೆ ಹೀಗೆ ವರದಿ ಲಭಿಸುತ್ತದೆ. ಬುಖಾರಿಯ ವರದಿಯಾಗಿದೆ. ಉಬೈದುಲ್ಲಾಹ್ ಬಿನ್ ಅಬ್ದುಲ್ಲಾಹ್ ವರದಿ ಮಾಡುತ್ತಾರೆ: ಹಝ್ರತ್ ಆಇಶ(ರ) ಹೇಳುತ್ತಿದ್ದರು: ಹಝ್ರತ್ ಪೈಗಂಬರ್(ಸ) ರೋಗಗ್ರಸ್ತರಾಗಿ ಅವರ ರೋಗಉಲ್ಬಣಗೊಂಡಾಗ ನನ್ನ ಮನೆಯಲ್ಲಿ ಇದ್ದುಕೊಂಡು ಶುಶ್ರೂಷೆ ನಡೆಸುವಂತಾಗಲು ಅವರು ತಮ್ಮ ಇತರ ಪತ್ನಿಯರಿಂದ ಅನುಮತಿ ಕೇಳಿದರು. ಅವರೆಲ್ಲರೂ ಹಝ್ರತ್ ಪೈಗಂಬರರಿಗೆ(ಸ) ಅದರ ಅನುಮತಿ ಕೊಟ್ಟರು. ಹಝ್ರತ್ ಪೈಗಂಬರ್(ಸ) ಎರಡು ವ್ಯಕ್ತಿಗಳ ಆಸರೆ ಪಡೆಯುತ್ತಾ ಹಝ್ರತ್ ಆಯಿಶಾ ರಝಿಯಲ್ಲಾಹುಅನ್‌ಹರ ಮನೆಯಿಂದ ಮಸೀದಿಗೆ ಹೊರಟರು. ಹಝ್ರತ್ ಪೈಗಂಬರರ(ಸ) ಪಾದಗಳು ನೆಲವನ್ನುಸವರುತ್ತಾ ಹೋಗುತ್ತಿದ್ದುವು. ಎಂದರೆ ಬಲಹೀನತೆಯ ಕಾರಣದಿಂದ ಹಝ್ರತ್ ಪೈಗಂಬರರಿಗೆ(ಸ) ಕಾಲುಗಳನ್ನು ಮೇಲೆತ್ತಲು ಸಾಧ್ಯವಾಗುತ್ತಿರಲಿಲ್ಲ. ಹಝ್ರತ್ ಪೈಗಂಬರ್(ಸ) ಹಝ್ರತ್ ಅಬ್ಬಾಸ್(ರ) ಮತ್ತು ಬೇರೊಬ್ಬ ವ್ಯಕ್ತಿಯ ಆಸರೆ ಪಡೆಯುತ್ತಾ ಹೋಗುತ್ತಿದ್ದರು. ಉಬೈದುಲ್ಲಾಹ್ ಹೇಳುತ್ತಾರೆ: ನಾನು ಹಝ್ರತ್ ಆಇಶ(ರ) ಹೇಳಿದ ಸಂಗತಿಯ ಪ್ರಸ್ತಾಪವನ್ನು ಹಝ್ರತ್ ಇಬ್ನು ಅಬ್ಬಾಸ್‌ರೊಡನೆ ಮಾಡಿದೆ. ಹಝ್ರತ್ ಆಇಶ(ರ) ಹೇಳಿದ ಇಬ್ಬರು ವ್ಯಕ್ತಿಗಳು ಯಾರೆಂದು ನಿನಗೆ ಗೊತ್ತೇ ಎಂದು ಇಬ್ನು ಅಬ್ಬಾಸ್ ನನ್ನೊಡನೆ ಕೇಳಿದರು. ಹಝ್ರತ್ ಅಬ್ಬಾಸ್(ರ) ಅಲ್ಲದೆ ಮತ್ತೊಬ್ಬರು ಯಾರೆಂದು ಗೊತ್ತಿಲ್ಲವೆಂದು ನಾನು ಹೇಳಿದೆ. ಅವರು ಹಝ್ರತ್ ಅಲಿ(ರ) ಆಗಿದ್ದರು ಎಂದು ಇಬ್ನು ಅಬ್ಬಾಸ್ ಹೇಳಿದರು.

(ಸಹೀಹ್ ಬುಖಾರಿ, ಕಿತಾಬುಲ್ ಅಝಾನ್, ಹದೀಸ್-665)

ಹಝ್ರತ್ ಅಬ್ದುಲ್ಲಾಹ್ ಬಿನ್ ಅಬ್ಬಾಸ್ ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರರ(ಸ) ಕೊನೆಯ ರೋಗಾವಸ್ಥೆಯ ಸಂದರ್ಭದಲ್ಲಿ, ಹಝ್ರತ್ ಅಲಿ(ರ) ಹಝ್ರತ್ ಪೈಗಂಬರರನ್ನು(ಸ) ಭೇಟಿಯಾಗಿ ಹೊರಗೆ ಬಂದರು. ಜನರು ಕೇಳಿದರು: ಹೇ ಅಬುಲ್‌ಹಸನ್, ಇಂದು ಬೆಳಿಗ್ಗೆ ಹಝ್ರತ್ ಪೈಗಂಬರರ(ಸ) ಆರೋಗ್ಯ ಹೇಗಿದೆ? ಅಲ್‌ಹಮ್ದುಲಿಲ್ಲಾಹ್, ಇಂದು ಬೆಳಿಗ್ಗಿನಿಂದ ಹಝ್ರತ್ ಪೈಗಂಬರ್(ಸ) ಆರೋಗ್ಯದಿಂದ್ದಾರೆ ಎಂದು ಹಝ್ರತ್ ಅಲಿ(ರ) ಹೇಳಿದರು. ಆಗ ಹಝ್ರತ್ ಅಲಿಯ(ರ) ಕೈಯನ್ನು ಹಿಡಿದುಕೊಂಡು ಹಝ್ರತ್ ಅಬ್ಬಾಸ್ ಬಿನ್ ಅಬ್ದುಲ್ ಮುತ್ತಲಿಬ್ ಹೇಳಿದರು: ಅಲ್ಲಾಹನಾಣೆ, ನೀವು ಮೂರು ದಿನಗಳ ನಂತರ ಬೇರೊಬ್ಬರ ಅಧೀನದಲ್ಲಿ ಆಗುವಿರಿ. ಅಲ್ಲಾಹನಾಣೆ ಹಝ್ರತ್ ಪೈಗಂಬರ್(ಸ) ತನ್ನ ಈ ರೋಗದಿಂದ ಬೇಗನೇ ನಿಧನರಾಗುವರು. ಏಕೆಂದರೆ, ಮರಣದ ಸಮಯದಲ್ಲಿ ಬನೂ ಅಬ್ದುಲ್ ಮುತಲಿಬ್ಬರ ಮುಖಗಳಲ್ಲಿ ಉಂಟಾಗುವ ಬದಲಾವಣೆಗಳ ಬಗ್ಗೆ ನನಗೆ ಚೆನ್ನಾಗಿ ಗೊತ್ತಿದೆ. ಬನ್ನಿರಿ, ನಾವು ಹಝ್ರತ್ ಪೈಗಂಬರರ(ಸ) ಬಳಿಗೆ ಹೋಗಿ ಖಿಲಾಫತ್ ಯಾರಲ್ಲಿ ಇರುವುದು ಎಂದು ಕೇಳೋಣ. ನಮ್ಮಲ್ಲಿ ಎಂದರೆ, ಖುರೈಶಿಯರಲ್ಲಿ ಎಂದಾದರೆ, ನಮಗೆ ಅದರ ಅರಿವು ಸಿಕ್ಕಂತಾಯಿತು. ನಮ್ಮಲ್ಲಿ ಅಲ್ಲದೆ ಬೇರೆಯವರಲ್ಲಿ ಎಂದಾದರೆ, ಅದೂ ಗೊತ್ತಾದಂತಾಯಿತು. ಹಝ್ರತ್ ಪೈಗಂಬರ್(ಸ) ಇದರ ಬಗ್ಗೆ ನಮಗೆ ಏನಾದರೂ ಉಪದೇಶ ನೀಡಬಹುದು. ಹಝ್ರತ್ ಅಲಿ(ರ) ಹೇಳಿದರು: ಅಲ್ಲಾಹನಾಣೆ, ನಾವು ಹಝ್ರತ್ ಪೈಗಂಬರರೊಡನೆ(ಸ) ಇದರ ಬಗ್ಗೆ ಕೇಳಿದ ನಂತರ ಖುರೈಶಿಗಳಿಗೆ ಈ ಗೌರವವನ್ನು ಕೊಡದಿದ್ದರೆ, ಹಝ್ರತ್ ಪೈಗಂಬರರ(ಸ) ನಂತರ ಜನರು ಮತ್ತೆಂದಿಗೂ ನಮಗೆ ಈ ಗೌರವವನ್ನು ಕೊಡಲಾರರು. ಅಲ್ಲಾಹನಾಣೆ, ನಾನು ಹಝ್ರತ್ ಪೈಗಂಬರರೊಡನೆ(ಸ) ಇದರ ಕುರಿತು ಕೇಳುವುದಿಲ್ಲ.

(ಸಹೀಹ್ ಬುಆಕರಿ ಕಿತಾಬುಲ್ ಮಗಾಝಿ, ಹದೀಸ್-4447, ಸಂಪುಟ-9, ಪುಟ-337-338)

ಇದು ಸಹ ಬುಖಾರಿಯ ಹದೀಸಾಗಿದೆ. ಬುಖಾರಿಯಲ್ಲಿರುವ ಅರಬೀ ಪದಗಳು ಹೀಗಿವೆ: **ಅಂತ ವಲ್ಲಾಹಿ ಬಅ್‌ದ ಸಲಾಸ ಅಬ್ದುಲ್‌ಅಸಾ**. ಇದರ ಬಗ್ಗೆ ಹಝ್ರತ್ ಸಯ್ಯದ್ ವಲಿಯುಲ್ಲಾಹ್ ಶಾಹ್ ಸಾಹಿಬ್ ತನ್ನ ಪುಸ್ತಕದಲ್ಲಿ

ಹೀಗೆ ನೋಟ್ ಬರೆದಿರುವರು: ಹಝ್ರತ್ ಪೈಗಂಬರರ(ಸ) ನಂತರ ಬೇರೊಬ್ಬರ ಕೈಕೆಳಗೆ ಆಗುವ ವ್ಯಕ್ತಿಯನ್ನು ಸೂಚಿಸುತ್ತಾ ಈ ಪದಗಳನ್ನು ಬಳಸಲಾಗಿದೆ. ಹಝ್ರತ್ ಪೈಗಂಬರ್(ಸ) ಮೂರು ದಿನಗಳ ನಂತರ ನಿಧನರಾಗುವರು ಎಂದಾಗಿದೆ ಇದರ ತಾತ್ಪರ್ಯ. (ಸಹೀಹ್ ಬುಆಖರಿ, ಅನುವಾದಕರು ಹಝ್ರತ್ ಸಯ್ಯದ್ ಝೈನುಲ್ ಆಬಿದೀನ್ ವಲಿವುಲ್ಲಾಹ್ ಶಾಹ್ ಸಾಹಿಬ್, ಸಂಪುಟ–9, ಪುಟ–337, ನಝಾರತ್ ಇಶಾಅತ್ ರಬ್ವಾಹ್ ಪ್ರಕಾಶನ)

ಹಝ್ರತ್ ಆಮಿರ್(ರ) ವರದಿ ಮಾಡುತ್ತಾರೆ: ಹಝ್ರತ್ ಪೈಗಂಬರ್(ಸ) ನಿಧನರಾದಾಗ ಅವರ ಮಯ್ಯತ್ತಿನ ಸ್ನಾನವನ್ನು ಹಝ್ರತ್ ಅಲಿ(ರ), ಹಝ್ರತ್ ಫಝ್ಲ್(ರ), ಹಝ್ರತ್ ಉಸಾಮ ಬಿನ್ ಝೈದ್(ರ) ಮಾಡಿಸಿದ್ದರು ಮತ್ತುಇವರೇ ಹಝ್ರತ್ ಪೈಗಂಬರರ(ಸ) ಮಯ್ಯತ್ತನ್ನುಗೋರಿಗೆ ಇಳಿಸಿದ್ದರು. ಮತ್ತೊಂದು ವರದಿಯಲ್ಲಿ ಅವರೊಂದಿಗೆ ಹಝ್ರತ್ ಅಬ್ದುರ್ರಹ್ಮಾನ್ ಬಿನ್ ಔಫ್(ರ) ಇದ್ದರು ಎಂದಿದೆ. (ಸುನನ್ ಅಬುದಾವೂದ್, ಕಿತಾಭುಲ್ ಜನಾಎಝ್, ಹದೀಸ್–3209)

ಹಝ್ರತ್ ಅಲಿ(ರ) ಹಝ್ರತ್ ಅಬೂಬಕರ್‌ರ(ರ) ಕೈಯಲ್ಲಿಬೈಅತ್ ಮಾಡಿದ್ದ ಬಗ್ಗೆ ಹಲವು ವರದಿಗಳು ಬಂದಿವೆ. ಹಝ್ರತ್ ಅಲಿ(ರ) ಪರಿಪೂರ್ಣ ತೃಪ್ತಿ ಮತ್ತು ಆಸಕ್ತಿಯಿಂದ ಬೇಗನೇ ಹಝ್ರತ್ ಅಬೂಬಕರ್ ಕೈಯಲ್ಲಿ ಬೈಅತ್ ಮಾಡಿದ್ದರು ಎಂದು ಕೆಲವು ವರದಿಗಳಲ್ಲಿ ಬಂದಿವೆ. ಕೆಲವರು ಇದಕ್ಕೆ ತದ್ವಿರುದ್ಧವಾಗಿ ಬರೆದಿರುವರು. ಹೇಗಿದ್ದರೂ ಹಝ್ರತ್ ಅಬೂ ಸಈದ್ ಖುದ್‌ರೀ(ರ) ವರದಿ ಮಾಡುತ್ತಾರೆ: ಮುಹಾಜಿರರು ಮತ್ತು ಅನ್ಸಾರರು ಹಝ್ರತ್ ಅಬೂಬಕರರ(ರ) ಕೈಯಲ್ಲಿ ಬೈಅತ್ ಮಾಡಿದಾಗ, ಅವರು ಮಿಂಬರ್ ಮೇಲೆ ಹತ್ತಿಜನರ ಕಡೆಗೆ ನೋಡಿದರು. ಆಗ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಕಾಣಲಿಲ್ಲ. ಅನ್ಸಾರರಿಂದ ಕೆಲವರು ಹೋಗಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಕರೆದುಕೊಂಡು ಬಂದರು. ಹಝ್ರತ್ ಅಲಿಯನ್ನು(ರ) ಹಝ್ರತ್ ಅಬೂಬಕರ್(ರ) ಸಂಬೋಧಿಸುತ್ತಾ ಕೇಳಿದರು: ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ದೊಡ್ಡಪ್ಪರ ಮಗ ಮತ್ತು ಹಝ್ರತ್ ಪೈಗಂಬರರ(ಸ) ಅಳಿಯನೇ, ನೀನು ಮುಸ್ಲಿಮರ ಶಕ್ತಿಯನ್ನು ಕುಂಠಿತಗೊಳಿಸಲು ಬಯಸುತ್ತಿದ್ದೀರಾ? ಹಝ್ರತ್ ಅಲಿ(ರ) ಹೇಳಿದರು: ಹೇ ಪೈಗಂಬರರ(ಸ) ಖಲೀಫರೇ, ನನ್ನ ಮೇಲೆ ದೋಷಾರೋಪ ಬೇಡಿರಿ. ಅನಂತರ ಅವರು ಹಝ್ರತ್ ಅಬೂಬಕರರ(ರ) ಬೈಅತ್ ಮಾಡಿದರು. (ಸೀರತ್ ಅಮೀರುಲ್ ಮುಮಿನ್ನ್ ಅಲಿ ಬಿನ್ ತಾಲಿಬ್, ಪುಟ–119, ದಾರುಲ್ ಮಾರಿಫತ್ ಬೈರೂತ್ ಲೆಬನಾನ್ 2006, ಅಸ್ಸೀರತುನ್ನಬವೀಯ ಲಿಇಬ್ನೆ ಕಸೀರ್ ಪುಟ–693, ದಾರುಲ್ ಕುತುಬ್ ಇಲ್ಮಿಯ ಬೈರೂತ್ ಲೆಬನಾನ್ 2005)

ತಾರೀಖ್ ತಬರಿಯಲ್ಲಿ ಹಬೀಬುಲ್ಲಾಹ್ ಬಿನ್ ಅಬೂ ಸಾಬಿತ್‌ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಅಲಿ(ರ) ಮನೆಯಲ್ಲಿದ್ದರು. ಅವರ ಬಳಿಗೆ ಒಬ್ಬ ವ್ಯಕ್ತಿ ಬಂದು ಹೀಗೆ ಹೇಳಿದರು: ಹಝ್ರತ್ ಅಬೂಬಕರ್(ರ) ಬೈಅತ್ ಪಡೆಯಲು ಬಂದಿರುವರು. ಹಝ್ರತ್ ಅಲಿ(ರ) ನಿಲುವಂಗಿ ಧರಿಸಿದ್ದರು. ಪೈಜಾಮ ಧರಿಸದೇ, ಚಾದರವನ್ನು ತೆಗೆಯದೆ ಮನೆಯಿಂದ ಹೊರಟರು. ತಡವಾಗುವುದನ್ನು ಅವರು ಇಷ್ಟಪಟ್ಟಿರಲಿಲ್ಲ. ಹೀಗೆ ಬೇಗನೇ ಹೋಗಿ ಹಝ್ರತ್ ಅಬೂಬಕರರ(ರ) ಕೈಯಲ್ಲಿ ಬೈಅತ್ ಮಾಡಿ ಅವರ ಬಳಿಯಲ್ಲಿ ಕುಳಿತುಕೊಂಡರು. ಹಝ್ರತ್ ಅಬೂಬಕರರ(ಸ) ಸಭೆಯಲ್ಲೇ ಇದ್ದುಕೊಂಡು ತನ್ನ ಬಾಕಿ ವಸ್ತ್ರಗಳನ್ನು ತರಿಸಿ ಧರಿಸಿಕೊಂಡರು. (ತಾರೀಖ್ ಅತ್ತಿಬರಿ, ಭಾಗ–3, ಪುಟ–257, ದಾರುಲ್ ಫಿಕರ್ ಲೆಬನಾನ್ 2002)

ಅಲ್ಲಾಮ ಇಬ್ನು ಕಸೀರ್ ಹೇಳುತ್ತಾರೆ: ಹಝ್ರತ್ ಪೈಗಂಬರರ(ಸ) ನಿಧನದ ನಂತರ ಅಂದೇ ಅಥವಾ ಮರುದಿನ ಹಝ್ರತ್ ಅಬೂಬಕರ್(ರ) ಕೈಯಲ್ಲಿ ಹಝ್ರತ್ ಅಲಿ(ರ) ಬೈಅತ್ ಮಾಡಿದ್ದರು. ಇದೇ ಸತ್ಯ. ಏಕೆಂದರೆ, ಹಝ್ರತ್ ಅಬೂಬಕರ್‌ರನ್ನು(ರ) ಹಝ್ರತ್ ಅಲಿ(ರ) ಎಂದಿಗೂ ಕೈಬಿಟ್ಟಿರಲಿಲ್ಲ ಮತ್ತು ಯಾವತ್ತೂ ಹಝ್ರತ್ ಅಬೂಬಕರರ(ರ) ಹಿಂದೆ ನಮಾಝ್ ಮಾಡುವುದನ್ನು ಬಿಟ್ಟಿರಲಿಲ್ಲ. (ಅಸ್ಸೀರತುನ್ನಬವೀಯ ಲಿಇಬ್ನೆ ಕಸೀರ್, ಪುಟ–694, ದಾರುಲ್ ಕುತುಬ್ ಇಲ್ಮಿಯ ಬೂರೂತ್ 2005)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಹಝ್ರತ್ ಅಲಿ ಕರ್‌ರಮಲ್ಲಾಹು ವಜ್‌ಹಹೂ ಆರಂಭದಲ್ಲಿ ಹಝ್ರತ್ ಅಬೂಬಕರರಿಂದ(ರ) ಬೈಅತ್ ಮಾಡುವುದರಿಂದ ಹಿಂದೆಸರಿದಿದ್ದರು. ಆದರೆ ಮನೆಗೆ ಹೋಗಿದ ನಂತರಅವರ ಮನಸ್ಸಲ್ಲಿ ಏನು ಆಲೋಚನೆ ಬಂದಿತ್ತು ಎಂದು ಅಲ್ಲಾಹನೇ ಬಲ್ಲನು. ಮುಂಡಾಸು ಕೂಡ ಕಟ್ಟದೆ ಬೇಗನೇ ಟೊಪ್ಪಿ ಮಾತ್ರ ಹಾಕಿಕೊಂಡು ಬೈಅತ್ ಮಾಡಿದರು ಮತ್ತು ಮುಂಡಾಸನ್ನು ಅನಂತರ ತರಿಸಿದರು. ಬೈಅತ್ ಮಾಡದೇ ಇರುವುದು ಬಹಳ ದೊಡ್ಡ ಪಾಪ ಮತ್ತು ಧಿಕ್ಕಾರವೆಂದು ಅವರ ಮನಸ್ಸಲ್ಲಿ ಆಲೋಚನೆ ಬಂದಿರಬಹುದು ಎಂದು ತೋರುತ್ತದೆ. ಆದ್ದರಿಂದಲೇ ಅವರು ಅವಸರಪಟ್ಟು ಮುಂಡಾಸು ಕೂಡ ಧರಿಸಲಿಲ್ಲ. (ಮಲ್‌ಫೂಝಾತ್, ಸಂಪುಟ–10, ಪುಟ–183, 1984 ಮುದ್ರಣ)

ಎಂದರೆ ಸರಿಯಾಗಿ ವಸ್ತ್ರಧಾರಣೆ ಕೂಡ ಮಾಡದೇ ಬೇಗ ಬೇಗನೇ ಹೊರಟಿದ್ದರು.

ಬೇರೆ ರೀತಿಯ ವರದಿಗಳಲ್ಲಿ ಹೀಗೆಯೂ ಬಂದಿದೆ. ಹಝ್ರತ್ ಅಲಿ(ರ) ಹಝ್ರತ್ ಫಾತಿಮರ(ರ) ಮರಣದ ನಂತರ ಹಝ್ರತ್ ಅಬೂಬಕರರ(ರ) ಬೈಅತ್ ಮಾಡಿದ್ದರು ಎಂದು ಬಂದಿದೆ. ಉದಾಹರಣೆಗೆ ಹಝ್ರತ್ ಅಲಿ(ರ) ಹಝ್ರತ್ ಫಾತಿಮರ(ರ) ಮರಣದ ತನಕ ಬೈಅತ್ ಮಾಡಿರಲಿಲ್ಲವೆಂದು ಬುಖಾರಿಯ ವರದಿಯಲ್ಲಿ ಬಂದಿದೆ. (ಸಹೀಹ್ ಬುಆಖರಿ, ಕಿತಾಬುಲ್ ಮಗಾಝಿ, ಹದೀಸ್–4240)

ಆದರೆ ಹಲವಾರು ಪಂಡಿತರು ಬುಖಾರಿಯಲ್ಲಿರುವ ಈ ವರದಿಯ ಬಗ್ಗೆ ಸವಾಲು ಎತ್ತಿದ್ದಾರೆ. ಹಝ್ರತ್ ಅಲಿ(ರ) ಹಝ್ರತ್ ಫಾತಿಮರ(ರ) ಮರಣದ ವರೆಗೆ ಹಝ್ರತ್ ಅಬೂಬಕರರ(ರ) ಕೈಯಲ್ಲಿ ಬೈಅತ್ ಮಾಡಿರಲಿಲ್ಲವೆಂಬ ಇಮಾಂ ಶಹಾಬುದ್ದೀನ್ ಝೊಹರಿಯ ವರದಿಯನ್ನು ಪ್ರಸ್ತಾಪಿಸುತ್ತಾ ಇಮಾಂ ಬೈಹಖಿ ಹಸನುಲ್ ಕುಬ್ರಾದಲ್ಲಿ ಬರೆಯುತ್ತಾರೆ: ಹಝ್ರತ್ ಅಲಿ(ರ) ಹಝ್ರತ್ ಫಾತಿಮರ(ರ) ಮರಣದ ವರೆಗೆ ಹಝ್ರತ್ ಅಬೂಬಕರರ(ರ) ಕೈಯಲ್ಲಿ ಬೈಅತ್ ಮಾಡಿರಲಿಲ್ಲವೆಂಬ ಇಮಾಂ ಝೊಹರಿಯ ಮಾತು ಅಸ್ಪಷ್ಟವಾದ ಮಾತಾಗಿದೆ. ಹಝ್ರತ್ ಅಲಿ(ರ) ಸಖೀಫದ ನಂತರ ನಡೆದ ಸಾಮಾನ್ಯ ಬೈಅತಿನಲ್ಲಿ ಹಝ್ರತ್ ಅಬೂಬಕರರ(ರ) ಕೈಯಲ್ಲಿ ಬೈಅತ್ ಮಾಡಿದ್ದರು ಎಂಬ ಹಝ್ರತ್ ಅಬೂಸಈದ್ ಖುದ್‌ರಿಯ ವರದಿ ಹೆಚ್ಚು ಪ್ರಬಲವಾಗಿದೆ. (ಅಸ್ಸುನನುಲ್ ಕುಬ್ರ ಲಿಲ್‌ಬೈಹಖಿ, ಹದೀಸ್–12732)

ಬುಖಾರಿಯಲ್ಲಿ ಹೇಳಲಾದ ಈ ಎರಡನೇ ಬೈಅತಿಗೆ ಬೈಅತಿನ ನವೀಕರಣವೆಂಬ ಹೆಸರನ್ನು ಕೆಲವು ಪಂಡಿತರು ಕೊಟ್ಟಿದ್ದಾರೆ. ಬುಖಾರಿಯಂತಹ ಗ್ರಂಥದಲ್ಲಿ ಬಂದ ಈ ವರದಿಗೆ ಬೆಲೆ ಕೊಡುವುದು ಆವಶ್ಯಕವೆಂದು ಬಹುಶಃ ಈ ಪಂಡಿತರು ಭಾವಿಸಿರಬಹುದು. ಹೇಗಿದ್ದರೂ ಬುಖಾರಿಯ ಎಲ್ಲ ವರದಿಗಳು ಸರಿಯೆಂದು ಹೇಳುವಂತಿಲ್ಲ. ಡಾಕ್ಟರ್ ಅಲಿ ಮುಹಮ್ಮದ್ ಸಲಾಬಿ ತನ್ನ ಗ್ರಂಥವಾದ **'ಸೀರತ್ ಅಮೀರುಲ್ ಮೂಮಿನೀನ್ ಅಲಿ ಬಿನ್ ತಾಲಿಬ್ ಶಖ್‌ಸಿಯ್ಯತು ವಾಸ್‌ರ'** ದಲ್ಲಿ ಬರೆಯುತ್ತಾರೆ: ಹಝ್ರತ್ ಫಾತಿಮ(ರ) ನಿಧನರಾದ ಆರು ತಿಂಗಳ ನಂತರ ಹಝ್ರತ್ ಅಲಿ(ರ) ಮತ್ತೊಮ್ಮೆ ಬೈಅತ್ ಮಾಡಿದ್ದರು ಎಂದು ಅಲ್ಲಾಮ ಇಬ್ನು ಕಸೀರ್ ಮತ್ತು ಹಲವಾರು ಪಂಡಿತರು ಅಭಿಪ್ರಾಯ ಪಟ್ಟಿದ್ದಾರೆ. (ಸೀರತ್ ಅಮೀರುಲ್ ಮುಮಿನೀನ್ ಅಲಿ ಬಿನ್ ಅಬಿ ತಾಲಿಬ್, ಪುಟ–121, ದಾರುಲ್ ಮಾರಿಫತ್ ಬೈರೂತ್ 2006)

ಇದಕ್ಕೆ ಅವರು ತಜ್‌ದೀದೇ ಬೈಅತ್ ಎಂದು ಹೆಸರಿಟ್ಟಿದ್ದರು. ಎಂದರೆ ಬೈಅತಿನ ನವೀಕರಣ. ಎಂದರೆ ಮೊದಲು ಬೈಅತ್ ಮಾಡಿದ್ದರು, ಆದರೆ ಹಝ್ರತ್ ಫಾತಿಮರ(ರ) ಮರಣದ ನಂತರ ಪುನಃ ಬೈಅತ್ ಮಾಡಿದ್ದರು.

ಹಝ್ರತ್ ಫಾತಿಮ(ರ) ನಿಧನರಾದಾಗ, ಹಝ್ರತ್ ಅಬೂಬಕರರ(ರ) ಕೈಯಲ್ಲಿ ಪುನಃ ಬೈಅತ್ ಮಾಡುವುದು ಉತ್ತಮವೆಂದು ಹಝ್ರತ್ ಅಲಿ(ರ) ಭಾವಿಸಿದ್ದರು ಎಂದು ಅಲ್ಲಾಮ ಇಬ್ನು ಕಸೀರ್ ಬರೆಯುತ್ತಾರೆ. (ಅಸ್ಸೀರತುನ್ನಬವೀಯ ಲಿಇಬ್ನೆ ಕಸೀರ್ ಪುಟ–694, ದಾರುಲ್ ಕುತುಬ್ ಇಲ್ಮಿಯ ಬೈರೂತ್ 2005)

ಆ ಸಮಯದಲ್ಲಿ ಅಬೂಬಕರರ(ರ) ಬದಲಿಗೆ ಹಝ್ರತ್ ಅಲಿ(ರ) ಖಲೀಫ ಆಗಬೇಕಿತ್ತು ಎಂದು ಹೇಳಿ ಹಝ್ರತ್ ಅಬೂಬಕರರ(ರ) ಮೇಲೆ ಆಕ್ಷೇಪವೆತ್ತುವುದನ್ನು ವಿವರಿಸುತ್ತಾ ಮಸೀಹ್ ಮೌಊದ್(ರ) ತನ್ನ ಅರಬಿ ಗ್ರಂಥವಾದ **ಸಿರ್‌ರುಲ್‌ಖಿಲಾಫ**ದಲ್ಲಿ ಬರೆಯುತ್ತಾರೆ:

ಲೌಕಿಕತೆ ಮತ್ತುಅದರ ಮೋಹಕತೆಗಳಿಗೆ ಆದ್ಯತೆ ನೀಡುವ ವ್ಯಕ್ತಿಗಳಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಒಳಪಟ್ಟಿದ್ದರು ಮತ್ತು ಅವರು ಇತರರ ಹಕ್ಕುಗಳನ್ನು ಅಪಹರಿಸುವ ವ್ಯಕ್ತಿಯಾಗಿದ್ದರು ಎಂದು ನಾವು ಭಾವಿಸುವುದಾದರೆ, ಇಂತಹ ಸ್ಥಿತಿಯಲ್ಲಿ ಅಲ್ಲಾಹನ ಸಿಂಹವಾದ ಹಝ್ರತ್ ಅಲಿ(ರ) ಸಹ ಕಪಟವಿಶ್ವಾಸಿಗಳಲ್ಲಿ ಸೇರಿದ್ದರು ಎಂದು ಒಪ್ಪಲು ನಾವು ನಿರ್ಬಂಧಿತರಾಗುವೆವು. ಅವರು ಭೌತಿಕತೆಯನ್ನು ತ್ಯಾಗಮಾಡಿ ಅಲ್ಲಾಹನ ಪ್ರೇಮದಲ್ಲಿ ಲೀನವಾದ ವ್ಯಕ್ತಿಯಾಗಿರಲಿಲ್ಲ ಬದಲಿಗೆ ಲೋಕ ಮತ್ತು ಅದರ ಆಕರ್ಷಣೆಗಳಿಗೆ ಬೀಳುವ ಮತ್ತು ಅದರ ರಮ್ಯತೆಗೆ ಮೋಹಿತರಾದ ವ್ಯಕ್ತಿಯಾಗಿದ್ದರೆಂದೂ ಆದ್ದರಿಂದ ಸತ್ಯನಿಷೇಧಿಗಳ ಮತ್ತು ಧರ್ಮಭ್ರಷ್ಟರ ಹಾಗೆ ಅವರಲ್ಲಿ ಸೇರಿಕೊಂಡಿದ್ದರು ಹಾಗೂ ಸುಮಾರು ಮೂವತ್ತು ವರ್ಷಗಳ ಕಾಲ ಈ ರೀತಿ ಕಾಪಟ್ಯವನ್ನು ಕೈಗೊಂಡಿದ್ದರು ಎಂದು ಸಮ್ಮತಿಸ ಬೇಕಾಗುವುದು. ಅದೂ ಅಲ್ಲದೆ, ಹಝ್ರತ್ ಅಲಿ ರಝಿಯಲ್ಲಾಹುಅನ್‌ಹುರ ದೃಷ್ಟಿಯಲ್ಲಿ ಹಝ್ರತ್ ಅಬೂಬಕರ್ ಸಿದ್ದೀಖ್(ರ) ಅಪಹಾರಕನೆಂದಾದರೆ, ಅವರಕೈಯಲ್ಲಿ ಬೈಅತ್ ಮಾಡುವುದನ್ನು

ಹಝ್ರತ್ ಅಲಿ(ರ) ಏಕೆ ಒಪ್ಪಿಕೊಂಡರು? ದೌರ್ಜನ್ಯ, ಕಲಹ ಮತ್ತು ಧರ್ಮಭ್ರಷ್ಟತೆಯ ಪ್ರದೇಶದಿಂದ ಇತರ ದೇಶಗಳ ಕಡೆಗೆ ಏಕೆ ವಲಸೆ ಹೋಗಲಿಲ್ಲ? ದೇವಭಯವುಳ್ಳವರ ನಡೆವಳಿಕೆ ಕ್ರಮ ಪ್ರಕಾರ ವಲಸೆ ಹೋಗಬಹುದಾಗಿತ್ತಲ್ಲವೇ? ಹಿಜ್ರತ್ ಮಾಡಲುಅಲ್ಲಾಹನ ಭೂಮಿಯು ವಿಶಾಲವಾಗಿರಲಿಲ್ಲವೇ? ಸತ್ಯದ ಸಾಕ್ಷ್ಯಕ್ಕಾಗಿ ಹಝ್ರತ್ ಇಬ್ರಾಹೀಂ(ಅ) ಎಷ್ಟು ಶಕ್ತರಾಗಿ ನಿಂತಿದ್ದರು ಎಂದು ನೋಡಿರಿ. ಅವರು ತುಂಬಾ ಧೈರ್ಯಶಾಲಿಯಾಗಿದ್ದರು. ಅವರ ತಂದೆ ದುರ್ಮಾರ್ಗದಲ್ಲಿದ್ದಾರೆ ಮತ್ತು ಸತ್ಯದ ಮಾರ್ಗದಿಂದ ದೂರಸರಿದಿದ್ದಾರೆ ಎಂದು ನೋಡಿದ್ದಾಗ ಮತ್ತು ಅವರ ಸಮುದಾಯ ವಿಗ್ರಹಗಳನ್ನು ಪೂಜಿಸುತ್ತಿದ್ದಾರೆ ಮತ್ತು ಅತ್ಯುನ್ನತನಾದ ಪ್ರಭುವನ್ನು ಉಪೇಕ್ಷಿಸಿದ್ದಾರೆ ಎಂದು ಕಂಡಾಗ ಯಾವುದೇ ಭಯವಿಲ್ಲದೆ ಮತ್ತು ಅವರನ್ನು ಪರಿವೆ ಮಾಡದೆ ಅವರಿಂದ ಹಝ್ರತ್ ಇಬ್ರಾಹೀಂ ಮುಖ ತಿರುಗಿಸಿದರು. ಅವರನ್ನು ಬೆಂಕಿಯಲ್ಲಿ ಹಾಕಲಾಯಿತು ಆದರೆ ಅವರು ದುಷ್ಟರ ಭಯದಿಂದ ಸತ್ಯವನ್ನು ರಹಸ್ಯವಾಗಿರಿಸಲಿಲ್ಲ. ಇದಾಗಿದೆ ಸಜ್ಜನರ ಜೀವಿತ ಶೈಲಿ. ಅವರು ಖಡ್ಗ ಮತ್ತು ಈಟಿಗೆ ಭಯಪಡುವವರಲ್ಲ ಹಾಗೂ ಕಪಟತೆಯನ್ನು ಬಹುದೊಡ್ಡ ಪಾಪ ಮತ್ತು ಲಜ್ಜಾಹೀನತೆಯೆಂದು ಭಾವಿಸುವವರಾಗಿದ್ದಾರೆ. ಈ ರೀತಿಯ ಹೀನ ಕೃತ್ಯಗಳು ಅಣುವಿನಷ್ಟಾದರೂ ಅವರಿಂದ ಉಂಟಾದರೆ, ಅವರು ಅಲ್ಲಾಹನೊಡನೆ ಕ್ಷಮೆ ಕೇಳುತ್ತಾ ಅವನ ಮುಂದೆ ಬಾಗುತ್ತಾರೆ. ಹಝ್ರತ್ ಅಬೂಬಕರ್(ರ) ಮತ್ತು ಉಮರ್ ಫಾರೂಖ್(ರ) ಸತ್ಯನಿಷೇಧಿ ಮತ್ತು ಹಕ್ಕುಗಳನ್ನು ಅಪಹರಿಸುವ ವ್ಯಕ್ತಿಗಳಾಗಿರುವರು ಎಂದಾದರೆ, ಇದು ಗೊತ್ತಿದ್ದೂ ಹಝ್ರತ್ ಅಲಿ(ರ) ಅವರ ಕೈಯಲ್ಲಿ ಹೇಗೆ ಬೈಅತ್ ಮಾಡಿದ್ದರು ಎಂದು ಆಶ್ಚರ್ಯವಾಗುತ್ತದೆ. ಎಂದರೆ ಹಝ್ರತ್ ಅಲಿ(ರ) ಅವರಿಬ್ಬರ ಜೊತೆಗೆ ಒಂದು ದೀರ್ಘ ಕಾಲದ ವರೆಗೆ ಇದ್ದರು. ಮಾತ್ರವಲ್ಲ ಅವರು ಪರಿಪೂರ್ಣ ನಿಷ್ಠೆ ಮತ್ತು ವಿಶ್ವಾಸದೊಂದಿಗೆ ಅವರಿಬ್ಬರನ್ನು ಅನುಸರಿಸಿದ್ದರು ಮತ್ತು ಯಾವುದೇ ರೀತಿಯ ದೌರ್ಬಲ್ಯ ಹಾಗೂ ಅನಿಷ್ಟತೆಯನ್ನು ಪ್ರಕಟಿಸಿಯೂ ಇರಲಿಲ್ಲ. ಬೇರೆ ಯಾವುದೇ ಕಾರಣ ಅವರಿಗೆ ಅಡಚಣೆಯಾಗಿ ಬರಲಿಲ್ಲ. ಅವರಿಬ್ಬರ ಸತ್ಯನಿಷೇಧ, ಧರ್ಮಭ್ರಷ್ಟತೆ ಬಗ್ಗೆ ಗೊತ್ತಿದ್ದೂ ಹಝ್ರತ್ ಅಲಿಯ(ರ) ದೇವಭಯ ಮತ್ತು ವಿಶ್ವಾಸ ಹೀಗೆ ಅವರನ್ನು ಅನುಸರಿಸುವುದರಿಂದ ತಡೆಯಲಿಲ್ಲವೆಂದು ಭಾವಿಸಲು ಸಾಧ್ಯವಿಲ್ಲ. ಅದಲ್ಲದೇ ಅವರ ಮತ್ತು ಅರಬ್ ಸಮುದಾಯದ ನಡುವೆ ಮುಚ್ಚಲ್ಪಟ್ಟ ಯಾವುದೇ ಬಾಗಿಲು ಇದ್ದಿರಲಿಲ್ಲ, ಯಾವುದೇ ಹಿರಿದಾದ ತಡೆಯಿರಲಿಲ್ಲ ಮತ್ತು ಅವರನ್ನು ಕೈದಿಯಾಗಿ ಇಟ್ಟಿರಲೂ ಇಲ್ಲ. ಇಂತಹ ಸ್ಥಿತಿಯಲ್ಲಿ ಅರೇಬಿಯಾದ ಪೂರ್ವ ಅಥವಾ ಪಶ್ಚಿಮದ ಯಾವುದಾದರೂ ಪ್ರದೇಶಕ್ಕೆ ವಲಸೆ ಹೋಗಬೇಕಾಗಿತ್ತು. ಎಂದರೆ ಅಂತಹ ಸ್ಥಿತಿಯಾಗಿದ್ದರೆ, ಹಿಜ್ರತ್ ಮಾಡಬಹುದಾಗಿತ್ತು. ಯಾವುದೇ ಒತ್ತಾಯಕ್ಕೆ ಅವರು ಒಳಪಟ್ಟಿರಲಿಲ್ಲ. ವಲಸೆ ಮಾಡಿಕೊಂಡು ಧರ್ಮಭ್ರಷ್ಟ ಮತ್ತು ಸತ್ಯನಿಷೇಧಿಗಳಾದ ಅವರಿಬ್ಬರ ವಿರುದ್ಧ ಯುದ್ಧ ಮಾಡಲು ಜನರನ್ನು ಪ್ರೇರೇಪಿಸಬಹುದಾಗಿತ್ತು. ಮರಳುಗಾಡಿನ ಅರಬರನ್ನು ಯುದ್ಧ ಮಾಡಲು ಪ್ರೇರೇಪಿಸಬಹುದಾಗಿತ್ತು. ತನ್ನ ವಾಕ್ಚಾತುರ್ಯದ ಮೂಲಕ ಜನರನ್ನು ತನ್ನೆಡೆಗೆ ಸೆಳೆಯಬಹುದಾಗಿತ್ತು ಮತ್ತು ಸತ್ಯನಿಷೇಧಿಗಳೊಂದಿಗೆ ಯುದ್ಧ ಮಾಡಬಹುದಾಗಿತ್ತು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಮುಸೈಲಿಮ ಕದ್ಧಾಬ್‌ರೊಂದಿಗೆ ಒಂದು ಲಕ್ಷ ಗ್ರಾಮೀಣ ಅರಬರು ಸೇರಿದ್ದರು. ಹಝ್ರತ್ ಅಲಿಯ ಸಹಾಯಕ್ಕಾಗಿ ಅದಕ್ಕಿಂತ ಜಾಸ್ತಿ ಜನರು ಸಿಗಬಹುದಿತ್ತು. ಇಂತಹ ಯುದ್ಧ ಮಾಡಲು ಹಝ್ರತ್ ಅಲಿ(ರ) ಸರಿಯಾದ ವ್ಯಕ್ತಿಯಾಗಿದ್ದರು. ಹೀಗಿರುವಾಗ ಹಝ್ರತ್ ಅಲಿ(ರ) ಸತ್ಯನಿಷೇಧಿಗಳೊಂದಿಗೆ ಏಕೆ ಸೇರಿದ್ದರು. ಎಂದರೆ ಶಿಯಾ ವಿಭಾಗದವರು ಹೇಳುವಂತೆ ಮೊದಲಿನ ಖಲೀಫರು ಸತ್ಯನಿಷೇಧಿಗಳಾಗಿದ್ದರೆ, ಹಝ್ರತ್ ಅಲಿ(ರ) ಅವರ ವಿರುದ್ಧ ಯುದ್ಧ ಮಾಡದೇ ಅವರೊಂದಿಗೆ ಏಕೆ ಸೇರಿಕೊಂಡಿದ್ದರು ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಂ ಕೇಳುತ್ತಾರೆ. ಹಝ್ರತ್ ಮಸೀಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿ(ರ) ಅಧಿಕಾರಕ್ಕೆ ಬಂದ ನಂತರವೂ ಸುಸ್ತಾದ ಜನರ ಹಾಗೆ ಕುಳಿತುಕೊಂಡರೇ? ಅವರು ಧೀರ ಯೋಧರಂತೆ ಹೋರಾಡದೇ ನಿಂತರೇ? ವಿಜಯ ಮತ್ತು ಔನತ್ಯದ ಎಲ್ಲ ಲಕ್ಷಣಗಳು ಇದ್ದು ಸಹ ಹೋರಾಟ ಮಾಡದಿರಲು ಕಾರಣವೇನು. ಯುದ್ಧ ಮಾಡಲು ಮತ್ತು ಸತ್ಯಕ್ಕೆ ನೆರವು ನೀಡಲು ಜನರನ್ನು ಏಕೆ ಆಮಂತ್ರಿಸಲಿಲ್ಲ. ಅವರು ಸಮುದಾಯದ ಅತ್ಯಂತ ವಾಗ್ಮಿಯಾದ, ವಾಕ್ಪಟುತ್ವ ಹೊಂದಿದ್ದ ಮತ್ತು ಮಾತಿನಲ್ಲಿ ಜೀವತುಂಬುತ್ತಿದ್ದ ವ್ಯಕ್ತಿಯಾಗಿರಲಿಲ್ಲವೇ? ತನ್ನ ವಾಕ್ಚಾತುರ್ಯ ಮತ್ತು ಮನೋಹರವಾದ ಮಾತುಗಳ ಬಲದಿಂದ ಜನರನ್ನು ಒಟ್ಟುಸೇರಿಸುವುದು ಅವರಿಗೆ ಒಂದು ಗಂಟೆಯ ಅಥವಾ ಅದಕ್ಕಿಂತ ಕಡಿಮೆ ಸಮಯದ ಕೆಲಸವಾಗಿತ್ತು. ಸುಳ್ಳುಗಾರರ ಸುತ್ತ ಜನರು ಒಟ್ಟುಗೂಡಿದ್ದರು ಎಂದಾದರೆ, ಅಲ್ಲಾಹನ ಸಿಂಹದ ಸ್ಥಿತಿ ಬೇರೆಯೇ ಆಗಬೇಕಿತ್ತು. ಹಝ್ರತ್ ಅಲಿ(ರ) ಹಿರಿದಾದ ಕೆಲಸ ಮಾಡುವವರೂ ಅಲ್ಲಾಹನ ಸಹಾಯ ಪಡೆದವರೂ ಸರ್ವಲೋಕಗಳ ಪ್ರಭುವಿನ ಪ್ರಿಯರೂ ಆಗಿದ್ದರು. ಹೀಗಿರುವಾಗ, ಹಝ್ರತ್ ಅಲಿ(ರ) ಅವರಿಬ್ಬರ ಬೈಅತ್ ಮಾಡಿದರು ಎಂದು ಮಾತ್ರವಲ್ಲ, ಅವರಿಬ್ಬರ ಎಂದರೆ ಹಝ್ರತ್ ಅಬೂಬಕರ್(ರ) ಮತ್ತು ಹಝ್ರತ್ ಉಮರರ(ರ) ಹಿಂದೆ ಎಲ್ಲ ನಮಾಝ್‌ಗಳನ್ನು ನಿರ್ವಹಿಸುತ್ತಿದ್ದರು. ಯಾವತ್ತೂ ಅವರನ್ನು ವಿರೋಧಿಸಿರಲಿಲ್ಲ, ಅವರಿಬ್ಬರ ಬಗ್ಗೆ ದೂರು ಹೇಳುತ್ತಿರಲಿಲ್ಲ ಮತ್ತು ಅವರಿಂದ ದೂರವಿರಲಿಲ್ಲ. ಹಝ್ರತ್ ಅಲಿ(ರ) ಅವರಿಬ್ಬರ ಸಮಾಲೋಚನೆಯ ಸಭೆಗಳಲ್ಲಿ ಭಾಗವಹಿಸುತ್ತಿದ್ದರು ಮತ್ತು ಅವರಿಬ್ಬರ ವಾದಗಳನ್ನು ಸತ್ಯಪಡಿಸಿದ್ದರು. ತನ್ನ ಎಲ್ಲ ಶಕ್ತಿ ಮತ್ತು ಸಾಮರ್ಥ್ಯದೊಂದಿಗೆ ಅವರಿಬ್ಬರನ್ನು ಸಹಾಯ ಮಾಡಿದ್ದರು. ಎಂದಿಗೂ ಹಿಂದೆ ಸರಿದಿರಲಿಲ್ಲ. ಆದ್ದರಿಂದ ಚಿಂತಿಸಿರಿ ಮತ್ತು ಹೇಳಿರಿ.... ಅವರಿಬ್ಬರೂ ಸುಳ್ಳುಗಾರರು ಎಂದು ಅರಿತುಕೊಂಡು ಹಝ್ರತ್ ಅಲಿ(ರ) ಸುಳ್ಳುಗಾರರನ್ನು ಅನುಸರಿಸಿದರೇ? ಸತ್ಯ ಮತ್ತು ಸುಳ್ಳು ಅವರ ಪ್ರಕಾರ ಒಂದೇ ತರವಾಗಿತ್ತೇ? ಸರ್ವಶಕ್ತನಾದ ಅಲ್ಲಾಹನ ಮೇಲೆ ಭರವಸೆ ಹೊಂದಿರುವ ಜನರು ಒಂದು ಕ್ಷಣಕ್ಕೂ ಕಾಪಟ್ಯದ ಮಾರ್ಗಕ್ಕೆ ಬೆಲೆಕೊಡುವುದಿಲ್ಲವೆಂದು ಹಝ್ರತ್ ಅಲಿಗೆ ಗೊತ್ತಿರಲಿಲ್ಲವೇ? ಅವರು ಸತ್ಯದ ಮಾರ್ಗದಲ್ಲಿ ಸುಡಲ್ಪಟ್ಟರೂ ನಾಶಮಾಡಲ್ಪಟ್ಟರೂ ಪುಡಿಪುಡಿ ಮಾಡಲ್ಪಟ್ಟರೂ ಸರಿ. (ಸಿರ್‍ರುಲ್ ಖಿಲಾಫ, ರೂಹಾನಿ ಖಝಾಇನ್, ಸಂಪುಟ–8, ಪುಟ–349–351, ಉರ್ದು ಅನುವಾದ ಸಿರ್‍ರುಲ್ ಖಿಲಾಫ ಪುಟ–86–91, ಪ್ರಕಾಶನ ನಝಾರತ್ ಇಶಾಅತ್ ರಬ್ವಾಹ್)

ಒಟ್ಟಿನಲ್ಲಿ, ಹಝ್ರತ್ ಅಲಿ(ರ) ಎಂದಿಗೂ ತಮಗಿಂತ ಹಿಂದಿನ ಖಲೀಫರನ್ನು ವಿರೋಧಿಸಿರಲಿಲ್ಲ. ಅವರ ಬೈಅತ್ ಮಾಡಿದ್ದರುಎಂದು ಹಝ್ರತ್ ಮಸೀಹ್ ಮೌಊದ್(ಅ) ಸ್ಪಷ್ಟವಾಗಿ ಹೇಳುತ್ತಾರೆ. ಆದುದರಿಂದ ಹಝ್ರತ್ ಅಬೂಬಕರರ(ರ) ಕೈಯಲ್ಲಿ ಹಝ್ರತ್ ಅಲಿ ರಝಿಯಲ್ಲಾಹುಅನ್‌ಹು ಬೈಅತ್ ಮಾಡಿರಲಿಲ್ಲ ಎಂಬ ನಿಮ್ಮ ಮಾತು (ಶಿಯಾರ ಹೇಳಿಕೆ) ಹಝ್ರತ್ ಅಲಿ ರಝಿಯಲ್ಲಾಹುಅನ್‌ಹುರ ಸ್ಥಾನವನ್ನು ಉನ್ನತ ಗೊಳಿಸುವುದಕ್ಕೆ ಬದಲಾಗಿ ಅವರ ಪದವಿಯನ್ನುತಗ್ಗಿಸುತ್ತದೆ.

ಮೊದಲಿನ ಮೂರುಖಲೀಫರ ಕಾಲದಲ್ಲಿ ಹಝ್ರತ್ ಅಲಿ(ರ) ಮಾಡಿದ್ದ ಸೇವೆಗಳು. ಹಝ್ರತ್ ಪೈಗಂಬರ್(ಸ) ನಿಧನರಾದಾಗ, ಅರೇಬಿಯಾದ ಹಲವು ಗೋತ್ರದವರು ಮುರ್ತದ್ ಆದರು. ಎಂದರೆ ಇಸ್ಲಾಂ ಧರ್ಮವನ್ನು ಉಪೇಕ್ಷಿಸಿದ್ದರು. ಮದೀನದಲ್ಲೂ ಕಪಟವಿಶ್ವಾಸಿಗಳು ಎದ್ದರು. ಬನೂ ಹನೀಫ ಮತ್ತು ಯಮಾಮದ ಹಲವು ಜನರು ಮುಸೈಲಿಮ ಕದ್ಧಾಬ್‌ರೊಂದಿಗೆ ಸೇರಿದರು. ಬನೂ ಅಸದಿನ ಮತ್ತು ಇತರ ಹಲವು ಜನರು ತುಲೈಹ ಅಸದಿಯೊಂದಿಗೆ ಸೇರಿದರು. ಅವನು ಸಹ ಮುಸೈಲಿಮನ ಹಾಗೆ ಪ್ರವಾದಿತ್ವವನ್ನು ವಾದಿಸಿದ್ದನು. ವಿಪತ್ತುಗಳು ವರ್ಧಿಸುತ್ತಾ ಹೋಯಿತು ಮತ್ತು ಸ್ಥಿತಿಗತಿಗಳು ಸಂಕೀರ್ಣವಾಗುತ್ತಿದ್ದುವು. ಹೀಗಿರುವಾಗ ಹಝ್ರತ್ ಅಬೂಬಕರ್(ರ) ಹಝ್ರತ್ ಉಸಾಮರನ್ನು ಸೈನ್ಯದೊಂದಿಗೆ ರವಾನೆ ಮಾಡಿದರು. ಆದಕಾರಣ ಹಝ್ರತ್ ಅಬೂಬಕರರ(ರ) ಬಳಿ ಮದೀನದಲ್ಲಿ ಬಹಳ ಕಡಿಮೆಜನರು ಉಳಿದಿದ್ದರು. ಹಲವಾರು ಮರಳುಗಾಡಿನ ಅರಬರಿಗೆ ಮದೀನವನ್ನು ವಶಪಡಿಸುವ ದುರಾಸೆ ಬಂದಿತ್ತು ಮತ್ತು ಅವರು ಮದೀನದ ಮೇಲೆ ಆಕ್ರಮಣ ನಡೆಸಲು ಸಿದ್ಧತೆ ನಡೆಸಿದರು. ಆಗ ಹಝ್ರತ್ ಅಬೂಬಕರ್(ರ) ಮದೀನಕ್ಕೆ ಪ್ರವೇಶಿಸುವ ಹಲವು ಮಾರ್ಗಗಳಲ್ಲಿ ಕಾವಲುಗಾರರನ್ನು ನಿಶ್ಚಯಿಸಿದರು. ಆ ಕಾವಲುಗಾರರುತಮ್ಮ ಸೈನ್ಯದ ತುಕಡಿಯೊಂದಿಗೆ ಮದೀನದ ಸುತ್ತು ಮುತ್ತಲು ಕಾವಲುಗಾಯುತ್ತಾ ರಾತ್ರಿ ಕಳೆಯುತ್ತಿದ್ದರು. ಆಕಾವಲುಗಾರರ ಮೇಲ್ನೋಟಗಾರರಲ್ಲಿ ಹಝ್ರತ್ ಅಲಿ ಬಿನ್ ಅಬೀ ತಾಲಿಬ್, ಝುಬೇರ್ ಬಿನ್ ಅವಾಮ್, ತಲ್‌ಹ ಬಿನ್ ಅಬ್ದುಲ್ಲಾಹ್, ಸಅದ್ ಬಿನ್ ಅಬೀ ವಖಾಸ್, ಅಬ್ದುರ್‍ರಹ್ಮಾನ್ ಬಿನ್ ಔಫ್ ಮತ್ತು ಅಬ್ದುಲ್ಲಾಹ್ ಬಿನ್ ಮಸ್‌ಊದ್ ಒಳಪಟ್ಟಿದ್ದರು. (ಅಲ್‌ಬಿದಾಯ ವ ನ್ನಿಹಾಯ, ಭಾಗ–7, ಪುಟ–307–308, ದಾರುಲ್ ಕುತುಬ್ ಇಲ್‌ಮಿಯ ಬೈರೂತ್ 2001)

ಎಂದರೆ, ಹಝ್ರತ್ ಅಲಿ(ರ) ಸಹ ಆ ಸಮಯದಲ್ಲಿ ಕಾವಲಿಗಾಗಿ ನಿಶ್ಚಯಿಸಲಾದ ಸೈನ್ಯದ ಸಂಘಗಳಲ್ಲಿ ಒಂದರ ಮೇಲ್ನೋಟಗಾರರಾಗಿದ್ದರು. ಹಝ್ರತ್ ಪೈಗಂಬರ್(ಸ) ನಿಧನರಾದ ವಾರ್ತೆ ಹರಡಿದಾಗ, ಅರೇಬಿಯಾದ ಹೆಚ್ಚಿನ ಗೋತ್ರಗಳು ಮುರ್ತದ್ ಆದರು ಮತ್ತು ಝಕಾತ್ ನೀಡುವುದನ್ನು ನಿರಾಕರಿಸಿದರು. ಇವರೊಡನೆ ಯುದ್ಧ ಮಾಡಲು ಹಝ್ರತ್ ಅಬೂಬಕರ್(ರ) ನಿರ್ಧರಿಸಿದರು. ಅರ್‌ವ ವರದಿ ಮಾಡುತ್ತಾರೆ: ಹಝ್ರತ್ ಅಬೂಬಕರ್(ರ) ಮುಹಾಜಿರರನ್ನು ಮತ್ತು ಅನ್ಸಾರರನ್ನು ಜೊತೆಗೆ ಸೇರಿಸಿಕೊಂಡು ಮದೀನದಿಂದ ರವಾನೆಯಾದರು. ನಜದಿನ ಉನ್ನತ ಪ್ರದೇಶದ ಮುಂದಿರುವ ಒಂದು ನದಿಯ ಬಳಿಗೆ ತಲುಪಿದಾಗ ಗ್ರಾಮೀಣ ಅರಬಿಗಳು ತಮ್ಮ ಕುಟುಂಬ ಸಮೇತ ಅಲ್ಲಿಂದ ಪರಾರಿಯಾದರು. ಸತ್ಯದಲ್ಲಿ, ಅವರು ತಮ್ಮನ್ನು ಮುಸ್ಲಿಮರೆಂದು ವಾದಿಸುತ್ತಿದ್ದರು. ಪರಿಪೂರ್ಣವಾದ ರೀತಿಯಲ್ಲಿ ಮುರ್ತದ್ ಆಗಿರಲಿಲ್ಲ. ಇನ್ನೊಂದು ಕಡೆ ಝಕಾತ್ ಕೊಡಲು ತಯಾರಿರಲಿಲ್ಲ. ಆದ್ದರಿಂದ ಅವರ ವಿರುದ್ಧ ಯುದ್ಧ ಮಾಡಲಾಗಿತ್ತು. ಮುರ್ತದ್ ಆದ ಕಾರಣದಿಂದ ಅವರಿಗೆ ಶಿಕ್ಷೆ ನೀಡಲಾಗುತ್ತಿರಲಿಲ್ಲ. ಮರಳುಗಾಡಿನ ಅರಬಿಗಳು ಪರಾರಿಯಾದಾಗ ಮದೀನದ ಕಡೆಗೆ ಮರಳಿ ಹೋಗಲು ಮತ್ತು ಯಾರನ್ನಾದರೂ ಸೈನ್ಯದ ಅಮೀರರನ್ನಾಗಿ ಮಾಡಲು

ಹಝ್ರತ್ ಅಬೂಬಕರ್‌ರೊಡನೆ(ರ) ಜನರು ಹೇಳಿದರು. ಜನರು ಒತ್ತಾಯಿಸಿದಾಗ, ಹಝ್ರತ್ ಅಬೂಬಕರ್(ರ) ಖಾಲಿದ್ ಬಿನ್ ವಲೀದ್‌ರನ್ನು ಸೈನ್ಯದ ಸೇನಾಧಿಪತಿಯನ್ನಾಗಿ ನಿಶ್ಚಯಿಸಿದರು. ಅವರೊಡನೆ ಹೀಗೆ ಹೇಳಿದರು: ಈ ಗ್ರಾಮೀಣರು ಇಸ್ಲಾಂ ಧರ್ಮವನ್ನು ಸರಿಯಾದ ರೀತಿಯಲ್ಲಿ ಸ್ವೀಕರಿಸಿಕೊಂಡು ಝಕಾತ್ ನೀಡಲು ಒಪ್ಪಿದ ನಂತರ, ಮುಸ್ಲಿಮರ ಸೈನ್ಯದಲ್ಲಿರುವ ಯಾರಾದರೂ ವಾಪಾಸ್ಸು ಮದೀನಕ್ಕೆ ಹೋಗಲು ಇಚ್ಛಿಸುವರಾದರೆ ಮರಳಿ ಬರಲಿ. ಅನಂತರ ಹಝ್ರತ್ ಅಬೂಬಕರ್(ರ) ಮದೀನಕ್ಕೆ ಮರಳಿಹೋದರು.

(ತಾರೀಖ್ ಅಲಖುಲಫಾ, ಪುಟ–61)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಮರ್(ರ) ತಮ್ಮಖಿಲಾಫತ್ ಕಾಲದಲ್ಲಿ, ಕೆಲವು ಯಾತ್ರೆಯ ವೇಳೆಗಳಲ್ಲಿ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ತನ್ನ ಸ್ಥಾನದಲ್ಲಿ ಮದೀನದ ಅಮೀರರನ್ನಾಗಿ ನಿಶ್ಚಯಿಸಿದ್ದರು ಎಂದು ಚರಿತ್ರೆಯಿಂದ ಸಾಬೀತಾಗುತ್ತದೆ. ತಾರೀಖ್ ತಬರಿಯಲ್ಲಿ ಹೀಗೆ ಬರೆಯಲಾಗಿದೆ: ಜಸರ್‌ಘಟನೆಯ ಸಂದರ್ಭದಲ್ಲಿ, ಮುಸ್ಲಿಮರಿಗೆ ಇರಾನೀ ಸೈನ್ಯದ ವಿರುದ್ಧ ಒಂದು ರೀತಿಯ ಪರಾಜಯವುಂಟಾಗಿತ್ತು. ಆಗ ಜನರ ಸಲಹೆಯ ಪ್ರಕಾರ ಇಸ್ಲಾಮಿನ ಸೈನ್ಯದೊಂದಿಗೆ ಇರಾನಿನ ಗಡಿಪ್ರದೇಶಕ್ಕೆ ಸ್ವತಃ ಹೋಗಲು ಹಝ್ರತ್ ಉಮರ್(ರ) ತೀರ್ಮಾನಿಸಿದರು. ಆ ಸಂದರ್ಭದಲ್ಲಿ ಅವರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರನ್ನು ಮದೀನದ ಗವರ್ನರ್ ಆಗಿ ನಿಶ್ಚಯಿಸಿದ್ದರು.

(ಹಕ್ಕುಲ್ ಉಖೀನ್, ಅನ್ವಾರುಲ್ ಉಲೂಮ್, ಸಂಪುಟ–9, ಪುಟ–383–384)

ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಇಸ್ಲಾಮಿಗೆ ಅತ್ಯಂತ ಹಿರಿದಾದ ಮತ್ತು ಭೀಕರ ಪರಾಜಯ ಜಸರ್ ಯುದ್ಧದಲ್ಲಿ ಉಂಟಾಗಿತ್ತು. ಇರಾನಿಯರ ವಿರುದ್ಧ ಮುಸ್ಲಿಮರ ಶಕ್ತಿಶಾಲಿ ಸೈನ್ಯ ಹೊರಟಿತ್ತು. ಇರಾನಿನ ಸೇನಾಧಿಪತಿ ನದಿಯ ಆಚೆ ಕಡೆ ದೊಡ್ಡ ದೊಡ್ಡ ಹೊಂಡಗಳನ್ನು ಮಾಡಿಕೊಂಡು ಸೇನಾ ತುಕಡಿಯನ್ನು ನೇಮಿಸಿದ್ದನು ಮತ್ತು ಮುಸ್ಲಿಮರ ಸೈನ್ಯ ಬರುವುದನ್ನು ಕಾಯುತ್ತಾ ನಿಂತನು. ಇಸ್ಲಾಮಿನ ಸೈನ್ಯ ಆವೇಶದಿಂದ ಆಕ್ರಮಣ ನಡೆಸಿತು ಮತ್ತು ನೂಕುತ್ತಾ ಮುಂದಕ್ಕೆ ಹೊರಟಿತು. ಆದರೆ ಅದು ಇರಾನಿನ ಕಮಾಂಡರಿನ ತಂತ್ರವಾಗಿತ್ತು. ಅವನು ಒಂದು ಸೈನ್ಯವನ್ನು ಬದಿಯಿಂದ ಕಳುಹಿಸಿ ಸೇತುವೆಯನ್ನು ವಶಪಡಿಸಿದನು ಮತ್ತು ಮುಸ್ಲಿಮರ ಮೇಲೆ ಆಕ್ರಮಣ ನಡೆಸಿದನು. ಮುಸ್ಲಿಮರು ಹಿಂದಕ್ಕೆ ಸರಿದರು. ಆದರೆ ಸೇತುವೆಯನ್ನು ಶತ್ರುಗಳು ವಶಪಡಿಸಿದ್ದಾರೆ ಎಂದು ಕಂಡು ಮುಸ್ಲಿಮರು ಹೆದರಿ ಮತ್ತೊಂದು ಕಡೆಗೆ ಹೊರಟರು. ಶತ್ರುಗಳು ತೀವ್ರವಾದ ಆಕ್ರಮಣ ನಡೆಸಿದರು. ಮುಸ್ಲಿಮರಲ್ಲಿ ಹೆಚ್ಚಿನವರು ನದಿಗೆ ಧುಮುಕಲು ನಿರ್ಬಂಧಿತರಾದರು ಮತ್ತು ಅವರೆಲ್ಲರೂ ಶಹೀದ್ ಆದರು. ಮುಸ್ಲಿಮರಿಗೆ ಉಂಟಾದ ಈ ನಷ್ಟದಿಂದ ಮದೀನ ಕೂಡ ನಡುಗಿತು. ಹಝ್ರತ್ ಉಮರ್(ರ) ಮದೀನದವರನ್ನು ಒಟ್ಟುಗೂಡಿಸಿ ಹೀಗೆ ಹೇಳಿದರು: ಈಗ ಮದೀನ ಮತ್ತು ಇರಾನಿನ ಮಧ್ಯೆ ಯಾವುದೇ ತಡೆಯಿಲ್ಲ. ಮದೀನ ಈಗ ಯಾವುದೇ ಸುರಕ್ಷೆಯಿಲ್ಲದಂತಾಗಿದೆ. ಶತ್ರುಗಳು ಕೆಲವು ದಿನಗಳಲ್ಲಿ ಇಲ್ಲಿಗೆ ತಲುಪುವ ಸಾಧ್ಯತೆಯಿದೆ. ಆದ್ದರಿಂದ ನಾನು ಸ್ವತಃ ಕಮಾಂಡರ್ ಆಗಿ ಹೋಗಲು ಇಚ್ಛಿಸುತ್ತೇನೆ. ಇತರ ಜನರು ಈ ತೀರ್ಮಾನವನ್ನು ಇಷ್ಟಪಟ್ಟರು. ಆದರೆ ಹಝ್ರತ್ ಅಲಿ(ರ) ಹೇಳಿದರು: ನೀವು ಶಹೀದ್ ಆದರೆ, ಮುಸ್ಲಿಮರು ಚೆಲ್ಲಾಪಿಲ್ಲಿ ಆಗುವರು. ಅವ್ಯವಸ್ಥೆಯುಂಟಾಗುವುದು. ಆದ್ದರಿಂದ ಬೇರೆ ಯಾರನ್ನಾದರೂ ಕಳುಹಿಸಬೇಕು. ನೀವು ಸ್ವತಃ ಹೋಗಬೇಡಿರಿ. ಹೀಗೆ ಸೀರಿಯದಲ್ಲಿ ರೋಮನ್ನರೊಂದಿಗೆ ಯುದ್ಧ ಮಾಡುವುದರಲ್ಲಿ ನಿರತರಾಗಿದ್ದ ಹಝ್ರತ್ ಸಅದ್‌ರಿಗೆ(ರ) ಹಝ್ರತ್ ಉಮರ್(ರ) ಹೀಗೆ ಪತ್ರ ಬರೆದರು: ನಿಮಗೆ ಸಾಧ್ಯವಿದ್ದಷ್ಟು ಸೈನಿಕರನ್ನು ಕಳುಹಿಸು. ಏಕೆಂದರೆ ಮದೀನ ಈಗ ಪೂರ್ತಿಯಾಗಿ ಅಸುರಕ್ಷಿತೆಯ ಸ್ಥಿತಿಯಲ್ಲಿದೆ. ಶತ್ರುಗಳನ್ನು ಬೇಗನೇ ತಡೆಯದಿದ್ದರೆ, ಅವರು ಮದೀನವನ್ನು ವಶಪಡಿಸುವರು.

(ಮಕ್ಲಿಸ್ ಖುದ್ದಾಮುಲ್ ಅಹ್ಮದಿಯಾ ಕೆ ಸಾಲಾನ ಇಜ್‌ತೆಮಾ...... ಮೇ ಬಾಝ್ ಝರೂರಿ ಹಿದಾಯಾತ್, ಅನ್ವಾರುಲ್ ಉಲೂಮ್, ಸಂಪುಟ–22, ಪುಟ–56–57)

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ ಪಿತೂರಿ ಮತ್ತು ಗಲಭೆ ಉಂಟಾದಾಗ, ಹಝ್ರತ್ ಅಲಿ(ರ) ಅದನ್ನು ನಿರ್ನಾಮ ಮಾಡಲು ಹಝ್ರತ್ ಉಸ್ಮಾನ್‌ರಿಗೆ(ರ) ಪ್ರಾಮಾಣಿಕವಾದ ಸಲಹೆಗಳನ್ನು ನೀಡಿದ್ದರು. ಒಂದು ಸಲ ಹಝ್ರತ್ ಉಸ್ಮಾನ್(ರ) ಹಝ್ರತ್ ಅಲಿಯೊಡನೆ(ರ) ಕೇಳಿದರು: ರಾಜ್ಯದಲ್ಲಿ ಉಂಟಾಗಿರುವ ಗಲಾಟೆ ಮತ್ತು ಕೋಲಾಹಲಗಳ ಯಥಾರ್ಥ ಕಾರಣವೇನು ಮತ್ತು ಅದನ್ನು ಹೇಗೆ ದೂರಮಾಡಲು ಸಾಧ್ಯ? ಹಝ್ರತ್ ಅಲಿ(ರ) ಅತ್ಯಂತ ನಿಷ್ಠೆ ಮತ್ತು ಸ್ವತಂತ್ರವಾಗಿ ಹೀಗೆ ಹೇಳಿದರು: ನಿಮ್ಮ ಕಾರ್ಯಕರ್ತರ ಹದ್ದುಮೀರಿದ ಕಾರ್ಯಗಳೇ ಈಗಿರುವ ಅಸಮಾಧಾನಕ್ಕೆ ಕಾರಣ. ಹಝ್ರತ್ ಉಸ್ಮಾನ್(ರ) ಹೇಳಿದರು: ಕಾರ್ಯಕರ್ತರನ್ನು ಆಯ್ಕೆ ಮಾಡುವುದರಲ್ಲಿ, ಹಝ್ರತ್ ಉಮರ್(ರ) ಗಮನವಹಿಸುತ್ತಿದ್ದ ಅದೇ ವಿಶಿಷ್ಟಗುಣಗಳನ್ನು ನಾನು ಸಹ ಮುಂದಿರಿಸಿದ್ದೆ. ಹೀಗಿದ್ದೂ ಅವರಿಂದ ಇಂತಹ ಅನೀತಿ ನಡೆಯಲು ಕಾರಣವೇನು ಎಂದು ಗೊತ್ತಾಗುತ್ತಿಲ್ಲ. ಹಝ್ರತ್ ಅಲಿ(ರ) ಹೇಳಿದರು: ಹೌದು, ಅದು ಸರಿಯೇ ಆಗಿದೆ. ಆದರೆ ಹಝ್ರತ್ ಉಮರ್(ರ) ಎಲ್ಲದರ ಪೂರ್ತಿಕರಣವನ್ನು ತನ್ನ ಕೈಯಲ್ಲೇ ಇರಿಸಿದ್ದರು. ಅವರ ಹಿಡಿತ ಎಷ್ಟು ಶಕ್ತವಾಗಿತ್ತೆಂದರೆ, ಅರೇಬಿಯಾದ ಅತ್ಯಂತ ಕುಚೇಷ್ಟೆಯ ಒಂಟೆ ಸಹ ಚಡಪಡಿಸಲು ತೊಡಗುತ್ತದೆ. ಅವರು ಬಹಳ ಶಕ್ತವಾದ ಮೇಲ್ನೋಟ ವಹಿಸಿದ್ದರು. ಆದರೆ ನೀವು ಬಹಳ ಹೆಚ್ಚು ಸೌಮ್ಯವಾಗಿ ವರ್ತಿಸುತ್ತೀರಿ. ನಿಮ್ಮ ಕಾರ್ಯಕರ್ತರು ಈ ಸೌಮ್ಯತೆಯಿಂದ ಪ್ರಯೋಜನ ಪಡೆಯುತ್ತಾ ತಮಗೆ ಇಷ್ಟ ಬಂದಂತೆ ವರ್ತಿಸುತ್ತಾರೆ ಮತ್ತು ನಿಮಗೆ ಅದರ ಬಗ್ಗೆ ಗೊತ್ತೇ ಆಗದಂತೆ ನೋಡಿಕೊಳ್ಳುತ್ತಾರೆ. ಅಧಿಕಾರಿಗಳು ಮಾಡುವುದೆಲ್ಲವೂ ಖಿಲಾಫತಿನ ಆಜ್ಞೆಯ ಪ್ರಕಾರವಾಗಿದೆ ಎಂದು ಪ್ರಜೆಗಳು ಭಾವಿಸುತ್ತಾರೆ. ಈ ರೀತಿಯಲ್ಲಿ ಎಲ್ಲ ಅಸಂತುಲಿತ ಸ್ಥಿತಿಗೆ ನೀವೇ ಕಾರಣವೆಂದು ಅವರು ಸಾಮಾನ್ಯ ಜನರು ಭಾವಿಸುತ್ತಾರೆ.

ಮಿಸ್ರಿಯರು ಹಝ್ರತ್ ಉಸ್ಮಾನ್‌ರ(ರ) ಮನೆಯನ್ನು ಸುತ್ತುವರೆದಿದ್ದರು ಮತ್ತುಅವರಿಗೆ ಆಹಾರ ಪಾನೀಯಗಳು ಕೂಡ ಲಭಿಸದಂತೆ ಮಾಡಿಕಠಿಣವಾಗಿ ವರ್ತಿಸಿದ್ದರು. ಹಝ್ರತ್ ಅಲಿ(ರ) ಮುತ್ತಿಗೆ ಹಾಕಿದವರ ಬಳಿಗೆ ಹೋಗಿ ಹೀಗೆ ಹೇಳಿದರು: ನೀವು ಮಾಡಿರುವಂತಹ ಮುತ್ತಿಗೆ ಇಸ್ಲಾಮಿಗೆ ಮಾತ್ರವಲ್ಲ, ಮನುಷ್ಯತ್ವಕ್ಕೆ ವಿರುದ್ಧ ವಾದುದಾಗಿದೆ. ಸತ್ಯನಿಷೇಧಿಗಳು ಕೂಡ ಮುಸ್ಲಿಮರನ್ನು ಸೆರೆಯಿಡುವಾಗ ಆಹಾರ ಮತ್ತು ಪಾನೀಯ ಕೊಡದೇ ಇರುವುದಿಲ್ಲ. ನೀವು ಇಷ್ಟು ಕಠಿಣವಾಗಿ ವರ್ತಿಸಲು ಹಝ್ರತ್ ಉಸ್ಮಾನ್ ನಿಮಗೆ ಯಾವ ನಷ್ಟವನ್ನು ಉಂಟು ಮಾಡಿರುವರು? ಮುತ್ತಿಗೆಗಾರರು ಹಝ್ರತ್ ಅಲಿಯ(ರ) ಶಿಫಾರಸ್ಸಿಗೆ ಯಾವುದೇ ಬೆಲೆ ಕೊಡಲಿಲ್ಲ. ಮುತ್ತಿಗೆಯನ್ನು ಸಡಿಲುಗೊಳಿಸಲು ಕಿಂಚಿತ್ತೂ ತಯಾರಾಗಲಿಲ್ಲ. ಹಝ್ರತ್ ಅಲಿ(ರ) ಕೋಪದಿಂದ ತಮ್ಮ ಮುಂಡಾಸನ್ನು ಎಸೆದು ಕೊಂಡು ಮರಳಿ ಹೋದರು. (ಸೈರುಸ್ಸಹಾಬ, ಸಂಪುಟ–1, ಪುಟ–207–208, ಇಸ್ಲಾಮಿ ಕುತುಬ್ ಖಾನ ಉರ್ದು ಬಝಾರ್ ಲಾಹೋರ್)

ಜನರು ಹಝ್ರತ್ ಉಸ್ಮಾನ್‌ರ ಮನೆಯನ್ನು ಸುತ್ತು ವರೆದುಕೊಂಡು ಅವರಿಗೆ ನೀರು ಕೂಡ ತಲುಪದಂತೆ ಮಾಡಿದರು. ಆಗ ಹಝ್ರತ್ ಉಸ್ಮಾನ್(ರ) ಮೇಲಿಂದ ಇಣುಕಿ ನೋಡಿದರು. ಹಝ್ರತ್ ಉಸ್ಮಾನ್(ರ) ಕೇಳಿದರು: ನಿಮ್ಮೊಂದಿಗೆ ಅಲಿ ಇದ್ದಾರೆಯೇ? ಇಲ್ಲ ಎಂದು ಜನರು ಹೇಳಿದರು. ಅನಂತರ ಸಅದ್ ಇದ್ದಾರೆಯೇ ಎಂದು ಕೇಳಿದರು. ಇಲ್ಲ ಎಂದು ಉತ್ತರ ಕೊಡಲಾಯಿತು. ಅನಂತರ ಸ್ವಲ್ಪ ಸಮಯ ಸುಮ್ಮನೆ ಇದ್ದು ಕೊಂಡು ಹಝ್ರತ್ ಉಸ್ಮಾನ್(ರ) ಕೇಳಿದರು: ನಮಗೆ ನೀರು ತಂದು ಕೊಡಲು ಹಝ್ರತ್ ಅಲಿಯೊಡನೆ(ರ) ಹೇಳಬಲ್ಲವರು ಯಾರಾದರೂ ಇದ್ದಾರೆಯೇ? ಇದರ ಬಗ್ಗೆ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಗೊತ್ತಾದಾಗ, ಅವರು ನೀರು ತುಂಬಿಸಿದ ಮೂರು ಚರ್ಮದ ಚೀಲಗಳನ್ನು ಹಝ್ರತ್ ಉಸ್ಮಾನ್‌ರ(ರ) ಮನೆಗೆ ರವಾನೆ ಮಾಡಿದರು. ಆದರೆ ವಿದ್ರೋಹಿಗಳು ತಡೆಯೊಡ್ಡಿದ್ದ ಕಾರಣದಿಂದ ಈ ಚೀಲಗಳು ಹಝ್ರತ್ ಉಸ್ಮಾನ್‌ರ(ರ) ಮನೆಗೆ ತಲುಪುತ್ತಿರಲಿಲ್ಲ. ಈ ತೊಗಲ ಚೀಲಗಳನ್ನು ತಲುಪಿಸುವ ಪ್ರಯತ್ನದಲ್ಲಿ ಬನೂ ಹಾಶಿಂ ಮತ್ತು ಬನೂ ಉಮಯ್ಯದ ಹಲವಾರು ಗುಲಾಮರು ಗಾಯಗೊಂಡರು. ಆದಾಗ್ಯೂ ಕೊನೆಗೆ ಹಝ್ರತ್ ಉಸ್ಮಾನ್‌ರ(ರ) ಮನೆಗೆ ನೀರನ್ನು ತಲುಪಿಸಲಾಯಿತು.

ಹಝ್ರತ್ ಉಸ್ಮಾನ್‌ರನ್ನು(ರ) ಕೊಲ್ಲುವ ಸಿದ್ಧತೆ ನಡೆಯುತ್ತಿದೆ ಎಂದು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರಿಗೆ ಗೊತ್ತಾದಾಗ, ಅವರು ತಮ್ಮ ಮಕ್ಕಳಾದ ಇಮಾಂ ಹಸನ್ ಮತ್ತು ಇಮಾಂ ಹುಸೈನ್‌ರೊಡನೆ ಹೇಳಿದರು: ನಿಮ್ಮ ಖಡ್ಗಗಳನ್ನು ತೆಗೆದುಕೊಂಡು ಹಝ್ರತ್ ಉಸ್ಮಾನ್‌ರ(ರ) ಮನೆಬಾಗಿಲಿನ ಮುಂದೆ ನಿಂತುಕೊಳ್ಳಿರಿ ಮತ್ತು ಯಾವನೇ ದಂಗೆಗಾರನು ಅವರ ಬಳಿಗೆ ತಲುಪದಂತೆ ನೋಡಿಕೊಳ್ಳಿರಿ. ಇದನ್ನು ನೋಡಿಕೊಂಡು ವಿದ್ರೋಹಿಗಳು ಹಝ್ರತ್ ಉಸ್ಮಾನ್‌ರ ಮನೆಯ ಬಾಗಿಲ ಮೇಲೆ ಬಾಣ ಹೂಡಲು ಶುರುಮಾಡಿದರು. ಇದರಿಂದ ಹಝ್ರತ್ ಹಸನ್ ಮತ್ತು ಮುಹಮ್ಮದ್ ಬಿನ್ ತಲ್‌ಹ ರಕ್ತಸಿಕ್ತರಾದರು. ಇದೇ ವೇಳೆ ಮುಹಮ್ಮದ್ ಬಿನ್ ಅಬೂಬಕರ್(ರ) ಇಬ್ಬರು ಸಂಗಡಿಗರೊಡನೆ ಅನ್ಸಾರರೊಬ್ಬರ ಮನೆಯ ಕಡೆಯಿಂದ ಹಝ್ರತ್ ಉಸ್ಮಾನ್‌ರ(ರ) ಮನೆಯೊಳಗೆ ಮೇಲಿಂದ ಜಿಗಿದು ಪ್ರವೇಶಿಸಿದನು ಮತ್ತು ಹಝ್ರತ್ ಉಸ್ಮಾನ್‌ರನ್ನು(ರ) ಶಹೀದ್ ಮಾಡಿದನು. ಹಝ್ರತ್ ಅಲಿಗೆ(ರ) ಈ ಸುದ್ದಿ ತಲುಪಿದಾಗಅವರು ಬಂದು ನೋಡಿದರು. ಹಝ್ರತ್ ಉಸ್ಮಾನ್(ರ) ನಿಜವಾಗಿಯೂ ಶಹೀದ್ ಆಗಿರುವುದಾಗಿ ಕಂಡರು. ಹಝ್ರತ್ ಅಲಿ(ರ) ತಮ್ಮ ಮಕ್ಕಳೊಡನೆ ಕೇಳಿದರು: ನೀವು ಬಾಗಿಲಿನ ಮುಂದೆ ಕಾವಲು ನಿಂತುಕೂಡ ಹಝ್ರತ್ ಉಸ್ಮಾನ್(ರ) ಹೇಗೆ ಶಹೀದ್ ಆದರು? ಹೀಗೆ ಕೇಳಿ ಅವರು ಹಝ್ರತ್ ಹಸನ್‌ರ ಕೆನ್ನೆಗೆ ಹೊಡೆದರು ಮತ್ತು ಹಝ್ರತ್ ಹುಸೈನ್‌ರ ಎದೆಗೆ ಹೊಡೆದರು. ಮುಹಮ್ಮದ್ ಬಿನ್ ತಲ್‌ಹ ಮತ್ತು ಅಬ್ದುಲ್ಲಾಹ್ ಬಿನ್

ಝುಬೇರ್‌ರನ್ನು ಬೈದರು ಹಾಗೂ ಕೋಪಗೊಂಡು ಅಲ್ಲಿಂದ ಹೊರಟು ಹೋದರು. (ತಾರೀಖುಲ್ ಖಿಲಫಾ, ಪುಟ–123–124, ದಾರುಲ್ ಕುತುಬ್ ಅಲ್‌ಅರಬಿ ಬೈರೂತ್ ಲೆಬನಾನ್ 1999)

ಶಿದಾದ್ ಬಿನ್ ಔಸ್ ವರದಿ ಮಾಡುತ್ತಾರೆ: ಯೌಮುದ್ದಾರ್‌ನಂದು ಹಝ್ರತ್ ಉಸ್ಮಾನ್‌ರ ಮನೆಯ ಮುಂದೆ ನಡೆಸಲಾದ ಮುತ್ತಿಗೆ ತೀವ್ರಗೊಂಡಾಗ ಹಝ್ರತ್ ಉಸ್ಮಾನ್(ರ) ಜನರನ್ನು ಇಣುಕಿ ನೋಡಿದರು. ಹಝ್ರತ್ ಉಸ್ಮಾನ್‌ರ ಮನೆಗೆ ಮುತ್ತಿಗೆ ಮಾಡಿಕೊಂಡು ಯಾವುದೇ ದಾಕ್ಷಿಣ್ಯ ವಿಲ್ಲದೇ ಅವರನ್ನು ಶಹೀದ್ ಮಾಡಿದ್ದ ದಿನವನ್ನು ಯೌಮುದ್ದಾರ್ ಎಂದು ಹೇಳಲಾಗುತ್ತದೆ. ಹಝ್ರತ್ ಉಸ್ಮಾನ್(ರ) ಜನರನ್ನು ಇಣುಕಿ ಹೇಳಿದರು: ಹೇ ಅಲ್ಲಾಹನದಾಸರೇ, ವರದಿಗಾರ ಹೇಳುತ್ತಾರೆ: ಆ ವೇಳೆಯಲ್ಲಿ ಹಝ್ರತ್ ಅಲಿ(ರ) ತನ್ನ ಮನೆಯಿಂದ ಹೊರಗೆ ಹೋಗುತ್ತಿದ್ದರು. ಅವರು ಹಝ್ರತ್ ಪೈಗಂಬರರ(ಸ) ಮುಂಡಾಸು ಧರಿಸಿದ್ದರು ಮತ್ತು ತನ್ನ ಖಡ್ಗವನ್ನು ಸೊಂಟದಲ್ಲಿ ತೂಗುಹಾಕಿದ್ದರು. ಅವರ ಮುಂದೆ ಮುಹಾಜಿರರ ಮತ್ತು ಅನ್ಸಾರರ ಕೂಟವಿತ್ತು. ಅವರಲ್ಲಿ ಹಝ್ರತ್ ಹಸನ್ ಮತ್ತು ಹಝ್ರತ್ ಅಬ್ದುಲ್ಲಾಹ್ ಬಿನ್ ಉಮರ್ ಸಹ ಇದ್ದರು. ಅವರೆಲ್ಲರೂ ಸೇರಿಕೊಂಡು ವಿದ್ರೋಹಿಗಳ ಮೇಲೆ ಆಕ್ರಮಣ ನಡೆಸಿಕೊಂಡು ಅವರನ್ನು ಅಲ್ಲಿಂದ ಓಡಿಸಿದರು. ಅನಂತರ ಅವರು ಹಝ್ರತ್ ಉಸ್ಮಾನ್‌ರ(ರ) ಮನೆಯೊಳಗೆ ಪ್ರವೇಶಿಸಿದರು. ಹಝ್ರತ್ ಅಲಿ(ರ) ಹೇಳಿದರು: ಹೇ ಅಮೀರಲ್ ಮೂಮಿನೀನ್ ನಿಮ್ಮ ಮೇಲೆ ಶಾಂತಿ ಇರಲಿ. ಹಝ್ರತ್ ಪೈಗಂಬರರ(ಸ) ದೀನಿಗೆ ಉನ್ನತಿ ಮತ್ತು ಸುದೃಢತೆ ಲಭಿಸಿದಾಗ, ಅವರು ಸತ್ಯವಿಶ್ವಾಸಿಗಳೊಂದಿಗೆ ಸೇರಿಕೊಂಡು ಸತ್ಯನಿಷೇಧಿಗಳ ವಿರುದ್ಧಯುದ್ಧ ಮಾಡಿದ್ದರು. ಅಲ್ಲಾಹನಾಣೆ, ಈ ಜನರು ನಿಮ್ಮನ್ನು ಖಂಡಿತ ಕೊಲ್ಲುವರು ಎಂದು ನನಗೆ ಅನಿಸುತ್ತಿದೆ. ಆದ್ದರಿಂದ ನಮಗೆ ಇವರ ವಿರುದ್ಧ ಯುದ್ಧ ಮಾಡಲು ಆಜ್ಞಾಪಿಸಿರಿ. ಆಗ ಹಝ್ರತ್ ಉಸ್ಮಾನ್(ರ) ಹೇಳಿದರು: ಅಲ್ಲಾಹನನ್ನು ಸತ್ಯವೆಂದು ನಂಬುವ ಮತ್ತು ನನಗೆ ಅವನ ಮೇಲೆ ಹಕ್ಕಿದೆ ಎಂದು ಸಮ್ಮತಿಸುವ ಪ್ರತಿಯೊಬ್ಬ ವ್ಯಕ್ತಿಯೊಡನೆ ನಾನು ಅಲ್ಲಾಹನ ಹೆಸರಲ್ಲಿ ಹೇಳುತ್ತೇನೆ: ಮೀನಿನ ಒಂದು ಮುಳ್ಳಿನಷ್ಟು ಕೂಡಯಾವನೇ ವ್ಯಕ್ತಿಯರಕ್ತವನ್ನು ನನ್ನ ಸಲುವಾಗಿ ಹರಿಸಬೇಡಿರಿ. ಹಝ್ರತ್ ಅಲಿ(ರ) ಪುನಃ ವಿನಂತಿಸಿದರು. ಆಗ ಹಝ್ರತ್ ಉಸ್ಮಾನ್(ರ) ಅದೇ ಉತ್ತರವನ್ನು ಕೊಟ್ಟರು. ವರದಿಗಾರ ಹೇಳುತ್ತಾರೆ: ಅನಂತರ ಹಝ್ರತ್ ಅಲಿ(ರ) ಹಝ್ರತ್ ಉಸ್ಮಾನ್‌ರ(ರ) ಮನೆಯಿಂದ ಹೊರಡುವುದಾಗಿ ನಾನು ಕಂಡೆನು. ಅವರು ಹೀಗೆ ಹೇಳುತ್ತಿದ್ದರು: ಹೇ ಅಲ್ಲಾಹ್, ನಾವು ನಮಗೆ ಸಾಧ್ಯವಾದ ಎಲ್ಲ ಪ್ರಯತ್ನವನ್ನು ಮಾಡಿದ್ದೇವೆ ಎಂದು ನಿನಗೆ ಗೊತ್ತು. ಅನಂತರಅವರು ಮಸ್ಜಿದ್ ನಬವೀಗೆ ಹೋದರು. ನಮಾಝಿನ ಸಮಯವಾಗಿತ್ತು. ಜನರು ಅವರೊಡನೆ ಹೇಳಿದರು: ಹೇ ಅಬುಲ್ ಹಸನ್ ಮುಂದಕ್ಕೆ ಹೋಗಿ ನಮಾಝಿನ ಇಮಾಮತ್ ವಹಿಸಿರಿ. ಖಲೀಫರು ಬಂಧನದ ಸ್ಥಿತಿಯಲ್ಲಿರುವಾಗ ನನಗೆ ನಿಮಗಾಗಿ ಇಮಾಮತ್ ವಹಿಸಲು ಸಾಧ್ಯವಲ್ಲ. ಆದ್ದರಿಂದ ನಾನು ಒಬ್ಬಂಟಿಗನಾಗಿ ನಮಾಝ್ ನಿರ್ವಹಿಸುವೆನು. ಹೀಗೆ ಅವರು ಒಬ್ಬಂಟಿಯಾಗಿ ನಮಾಝ್ ನಿರ್ವಹಿಸಿ ಮರಳಿ ಹೋದರು. ಹಝ್ರತ್ ಅಲಿಯ(ರ) ಮಗನು ಬಂದು ಅವರೊಡನೆ ಹೇಳಿದರು: ಹೇ ನನ್ನ ಪಿತಾ, ಅಲ್ಲಾಹನಾಣೆ ವಿರೋಧಿಗಳು ಹಝ್ರತ್ ಉಸ್ಮಾನ್‌ರ(ರ) ಮನೆಯ ಮೇಲೆ ಆಕ್ರಮಣ ನಡೆಸಿದ್ದಾರೆ. ಹಝ್ರತ್ ಅಲಿ(ರ) ಹೇಳಿದರು: **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನಾಣೆ ಅವರು ಹಝ್ರತ್ ಉಸ್ಮಾನ್‌ರನ್ನು(ರ) ಕೊಲ್ಲುವರು. ಜನರು ಹಝ್ರತ್ ಅಲಿಯೊಡನೆ(ರ) ಕೇಳಿದರು: ಹಝ್ರತ್ ಉಸ್ಮಾನ್(ರ) ಶಹೀದ್ ಆದ ನಂತರ ಎಲ್ಲಿರುವರು? ಅಲ್ಲಾಹನಾಣೆ ಸ್ವರ್ಗದಲ್ಲಿ ಎಂದು ಹಝ್ರತ್ ಅಲಿ(ರ) ಹೇಳಿದರು. ಹಝ್ರತ್ ಉಸ್ಮಾನ್‌ರನ್ನು(ರ) ಶಹೀದ್ ಮಾಡಿದವರು ಎಲ್ಲಿರುವರು ಎಂದು ಜನರು ಕೇಳಿದರು. ಅಲ್ಲಾಹನಾಣೆ ನರಕದಲ್ಲಿ ಎಂದು ಹಝ್ರತ್ ಅಲಿ(ರ) ಹೇಳಿದರು. ಹೀಗೆ ಅವರು ಮೂರು ಬಾರಿ ಹೇಳಿದರು.

(ರಿಯಾಝುನ್ನಝುರಹ್ ಫೀ ಮನಾಖಿಬುಲ್ ಸಶ್ರಹ್ ಸಂಪುಟ–3, ಪುಟ–68–69, ಭಾಗ–3, ದಾರುತ್ತಿಬುಲ್ ಇಲ್‌ಮಿಯ 1984)

ವಿದ್ರೋಹಿಗಳು ಮದೀನದ ಮೇಲೆ ಮುತ್ತಿಗೆ ಹಾಕಿದ ಸಂದರ್ಭದಲ್ಲಿ ಉಂಟಾದ ಸ್ಥಿತಿಗಳ ಬಗ್ಗೆ ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಮಿಸ್ರಿನ ಜನರು ಹಝ್ರತ್ ಅಲಿಯ(ರ) ಬಳಿಗೆ ಹೋದರು. ಹಝ್ರತ್ ಅಲಿ(ರ) ಆ ಸಮಯದಲ್ಲಿ ಮದೀನದ ಹೊರಗೆ ಒಂದು ಸೈನ್ಯದ ತುಕಡಿಯ ನೇತೃತ್ವವನ್ನು ವಹಿಸುತ್ತಿದ್ದರು. ವಿದ್ರೋಹಿಗಳನ್ನು ನಾಶಪಡಿಸಲು ತಯಾರಾಗಿ ನಿಂತಿದ್ದರು. ಈ ಜನರು ಹಝ್ರತ್ ಅಲಿಯ(ರ) ಬಳಿಗೆ ಬಂದು ಹೇಳಿದರು: ಅವ್ಯವಸ್ಥೆಯ ಕಾರಣದಿಂದ ಈಗ ಹಝ್ರತ್ ಉಸ್ಮಾನ್(ರ) ಖಿಲಾಫತಿಗೆ ಯೋಗ್ಯರಲ್ಲ. ನಾವು ಅವರನ್ನು ಪದಚ್ಯುತಿಗೊಳಿಸಲು ಬಂದಿದ್ದೇವೆ. ನೀವು ಅವರ ನಂತರ ಈ ಹುದ್ದೆಯನ್ನು ಸ್ವೀಕರಿಸುವಿರಿ ಎಂದು ಪ್ರತೀಕ್ಷಿಸುತ್ತೇವೆ. ಕಪಟವಿಶ್ವಾಸಿಗಳ ಈ ಮಾತನ್ನು ಕೇಳಿದ ಹಝ್ರತ್ ಅಲಿ(ರ) ಧಾರ್ಮಿಕ ಆವೇಶದಿಂದ ಈ ಜನರಿಗೆ ಛೀಮಾರಿ ಹಾಕುತ್ತಾ ಬಹಳ ಕಠಿಣವಾಗಿ ಅವರೊಡನೆ ವರ್ತಿಸಿದರು ಮತ್ತು ಹೀಗೆ ಹೇಳಿದರು: **ಧುಲ್‌ಮರ್‌ವ** ಮತ್ತು **ಧುಖುಶಬ್**‌ನಲ್ಲಿ ಡೇರೆ ಹಾಕುವ ಜನರ ಮೇಲೆ ಹಝ್ರತ್ ಪೈಗಂಬರ್(ಸ) ಭವಿಷ್ಯವಾಣಿಯ ರೂಪದಲ್ಲಿ ಶಾಪ ಪ್ರಾರ್ಥನೆ ಮಾಡಿದ್ದರು. ಆದ್ದರಿಂದ ಅಲ್ಲಾಹನು ನಿಮ್ಮನ್ನು ಶಿಕ್ಷಿಸಲಿ. ನೀವು ಮರಳಿ ಹೋಗಿರಿ. ಆಗ ಅವರು 'ಸರಿ, ನಾವು ಮರಳಿಹೋಗುವೆವು' ಎಂದು ಹೇಳಿ ಮರಳಿಹೋದರು. ಈ ಜನರು ಅಲ್ಲೇ ಡೇರೆ ಹಾಕಿ ತಂಗಿದ್ದರು. (ಇಸ್ಲಾಮ್ ಮೇ ಇಖ್ತೆಲಾಫಾತ್ ಕಾ ಆಘಾಝ್, ಅನ್ವಾರುಲ್ ಉಲೂಮ್, ಸಂಪುಟ–4, ಪುಟ–299)

ಹಝ್ರತ್ ಉಸ್ಮಾನ್‌ರ(ರ) ಶಹಾದತ್ ಮತ್ತು ಅದರ ನಂತರ ಹಝ್ರತ್ ಅಲಿಯ(ರ) ಖಿಲಾಫತಿನ ಬೈಅತ್ ಬಗ್ಗೆ ಹಿಂದೆ ಒಂದು ಬಾರಿ ವಿಶದವಾಗಿ ಪ್ರಸ್ತಾಪಿಸಿದ್ದೇನೆ. ಹೇಗಿದ್ದರೂ ಈಗ ನಾನು ಸಂಕ್ಷೇಪವಾಗಿ ಈ ಘಟನೆಯನ್ನು ಹೇಳುತ್ತೇನೆ. ಹಝ್ರತ್ ಉಸ್ಮಾನ್(ರ) ಶಹೀದ್ ಆದಾಗ ಎಲ್ಲರೂ ಹಝ್ರತ್ ಅಲಿಯ(ರ) ಬಳಿಗೆ ಓಡುತ್ತಾ ಬಂದರು. ಅವರಲ್ಲಿ ಸಹಾಬರು ಮತ್ತು ಇತರ ಜನರು ಸಹ ಇದ್ದರು. ಹಝ್ರತ್ ಅಲಿ(ರ) ಅಮೀರುಲ್ ಮೂಮಿನೀನ್ ಆಗಿರುವರು ಎಂದು ಎಲ್ಲರೂ ಹೇಳುತ್ತಿದ್ದರು. ಅವರೆಲ್ಲರೂ ಹಝ್ರತ್ ಅಲಿಯ(ರ) ಮನೆಗೆ ಹೋಗಿ ಹೀಗೆ ಹೇಳಿದರು: ನಾವು ನಿಮ್ಮ ಕೈಯಲ್ಲಿ ಬೈಅತ್ ಮಾಡುವೆವು, ನೀವು ನಿಮ್ಮ ಕೈಯನ್ನು ಚಾಚಿರಿ. ಏಕೆಂದರೆ ನೀವು ಈ ಹುದ್ದೆಗೆ ಎಲ್ಲರಿಗಿಂತ ಅರ್ಹರಾಗಿದ್ದೀರಿ. ಆಗ ಹಝ್ರತ್ ಅಲಿ(ರ) ಹೇಳಿದರು: ಇದು ನಿಮ್ಮ ಕೆಲಸವಲ್ಲ. ಬದರೀ ಸಹಾಬರ ಕೆಲಸವಾಗಿದೆ. ಆದ್ದರಿಂದ ಯಾರ ಬಗ್ಗೆ ಬದರೀ ಸಹಾಬರು ಸಂತೃಪ್ತಿ ಪ್ರಕಟಿಸುತ್ತಾರೋ ಅವರೇ ಖಲೀಫರಾಗುವರು. ಹಝ್ರತ್ ಅಲಿ(ರ) ಕೇಳಿದರು: ತಲ್‌ಹ ಮತ್ತು ಝುಬೇರ್ ಎಲ್ಲಿದ್ದಾರೆ? ಅನಂತರ ಮೊತ್ತಮೊದಲು ಹಝ್ರತ್ ತಲ್‌ಹ(ರ) ಬಾಯಿಮಾತಿನ ಬೈಅತ್ ಮಾಡಿದರು ಮತ್ತು ಹಝ್ರತ್ ಸಅದ್(ರ) ಮೊತ್ತಮೊದಲು ಹಝ್ರತ್ ಅಲಿಯ(ರ) ಕೈಯಲ್ಲಿ ಬೈಅತ್ ಮಾಡಿದರು. ಇದರ ನಂತರ ಹಝ್ರತ್ ಅಲಿ(ರ) ಮಸೀದಿಯ ಕಡೆಗೆ ಹೊರಟರು ಮತ್ತು ಮಿಂಬರಿನ ಮೇಲೆ ಹತ್ತಿದ್ದರು. ಹಝ್ರತ್ ಅಲಿಗಾಗಿ ಮಿಂಬರಿಗೆ ಹತ್ತಿದ ಮೊದಲ ವ್ಯಕ್ತಿ ಹಝ್ರತ್ ತಲ್‌ಹ(ರ) ಆಗಿದ್ದರು. ಅವರು ಬೈಅತ್ ಮಾಡಿದರು. ಅವರ ನಂತರ ಹಝ್ರತ್ ಝುಬೇರ್(ರ) ಬೈಅತ್ ಮಾಡಿದರು. ಅನಂತರ ಇತರ ಸಹಾಬಿಯರು ಬೈಅತ್ ಮಾಡಿದರು. (ಅಸದುಲ್‌ಗಾಬ ಫೀ ಮಾರಿಫತಿಸ್ಸಹಾಬ ಲಿಇಬ್ನೆ ಅಸೀರ್, ಸಂಪುಟ–4, ಪುಟ–107, ದಾರುಲ್ ಕುತುಬ್ ಇಲ್‌ಮಿಯ ಲೆಬನಾನ್ 2008)

ಹಝ್ರತ್ ಉಸ್ಮಾನ್‌ರ(ರ) ಶಹಾದತಿನ ನಂತರದ ಘಟನೆಗಳನ್ನು ಪ್ರಸ್ತಾಪಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಉಸ್ಮಾನ್‌ರನ್ನು(ರ) ಶಹೀದ್ ಮಾಡಲಾದಾಗ, ಕಲಹಗಾರರು ಬೈತುಲ್ ಮಾಲ್‌ನನ್ನು ಲೂಟಿ ಮಾಡಿದರು. ವಿರೋಧಿಸುವವರನ್ನು ಕೊಲ್ಲಲಾಗುವುದು ಎಂದು ಗಲಭೆಗಾರರು ಘೋಷಿಸಿದರು. ಜನರನ್ನು ಒಟ್ಟುಸೇರಲು ಅವರು ಬಿಡುತ್ತಿರಲಿಲ್ಲ. ಇಂದಿನ ಕಾಲದಲ್ಲಿ 144 ತಡೆಯಾಜ್ಞೆ ಘೋಷಿಸುವ ರೀತಿಯಲ್ಲಿ ಮಾಡಿದ್ದರು. ಮದೀನದಲ್ಲಿ ಅವರು ಕಠಿಣವಾದ ಮುತ್ತಿಗೆ ಹಾಕಿದ್ದರು. ಯಾರನ್ನು ಹೊರಗೆ ಹೋಗಲು ಬಿಡುತ್ತಿರಲಿಲ್ಲ. ಕರ್ಫ್ಯೂ ಹಾಕಲಾಗುವ ರೀತಿಯಲ್ಲಿ ಮಾಡಲಾಗಿತ್ತು. ಶಿಯಾರು ಯಾರನ್ನು ಪ್ರೀತಿಸುತ್ತಿದ್ದಾರೆ ಎಂದು ವಾದಿಸುತ್ತಾರೋ ಆ ಹಝ್ರತ್ ಅಲಿಯನ್ನು(ರ) ಸಹ ತಡೆಯಲಾಗಿತ್ತು. ಮದೀನದಲ್ಲಿ ಬಹಳ ಲೂಟಿ ಮತ್ತು ಸುಲಿಗೆ ನಡೆಯಿತು. ಒಂದು ಕಡೆ ಈ ಸ್ಥಿತಿ ಇರುವಾಗ, ಮತ್ತೊಂದೆಡೆ ವಿದ್ರೋಹಿಗಳು ತಮ್ಮ ಕೊಳಕು ಹೃದಯದ ಸ್ಥಿತಿಯನ್ನು ಪ್ರಕಟಿಸಿದರು. ಹಝ್ರತ್ ಪೈಗಂಬರ್(ಸ) ತುಂಬಾ ಪ್ರಶಂಸಿಸಿದ್ದಹಝ್ರತ್ ಉಸ್ಮಾನ್‌ರಂಥ(ರ) ಪರಿಶುದ್ಧ ಮನುಷ್ಯನನ್ನು ಕೊಂದ ನಂತರವೂ ಸುಮ್ಮನೆ ಬಿಡಲಿಲ್ಲ. ಅವರ ಮೃತದೇಹವನ್ನು ಮೂರು ನಾಲ್ಕು ದಿನಗಳ ತನಕ ದಫನ್ ಮಾಡಲು ಬಿಡಲಿಲ್ಲ. ಕೊನೆಗೆ ಕೆಲವು ಸಹಾಬಿಯರು ಸೇರಿಕೊಂಡು ರಾತ್ರಿ ಸಮಯದಲ್ಲಿ ರಹಸ್ಯವಾಗಿ ಅವರ ಮೃತದೇಹವನ್ನು ದಫನ್ ಮಾಡಿದ್ದರು. ಹಝ್ರತ್ ಉಸ್ಮಾನ್‌ರೊಂದಿಗೆ(ರ) ಕೆಲವು ಗುಲಾಮರು ಸಹ ಶಹೀದ್ ಆಗಿದ್ದರು. ಅವರ ಮೃತದೇಹವನ್ನು ದಫನ್ ಮಾಡುವುದರಿಂದ ತಡೆದರು. ನಾಯಿಗಳ ಮುಂದೆ ಹಾಕಿದರು. ಹಝ್ರತ್ ಉಸ್ಮಾನ್(ರ) ಮತ್ತು ಗುಲಾಮರೊಂದಿಗೆ ಈ ರೀತಿಯಾಗಿ ವರ್ತಿಸಿದ ನಂತರ ಗಲಭೆಗಾರರು ತಮಗೆ ವಿರೋಧವಿಲ್ಲದ ಜನರನ್ನು ಬಿಡುಗಡೆಗೊಳಿಸಿದರು. ಹೀಗೆ ಸಹಾಬರು ಅಲ್ಲಿಂದ ಓಡಿಹೋಗಲು ಶುರುಮಾಡಿದರು. ಐದು ದಿನಗಳು ಹೀಗೆಯೇ ಕಳೆದುಹೋದವು. ಮದೀನಕ್ಕೆ ಆಡಳಿತಗಾರರಾಗಿ ಯಾರು ಇರಲಿಲ್ಲ. ಯಾರನ್ನಾದರೂ ಸ್ವತಃ ಖಲೀಫರನ್ನಾಗಿ ಮಾಡಿಕೊಂಡು ತಮಗೆ ಇಷ್ಟಬಂದಂತೆ ಅವರಿಂದ ಕೆಲಸ ಮಾಡಿಸಲು ಗಲಭೆಗಾರರು ಪ್ರಯತ್ನಿಸುತ್ತಿದ್ದರು. ಆದರೆ ಹಝ್ರತ್ ಉಸ್ಮಾನ್‌ರನ್ನು(ರ) ಕೊಂದವರಲ್ಲಿ ಯಾರಾದರೂ ಖಲೀಫರಾಗುವುದನ್ನು ಸಹಾಬಿಯರಿಂದ ಸಹಿಸಲು ಸಾಧ್ಯವಿರಲಿಲ್ಲ. ಗಲಭೆಗಾರರು ಹಝ್ರತ್ ಅಲಿ(ರ), ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರರ(ರ) ಬಳಿಗೆ ಹೋದರು. ಅವರೊಡನೆ

ಖಲೀಫರಾಗಲು ಹೇಳಿದರು. ಆದರೆ ಅವರು ನಿರಾಕರಿಸಿದರು. ಇವರು ಮೂವರು ಮಹಾ ಪುರುಷರು ಇರುವಾಗ ಬೇರೆ ಯಾರನ್ನೂ ಖಲೀಫರನ್ನಾಗಿ ಸ್ವೀಕರಿಸಲು ಮುಸ್ಲಿಮರು ಸಹ ತಯಾರಾಗಿರಲಿಲ್ಲ. ಗಲಭೆಗಾರರು ಮೂವರನ್ನು ಒತ್ತಾಯಪಡಿಸಲು ತೊಡಗಿದರು.ಏಕೆಂದರೆ, ಯಾರೂ ಖಲೀಫರಾಗದಿದ್ದರೆ, ಇಸ್ಲಾಮೀ ಲೋಕದ ಎಲ್ಲರೂ ನಮ್ಮ ವಿರುದ್ಧ ಅತಿಶಕ್ತವಾಗಿ ನಿಲ್ಲುವರು ಎಂಬ ಭಯ ಗಲಭೆಗಾರರಿಗೆ ಉಂಟಾಯಿತು. ಎರಡು ದಿನಗಳೊಳಗೆ ಯಾರಾದರೂ ಖಲೀಫರಾದರೆ ಉತ್ತಮ, ಇಲ್ಲದಿದ್ದರೆ ನಾವು ಅಲಿ, ತಲ್‌ಹ, ಝುಬೇರ್ ಮತ್ತು ಎಲ್ಲ ಶ್ರೇಷ್ಠ ಜನರನ್ನು ಕೊಲ್ಲುವೆವು ಎಂದು ಗಲಭೆಗಾರರು ಘೋಷಿಸಿದರು. ಹಝ್ರತ್ ಉಸ್ಮಾನ್‌ರನ್ನು ಕೊಲೆ ಮಾಡಿದ ಈ ಜನರು ನಮ್ಮೊಡನೆ ಮತ್ತು ನಮ್ಮ ಪತ್ನಿ ಮಕ್ಕಳೊಡನೆ ಹೇಗೆ ವರ್ತಿಸುವರು ಎಂಬ ಬಗ್ಗೆ ಮದೀನದ ನಿವಾಸಿಗಳು ಚಿಂತಿತರಾದರು. ಅವರು ಹಝ್ರತ್ ಅಲಿಯ(ರ) ಬಳಿಗೆ ಹೋಗಿ ಅವರೊಡನೆ ಖಲೀಫರಾಗಲು ವಿನಂತಿಸಿದರು. ಆದರೆ ಹಝ್ರತ್ ಅಲಿ(ರ) ನಿರಾಕರಿಸಿದರು ಮತ್ತು ಹೀಗೆ ಹೇಳಿದರು: ನಾನು ಖಲೀಫನಾದರೆ, ನಾನು ಉಸ್ಮಾನ್‌ರನ್ನು(ರ) ಕೊಲೆ ಮಾಡಿಸಿದ್ದೆ ಎಂದು ಜನರು ಹೇಳಿಕೊಳ್ಳುವರು. ಈ ಭಾರವನ್ನು ನನ್ನಿಂದ ಹೊರಲು ಸಾಧ್ಯವಲ್ಲ. ಇದೇ ಮಾತನ್ನು ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್(ರ) ಸಹ ಹೇಳಿದರು. ಖಲೀಫರನ್ನಾಗಲು ವಿನಂತಿಸಲಾದ ಇತರ ಸಹಾಬಿಯರು ಸಹ ನಿರಾಕರಿಸಿದರು. ಕೊನೆಗೆ ಎಲ್ಲರೂ ಹಝ್ರತ್ ಅಲಿಯ(ರ) ಬಳಿಗೆ ಪುನಃ ಹೋಗಿ ಹೀಗೆ ಹೇಳಿದರು: ಹೇಗಿದ್ದರೂ ನೀವು ಈ ಹೊಣೆಯನ್ನು ತಮ್ಮ ಹೆಗಲ ಮೇಲೆ ಇರಿಸಬೇಕು. ಕೊನೆಗೆ ಹಝ್ರತ್ ಅಲಿ(ರ) ಹೇಳಿದರು: ಎಲ್ಲರೂ ಮಸೀದಿಯಲ್ಲಿ ಒಟ್ಟುಸೇರಿಕೊಂಡು ನನ್ನನ್ನು ಸ್ವೀಕರಿಸುವುದಾದರೆ ನಾನು ಈ ಹೊಣೆಯನ್ನು ವಹಿಸುವೆನು. ಹೀಗೆ ಎಲ್ಲರೂ ಮಸೀದಿಯಲ್ಲಿ ಒಟ್ಟುಸೇರಿದರು. ಜನರು ಅವರನ್ನು ಸ್ವೀಕರಿಸಿದರು. ಆದರೆ ಕೆಲವರು ನಿರಾಕರಿಸಿದರು. ಅವರು ಹೀಗೆ ಹೇಳಿದರು: ಹಝ್ರತ್ ಉಸ್ಮಾನ್‌ರ(ರ) ಕೊಲೆಗಾರರನ್ನು ಶಿಕ್ಷಿಸುವ ತನಕ ನಾವು ಯಾರನ್ನೂ ಖಲೀಫರನ್ನಾಗಿ ಸ್ವೀಕರಿಸಲಾರೆವು. ಕೆಲವರು ಹೀಗೆ ಹೇಳಿದರು: ಹೊರಗಿನ ಜನರ ಅಭಿಪ್ರಾಯ ಗೊತ್ತಾಗುವ ವರೆಗೆ ಯಾರೂ ಖಲೀಫರಾಗಬಾರದು. ಆದರೆ ಹೀಗೆಲ್ಲ ಹೇಳುವವವರ ಸಂಖ್ಯೆ ಬಹಳ ಕಡಿಮೆಯಾಗಿತ್ತು.ಹೀಗೆ ಹಝ್ರತ್ ಅಲಿ(ರ) ಖಲೀಫರಾಗಲು ಸಮ್ಮತಿಸಿದರು. ಆದರೆ ಅವರು ಭಯಪಟ್ಟಂತೆಯೇ ನಡೆಯಿತು. ಹಝ್ರತ್ ಅಲಿ(ರ) ಹಝ್ರತ್ ಉಸ್ಮಾನ್‌ರನ್ನು ಕೊಂದಿದ್ದರು ಎಂದು ಜನರು ಹೇಳಲು ಶುರುಮಾಡಿದರು. ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ಅಲಿಯ(ರ) ಸಕಲ ಉತ್ತಮ ಗುಣವೈಶಿಷ್ಟ್ಯಗಳನ್ನು ಕಡೆಗಣಿಸಿದ್ದರು ಕೂಡ ನನ್ನ ಪ್ರಕಾರ ಇಂತಹ ಭೀಕರ ಸನ್ನಿವೇಶದಲ್ಲಿ ಖಿಲಾಫತನ್ನು ಅವರು ಸ್ವೀಕರಿಸಿದ್ದು ಬಹಳ ಧೈರ್ಯ ಮತ್ತು ಸಾಹಸದ ಸಂಗತಿಯಾಗಿತ್ತು. ಅದು ಬಹಳ ಶ್ಲಾಘನೀಯ ಸಂಗತಿಯಾಗಿತ್ತು. ಅವರು ತನ್ನ ಗೌರವ ಮತ್ತು ತನ್ನ ಅಸ್ತಿತ್ವಕ್ಕೆ ಇಸ್ಲಾಮಿನ ಮುಂದೆ ಯಾವುದೇ ಬೆಲೆ ಕೊಡಲಿಲ್ಲ. ಇಷ್ಟು ಹಿರಿದಾದ ಹೊಣೆಯನ್ನು ವಹಿಸಿದರು.

(ವಾಖಿಯಾತ್ ಖಿಲಾಫತ್ ಉಲುವ್ವಿ, ಅನ್ವಾರುಲ್ ಉಲೂಮ್, ಸಂಪುಟ–4, ಪುಟ–635–637)

ಅನಂತರ ಹಝ್ರತ್ ಮುಸ್ಲಿಹ್ ಮೌಊದ್(ರ) ಹಝ್ರತ್ ಉಸ್ಮಾನ್‌ರ ಶಹಾದತಿನ ನಂತರದ ಘಟನೆಯನ್ನು ಪ್ರಸ್ತಾಪಿಸುತ್ತಾ ಒಂದು ಕಡೆ ಹೇಳುತ್ತಾರೆ: ಒಂದೆರಡು ದಿನಗಳ ತನಕ ಲೂಟಿ ಮತ್ತು ಸುಲಿಗೆಗಳು ತೀವ್ರವಾಗಿ ನಡೆದವು. ಆದರೆ ಆವೇಶ ಕಡಿಮೆಯಾದಾಗ, ಬಂಡಾಯಗಾರರು ತಮ್ಮ ಅಂತಿಮ ಸ್ಥಿತಿಯ ಬಗ್ಗೆ ಚಿಂತಿತರಾದರು ಮತ್ತು ಈಗ ಏನಾಗುವುದು ಎಂಬುದರ ಬಗ್ಗೆ ಭಯಗೊಂಡರು. 'ಹಝ್ರತ್ ಮುಆವಿಯ ಒಬ್ಬ ಶಕ್ತಿಶಾಲಿ ವ್ಯಕ್ತಿಯಾಗಿದ್ದಾರೆ. ಅವರು ಖಂಡಿತ ಈ ಕೊಲೆಯ ಪ್ರತಿಕಾರವನ್ನು ತೀರಿಸುವರು' ಎಂದು ಭಾವಿಸಿಕೊಂಡು ಕೆಲವರು ಸಿರಿಯಾಗೆ ಹೊರಟರು ಮತ್ತು ಅಲ್ಲಿಗೆ ಹೋಗಿ 'ಹಝ್ರತ್ ಉಸ್ಮಾನ್(ರ) ಶಹೀದ್ ಆಗಿದ್ದಾರೆ, ಆದರೆ ಯಾರೂ ಅವರ ಕೊಲೆಯ ಪ್ರತಿಕಾರವನ್ನು ತೀರಿಸುತ್ತಿಲ್ಲ' ಎಂದು ಹೇಳಿ ಸ್ವತಃ ವಿಲಾಪಿಸಲು ಶುರುಮಾಡಿದರು. ಇನ್ನು ಕೆಲವರು ಓಡಿಕೊಂಡು ಮಕ್ಕದ ಮಾರ್ಗದಲ್ಲಿ ಹಝ್ರತ್ ಝುಬೇರ್(ರ) ಮತ್ತು ಹಝ್ರತ್ ಆಇಶರನ್ನು(ರ) ಭೇಟಿಯಾಗಿ 'ಇಸ್ಲಾಮಿನ ಖಲೀಫರನ್ನು ಶಹೀದ್ ಮಾಡಲಾಗಿಯೂ ಮುಸ್ಲಿಮರು ಮೌನವಾಗಿರುವುದು ಎಂತಹ ಅನ್ಯಾಯವಾಗಿದೆ' ಎಂದು ಹೇಳಿದರು. 'ಈಗ ವಿಪತ್ತಿನ ಸಮಯವಾಗಿದೆ. ಇಸ್ಲಾಮಿನ ಆಡಳಿತ ಕುಸಿದು ಹೋಗುವ ಸಾಧ್ಯತೆಯಿದೆ. ಜನರ ಭಯ ದೂರವಾಗಿ ಶಾಂತಿ ಮತ್ತು ಸಮಾಧಾನ ನೆಲೆನಿಲ್ಲಿಸುವಂತಾಗಲು ನೀವು ಜನರಿಂದ ಬೈಅತ್ತನ್ನು ಸ್ವೀಕರಿಸಿರಿ' ಎಂದು ಹೇಳಿ ಕೆಲವರು ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಬಳಿಗೆ ಹೋದರು. 'ನೀವು ಈಗ ಈ ಭಾರವನ್ನು ತಮ್ಮ ಹೆಗಲ ಮೇಲೆ ಇರಿಸುವುದೇ ಸರಿಯೆಂದು ಮತ್ತು ಇದು ಅಲ್ಲಾಹನ ಸಂಪ್ರೀತಿ ಮತ್ತು ಪ್ರತಿಫಲಕ್ಕೆ ಕಾರಣವಾಗುವುದು' ಎಂದೂ ಮದೀನದಲ್ಲಿ ಇದ್ದ ಸಹಾಬಿಯರು ಸಹ ಒಮ್ಮತಾಭಿಪ್ರಾಯದಿಂದ ಹೇಳಿದರು. ಹೀಗೆ ನಾಲ್ಕೂ ಕಡೆಯಿಂದ ಅವರನ್ನು ನಿರ್ಬಂಧಿಸಲಾದಾಗ, ಹಲವು ಬಾರಿ ನಿರಾಕರಿಸಿದ ನಂತರ ಕೊನೆಗೆ ಯಾವುದೇ ನಿರ್ವಾಹವಿಲ್ಲದ ಕಾರಣದಿಂದ ಈ ಹೊಣೆಯನ್ನು ಹಝ್ರತ್ ಅಲಿ(ರ) ವಹಿಸಿಕೊಂಡರು ಹಾಗೂ ಜನರಿಂದ ಬೈಅತ್ ಪಡೆದರು. ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹುರ ಈ ತೀರ್ಮಾನ ಬಹಳ ಯುಕ್ತಿಯಿಂದ ಕೂಡಿದ್ದಾಗಿತ್ತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಅವರು ಆ ಸಮಯದಲ್ಲಿ ಬೈಅತ್ ಪಡೆಯದೇ ಇರುತ್ತಿದ್ದರೆ, ಹಝ್ರತ್ ಮುಆವಿಯರ ವಿರುದ್ಧ ಹಝ್ರತ್ ಅಲಿ ರಝಿಯಲ್ಲಾಹು ಅನ್‌ಹು ಮಾಡಿದ್ದ ಯುದ್ಧಕ್ಕಿಂತ ಹೆಚ್ಚಿನ ನಷ್ಟವುಂಟಾಗುತ್ತಿತ್ತು. (ಅನ್ವಾರೆ ಖಿಲಾಫತ್, ಅನ್ವಾರುಲ್ ಉಲೂಮ್ ಸಂಪುಟ–3, ಪುಟ–197–198)

ಹಝ್ರತ್ ಮುಸ್ಲಿಹ್ ಮೌಊದ್(ರ) ವರದಿ ಮಾಡುತ್ತಾರೆ: ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್(ರ) ಹಝ್ರತ್ ಅಲಿಯ(ರ) ಕೈಯಲ್ಲಿ ಬೈಅತ್ ಮಾಡಿದ ನಂತರ ಅದನ್ನು ಮುರಿದು ಕೊಂಡು ಹಝ್ರತ್ ಆಯಿಶರೊಂದಿಗೆ(ರ) ಸೇರಿದ್ದರು ಅಥವಾ ಹಝ್ರತ್ ಅಲಿಯ ವಿರುದ್ಧ ಯುದ್ಧ ಮಾಡಿದ್ದರು ಎಂದು ಹೇಳುವುದು ಸರಿಯಾದ ಸಂಗತಿಯಲ್ಲ. ಇದು ಚರಿತ್ರೆಯ ಬಗ್ಗೆ ಅರಿವಿಲ್ಲದವರ ಹೇಳಿಕೆಯಾಗಿದೆ. ಹೀಗೆ ಆಗಿಲ್ಲ. ಚರಿತ್ರೆಯಿಂದ ಸ್ಪಷ್ಟವಾಗಿ ಸಾಬೀತಾಗುವುದೇನೆಂದರೆ, ಹಝ್ರತ್ ತಲ್‌ಹ(ರ) ಮತ್ತು ಝುಬೇರ್(ರ) ಹಝ್ರತ್ ಅಲಿಯ(ರ) ಕೈಯಲ್ಲಿ ಬೈಅತ್ ಸ್ವಂತ ಇಷ್ಟ ಪ್ರಕಾರ ಮಾಡಿರಲಿಲ್ಲ. ಬದಲಿಗೆ ಅವರಿಂದ ಒತ್ತಾಯದಿಂದ ಬೈಅತ್ ಪಡೆಯಲಾಗಿತ್ತು. ಮುಹಮ್ಮದ್ ಮತ್ತು ತಲ್‌ಹ ಎಂಬ ಇಬ್ಬರು ವರದಿಗಾರರಿಂದ ಹೀಗೆ ವರದಿಯಾಗಿದೆ: ಹಝ್ರತ್ ಉಸ್ಮಾನ್(ರ) ಶಹೀದ್ ಆದಾಗ, ಶಾಂತಿಸ್ಥಾಪನೆಯಾಗಿ ದಂಗೆ ಇಲ್ಲವಂತಾಗಲು ಬೇಗನೇ ಯಾರನ್ನಾದರೂ ಖಲೀಫರನ್ನಾಗಿ ನಿಶ್ಚಯಿಸಬೇಕೆಂದು ಜನರು ಪರಸ್ಪರ ಸಮಾಲೋಚಿಸಿ ತೀರ್ಮಾನಿಸಿದರು. ಕೊನೆಗೆ ಜನರು ಹಝ್ರತ್ ಅಲಿಯ(ರ) ಬಳಿಗೆ ಹೋಗಿ ಹೀಗೆ ಹೇಳಿದರು: ನೀವು ನಮ್ಮಿಂದ ಬೈಅತ್ ಪಡೆಯಿರಿ. ಹಝ್ರತ್ ಅಲಿ(ರ) ಹೇಳಿದರು: ನೀವು ನನ್ನ ಕೈಯಲ್ಲಿ ಬೈಅತ್ ಮಾಡಿದರೆ, ಅನಂತರ ಯಾವಾಗಲೂ ನನ್ನನ್ನು ಅನುಸರಿಸ ಬೇಕಾಗುವುದು. ನಿಮಗಿದು ಒಪ್ಪಿಗೆ ಎಂದಾದರೆ ನಾನು ನಿಮ್ಮ ಬೈಅತನ್ನು ಸ್ವೀಕರಿಸುತ್ತೇನೆ. ಇಲ್ಲದಿದ್ದರೆ ಬೇರೆ ಯಾರನ್ನಾದರೂ ಖಲೀಫರನ್ನಾಗಿ ನಿಶ್ಚಯಿಸಿರಿ. ಅನಂತರ ಯಾರೇ ಖಲೀಫರಾಗಲಿ ನಾನು ಅವರಿಗೆ ಸದಾ ವಿಧೇಯನಾಗಿರುವೆನು ಮತ್ತು ನಿಮಗಿಂತ ಹೆಚ್ಚು ನಾನು ಅವರನ್ನು ಅನುಸರಿಸುವೆನು. ಜನರು ಹೇಳಿದರು: ನಾವು ನಿಮ್ಮನ್ನು ಅನುಸರಿಸಲು ತಯಾರಾಗಿದ್ದೇವೆ. ಹಝ್ರತ್ ಅಲಿ(ರ) ಹೇಳಿದರು: ಪುನಃ ಆಲೋಚಿಸಿರಿ. ಪರಸ್ಪರ ಸಮಾಲೋಚಿಸಿರಿ. ಆಗ ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರ್(ರ) ಹಝ್ರತ್ ಅಲಿಯ ಕೈಯಲ್ಲಿ ಬೈಅತ್ ಮಾಡಿದರೆ ಎಲ್ಲರೂ ಬೈಅತ್ ಮಾಡುವೆವು ಎಂದು ಸಮಾಲೋಚನೆಯ ನಂತರ ತೀರ್ಮಾನಿಸಿದರು. ಅವರಿಬ್ಬರೂ ಬೈಅತ್ ಮಾಡುವ ವರೆಗೆ ಪೂರ್ಣವಾಗಿ ಶಾಂತಿ ಸ್ಥಾಪನೆಯಾಗದು ಎಂದು ಹೇಳಿದರು. ಹೀಗೆ ಆದಾಗ, ಹಕೀಂ ಬಿನ್ ಜಬ್‌ಲರನ್ನು ಕೆಲವು ಜನರ ಜೊತೆಗೆ ಹಝ್ರತ್ ಝುಬೇರರ(ರ) ಬಳಿಗೆ ಮತ್ತು ಮಾಲಿಕ್ ಉಶ್ತರ್‌ರನ್ನು ಕೆಲವು ಜನರ ಜೊತೆಗೆ ಹಝ್ರತ್ ತಲ್‌ಹರ ಕಡೆಗೆ ಗಲಭೆಗಾರರು ರವಾನೆ ಮಾಡಿದರು. ಅವರು ಖಡ್ಗದ ತುದಿಯನ್ನು ತೋರಿಸುತ್ತಾ ಬೈಅತ್ ಮಾಡಲು ನಿರ್ಬಂಧಿಸಿದರು. ಎಂದರೆ ಖಡ್ಗವನ್ನು ಹಿಡಿದುಕೊಂಡು ಅವರ ಮುಂದೆ ನಿಂತರು ಮತ್ತು ಹೀಗೆ ಹೇಳಿದರು: ಹಝ್ರತ್ ಅಲಿಯ(ರ) ಕೈಯಲ್ಲಿ ಬೈಅತ್ ಮಾಡಿರಿ ಇಲ್ಲದಿದ್ದರೆ ಈಗಲೇ ನಿಮ್ಮನ್ನು ಕೊಲ್ಲುವೆವು. ಹೀಗೆ ಅವರು ನಿರ್ಬಂಧಿತರಾಗಿ ಸಮ್ಮತಿ ಸೂಚಿಸಿದರು. ಮರುದಿನ ಹಝ್ರತ್ ಅಲಿ(ರ) ಮಿಂಬರ್ ಏರಿದರು ಮತ್ತು ಹೀಗೆ ಹೇಳಿದರು: 'ಹೇ ಜನರೇ ನೀವು ನಿನ್ನೆ ನನಗೆ ಒಂದು ಮಾತನ್ನು ಹೇಳಿದ್ದೀರಿ. ನಿಮ್ಮೊಡನೆ ಅದರ ಬಗ್ಗೆ ಸಮಾಲೋಚಿಸಲು ಹೇಳಿದ್ದೆ. ನೀವು ಅದರ ಬಗ್ಗೆ ಆಲೋಚಿಸಿದ್ದೀರಾ? ನೀವು ನನ್ನ ನಿನ್ನೆಯ ಮಾತಿನ ಮೇಲೆ ಇಂದೂ ನೆಲೆನಿಂತಿದ್ದೀರಾ? ನೆಲೆನಿಂತಿದ್ದೀರಿ ಎಂದಾದರೆ, ನನ್ನನ್ನು ಪೂರ್ಣವಾಗಿ ಅನುಸರಿಸಬೇಕಾಗುವುದು.' ಆಗ ಆ ಜನರು ಪುನಃ ಹಝ್ರತ್ ತಲ್‌ಹ(ರ) ಮತ್ತು ಹಝ್ರತ್ ಝುಬೇರರ(ರ) ಬಳಿಗೆ ಹೋಗಿ ಅವರನ್ನು ಬಲಪ್ರಯೋಗದಿಂದ ಎಳೆದು ತಂದರು. ವರದಿಗಳಲ್ಲಿ ಸ್ಪಷ್ಟವಾಗಿ ಹೀಗೆ ಬರೆಯಲಾಗಿದೆ: ಅವರು ಹಝ್ರತ್ ತಲ್‌ಹರ(ರ) ಬಳಿಗೆ ಹೋಗಿ ಅವರೊಡನೆ ಬೈಅತ್ ಮಾಡಲು ಹೇಳಿದಾಗ, ಹಝ್ರತ್ ತಲ್‌ಹ(ರ) ಹೀಗೆ ಜವಾಬು ಕೊಟ್ಟರು: **ಇನ್ನೀ ಅನ್ನಮಾ ಉಬಾಯಿಉ ಕರ್‌ಹನ್**. ಎಂದರೆ ನಿಮ್ಮ ಒತ್ತಾಯದ ಕಾರಣದಿಂದ ಬೈಅತ್ ಮಾಡುತ್ತಿದ್ದೇನೆ. ಖುಶಿಯಿಂದ ಮಾಡುತ್ತಿಲ್ಲ. ಅದೇ ರೀತಿಯಲ್ಲಿ ಅವರು ಹಝ್ರತ್ ಝುಬೇರರ(ರ) ಬಳಿಗೆ ಹೋಗಿ ಅವರೊಡನೆ ಬೈಅತ್ ಮಾಡಲು ಹೇಳಿದಾಗ, ಹಝ್ರತ್ ಝುಬೇರ್(ರ) ಸಹ ಹೀಗೆ ಜವಾಬು ಕೊಟ್ಟರು: **ಇನ್ನೀ ಅನ್ನಮಾ ಉಬಾಯಿಉ ಕರ್‌ಹನ್**. ಎಂದರೆ ನೀವು ನನ್ನನ್ನು ಬಲಪ್ರಯೋಗಿಸಿ ಬೈಅತ್ ಮಾಡಿಸುತ್ತಿದ್ದೀರಿ. ನಾನು ಮನಸ್ಸಾರೆ

ಮಾಡುತ್ತಿಲ್ಲ. ಅಬ್ದುರ್ರಹ್ಮಾನ್ ಬಿನ್ ಜುಂದುಬ್ ತನ್ನ ತಂದೆಯಿಂದ ವರದಿ ಮಾಡುತ್ತಾರೆ: ಹಝ್ರತ್ ಉಸ್ಮಾನ್(ರ) ಶಹೀದ್ ಆದ ನಂತರ ಉಶ್ತರ ಹಝ್ರತ್ ತಲ್‌ಹರ(ರ) ಬಳಿಗೆ ಹೋದರು. ಬೈಅತ್ ಮಾಡಲು ಅವನು ಹೇಳಿದರು. ಹಝ್ರತ್ ತಲ್‌ಹ ಹೇಳಿದರು: 'ನನಗೆ ಕಾಲಾವಕಾಶ ಕೊಡಿರಿ. ಜನರು ಏನು ತೀರ್ಮಾನ ಮಾಡುತ್ತಾರೆಂದು ನಾನು ನೋಡಲು ಬಯಸುತ್ತೇನೆ.' ಆದರೆ ಗಲಭೆಕೋರರು ಬಿಡಲಿಲ್ಲ ಮತ್ತು **ಜಾಅ ಬಿಹಿ ಯತ್‌ಲಹೂ ತಲಾ ಅನೀಫನ್**. ಆಡುಗಳನ್ನು ಎಳೆಯಲಾಗುವ ರೀತಿಯಲ್ಲಿ ಅವರನ್ನು ನೆಲದಲ್ಲಿ ಅತ್ಯಂತ ಕಠಿಣವಾದ ರೀತಿಯಲ್ಲಿ ಎಳೆಯುತ್ತಾ ಕೊಂಡು ಹೋದರು. (ಖಿತ್‌ಬಾತೆ ಮಹ್ಮೂದ್, ಸಂಪುಟ-18, ಪುಟ-300-302)

ಹಝ್ರತ್ ತಲ್‌ಹ(ರ) ಪರಸ್ಪರ ಭಿನ್ನಾಭಿಪ್ರಾಯದ ಸಮಯದಲ್ಲಿ ಹಝ್ರತ್ ಅಲಿಯ(ರ) ವಿರುದ್ಧ ನಿಂತಿದ್ದರು. ಆದರೆ ಅವರಿಗೆ ಸತ್ಯದ ಅರಿವಾದಾಗ, ತನ್ನಿಂದ ತಪ್ಪಾಗಿದೆ ಎಂದು ಗೊತ್ತಾದಾಗ, ಯುದ್ಧ ಮೈದಾನದಿಂದ ಹೊರಟುಹೋದರು. ಮೊದಲು ಒತ್ತಾಯದಿಂದ ವಿದ್ರೋಹಿಗಳು ಬೈಅತ್ ಮಾಡಿಸಿದ್ದರು. ಭಿನ್ನಾಭಿಪ್ರಾಯಗಳು ಸಹ ಉಂಟಾಗಿತ್ತು. ಯುದ್ಧವೂ ನಡೆದಿತ್ತು. ಆದರೆ ಕೊನೆಗೆ ಹಝ್ರತ್ ಅಲಿಯಿಂದ(ರ) ತಪ್ಪಾಗಿಲ್ಲವೆಂದು ಅವರಿಗೆ ಗೊತ್ತಾಯಿತು. ಇದರ ಬಗ್ಗೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಝ್ರತ್ ತಲ್‌ಹ(ರ) ಮನೆಗೆ ಮರಳಿ ಹೋಗುತ್ತಿದ್ದರು. ಹಝ್ರತ್ ಅಲಿಯ(ರ) ಸೈನ್ಯದಲ್ಲಿರುವವನೆಂದು ಹೇಳಲ್ಪಡುವ ಒಬ್ಬ ಗ್ರಾಮೀಣ ವ್ಯಕ್ತಿ ಹಝ್ರತ್ ತಲ್‌ಹರನ್ನು(ರ) ಯುದ್ಧ ಮೈದಾನದಿಂದ ಮರಳಿ ಬರುತ್ತಿರುವಾಗ ಮಾರ್ಗ ಮಧ್ಯೆ ಶಹೀದ್ ಮಾಡಿದನು. ಅನಂತರ ಇದಕ್ಕೆ ಇನಾಮು ಸಿಗುವುದು ಎಂಬ ಬಯಕೆಯಿಂದ ಹಝ್ರತ್ ಅಲಿಯ(ರ) ಬಳಿಗೆ ಬಂದು ಹೀಗೆ ಹೇಳಿದನು: ನಿಮಗೆ ಒಂದು ಸಂತೋಷ ವಾರ್ತೆಯಿದೆ. ನಿಮ್ಮ ಶತ್ರು ತಲ್‌ಹ ನನ್ನಿಂದ ಕೈಯಿಂದ ಕೊಲ್ಲಲ್ಪಟ್ಟರು. ಹಝ್ರತ್ ಅಲಿ(ರ) ಹೇಳಿದರು: ನಾನು ನಿನಗೆ ಹಝ್ರತ್ ಪೈಗಂಬರರ(ಸ) ಕಡೆಯಿಂದ ನರಕದ ಸುವಾರ್ತೆಯನ್ನು ನೀಡುತ್ತೇನೆ. ನರಕವಾಸಕ್ಕೆ ಅರ್ಹನಾದ ಒಬ್ಬ ವ್ಯಕ್ತಿ ತಲ್‌ಹರನ್ನು ಕೊಲೆ ಮಾಡುವನು ಎಂದು ಹಝ್ರತ್ ಪೈಗಂಬರ್(ಸ) ಹೇಳಿದ್ದಾಗಿ ನಾನು ಕೇಳಿದ್ದೇನೆ. (ಖಿತ್‌ಬಾತೆ ಮಹ್ಮೂದ್, ಸಂಪುಟ-26, ಪುಟ-385)

ಇದೇ ಘಟನೆಯನ್ನು ವಿವರಿಸುತ್ತಾ ಮತ್ತೊಂದೆಡೆ ಹಝ್ರತ್ ಮುಸ್ಲಿಹ್ ಮೌಊದ್(ರ) ಹೇಳುತ್ತಾರೆ: ಹಾಕಿಂ ವರದಿ ಮಾಡಿದ್ದಾರೆ. ತೌರ್ ಬಿನ್ ಮಜ್‌ಝಿ ನನ್ನೊಡನೆ ಹೇಳಿದರು: ಜಮಲ್ ಯುದ್ಧದ ದಿನ ನಾನು ಹಝ್ರತ್ ತಲ್‌ಹರ(ರ) ಸಮೀಪದಿಂದ ಹಾದುಹೋದೆನು. ಆ ಸಮಯದಲ್ಲಿ ಅವರ ಮರಣ ಸಮೀಪವಾಗಿತ್ತು. ನೀನು ಯಾವ ಪಕ್ಷದಲ್ಲಿಯವನು ಎಂದು ಅವರು ನನ್ನೊಡನೆ ಕೇಳಿದರು. ಹಝ್ರತ್ ಅಮೀರುಲ್ ಮೂಮಿನೀನ್ ಅಲಿಯ ಪಕ್ಷದವನಾಗಿದ್ದೇನೆ ಎಂದು ನಾನು ಹೇಳಿದೆ. ಹಾಗಾದರೆ ನಿನ್ನ ಕೈಯನ್ನು ಚಾಚು, ನಾನು ನಿನ್ನ ಕೈಯಲ್ಲಿ ಬೈಅತ್ ಮಾಡುತ್ತೇನೆ ಎಂದು ಅವರು ಹೇಳಿದರು. ಹೀಗೆ ಅವರು ನನ್ನ ಕೈಯಲ್ಲಿ ಬೈಅತ್ ಮಾಡಿದರು ಮತ್ತು ಹಝ್ರತ್ ಅಲಿಯ(ರ) ಸತ್ಯತೆಯನ್ನು ಒಪ್ಪಿದರು. ನಾನು ನಡೆದ ಎಲ್ಲ ಸಂಗತಿಗಳನ್ನು ಹಝ್ರತ್ ಅಲಿಯ(ರ) ಬಳಿಗೆ ಬಂದು ಹೇಳಿದೆ. ಇದನ್ನು ಕೇಳಿದ ಹಝ್ರತ್ ಅಲಿ(ರ) ಹೇಳಿದರು: ಅಲ್ಲಾಹು ಅಕ್ಬರ್. ಅಲ್ಲಾಹನ ಪ್ರವಾದಿಯ ಮಾತು ಸತ್ಯವೆಂದು ಸ್ಪಷ್ಟವಾಗಿ ಸಾಬೀತಾಗಿದೆ. ಹಝ್ರತ್ ತಲ್‌ಹ(ರ) ನನ್ನನ್ನು ಬೈಅತ್ ಮಾಡಿಕೊಂಡು ಸ್ವರ್ಗಕ್ಕೆ ಹೋಗಬೇಕೆಂದು ಅಲ್ಲಾಹನು ಉದ್ದೇಶಿಸಿದ್ದನು. ಅಶ್ರ ಮುಬಶ್ಶಿರ ಎಂದರೆ ಸ್ವರ್ಗದಲ್ಲಿರುವರು ಎಂದು ಹಝ್ರತ್ ಪೈಗಂಬರ್(ಸ) ಸುವಾರ್ತೆ ನೀಡಿದ್ದ ಹತ್ತು ವ್ಯಕ್ತಿಗಳಲ್ಲಿ ಹಝ್ರತ್ ತಲ್‌ಹ(ರ) ಒಬ್ಬರಾಗಿದ್ದರು. (ಅಲ್‌ಖೌಲುಲ್ ಫಸಲ್, ಅನ್ವಾರುಲ್ ಉಲೂಮ್, ಸಂಪುಟ-2, ಪುಟ-318-319)

ನಾನು ಮೊದಲು ಹೇಳಿದಂತೆ ಮೊದಲು ಒತ್ತಾಯದ ಕಾರಣದಿಂದ ಹಝ್ರತ್ ತಲ್‌ಹ(ರ) ಬೈಅತ್ ಮಾಡಿದ್ದರು. ಆದರೆ ಮರಣಕ್ಕೆ ಮುಂಚಿತವಾಗಿ ತೆರೆದ ಮನಸ್ಸಿನೊಂದಿಗೆ ಬೈಅತ್ ಅವರು ಮಾಡಿದ್ದರು. ಅವರಲ್ಲಿ ಒಳಿತಿತ್ತು. ಸೌಭಾಗ್ಯವಿತ್ತು. ಸ್ವರ್ಗದಲ್ಲಿ ಪ್ರವೇಶಿಸಲಾಗುವುದು ಎಂದು ಅವರ ಬಗ್ಗೆ ಅಲ್ಲಾಹನ ವಾಗ್ದಾನವೂ ಇತ್ತು. ಆದ್ದರಿಂದ ಖಿಲಾಫತಿನಿಂದ ಹೊರಗೆ ನಿಂತು ಮರಣಪಡುವ ಸ್ಥಿತಿ ಉಂಟಾಗಬಾರದು ಎಂದು ಅಲ್ಲಾಹನು ಇಚ್ಛಿಸಿದ್ದನು. ಹೀಗೆ ಆ ಕೊನೆಯ ಸಮಯದಲ್ಲಿ ಅವರಿಗೆ ಅದರ ಸಂದರ್ಭ ಸಿಕ್ಕಿತ್ತು. ಖಿಲಾಫತಿನ ಬೈಅತ್ ಮಾಡಿದರು. ಉಳಿದ ಭಾಗ ಮುಂದಿನ ಬಾರಿ ವಿವರಿಸಲಾಗುವುದು. ಇನ್‌ಶಾ ಅಲ್ಲಾಹ್.

ಇಂದು ಪುನಃ ನಾನು ಅಲ್‌ಜೀರಿಯಾ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡುವ ಕುರಿತು ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಅಲ್ಲಾಹನು ಅವರನ್ನು ಸಂರಕ್ಷಿಸಲಿ. ಅಲ್‌ಜೀರಿಯಾದಲ್ಲೂ ಕಠಿಣವಾದ ಪರಿಸ್ಥಿತಿಗಳನ್ನು ಉಂಟುಮಾಡಲಾಗುತ್ತಿವೆ. ಅಲ್ಲೂ ಒಬ್ಬ ಸರ್ಕಾರಿ ವಕೀಲನು ಪದೇ ಪದೇ ಅಹ್ಮದಿಯರ ವಿರುದ್ಧ ಮೊಕದ್ದಮೆ ಹೂಡುತ್ತಿದ್ದಾನೆ. ಅದೇ ರೀತಿಯಲ್ಲಿ ಪಾಕಿಸ್ತಾನದಲ್ಲೂ ಸಂಕಷ್ಟಗಳಿಗೆ ಗುರಿಪಡಿಸಲಾಗುತ್ತಿದೆ. ಈ ರೀತಿ ಕಷ್ಟತೆಗಳನ್ನು ಉಂಟುಮಾಡುತ್ತಿರುವ ಜನರಿಗೆ ಅಥವಾ ಯಾವುದೇ ರೀತಿಯಲ್ಲಿ ವಿರೋಧಿಸುವವರಿಗೆ ಅಲ್ಲಾಹನು ತಕ್ಕುದಾದ ಪಾಠ ಕಲಿಸಲಿ. ಅಲ್ಲಿರುವ ಅಹ್ಮದಿಯರ ಸ್ಥಿತಿಗಳನ್ನು ಅಲ್ಲಾಹನು ಸರಿಪಡಿಸಲಿ. ಕಷ್ಟತೆಗಳಿಂದ ಸಾಗುತ್ತಿರುವ ಕಷ್ಟತೆಗಳನ್ನು ಸುಗಮಗೊಳಿಸಲಿ. ಆದರೆ ಪ್ರಾರ್ಥನೆಗಳ ಕಡೆಗೆ ಇರಬೇಕಾದಷ್ಟು ಗಮನವಿಲ್ಲವೆಂದು ವಿಶೇಷವಾಗಿ ಪಾಕಿಸ್ತಾನದ ಅಹ್ಮದಿಯರೊಡನೆ ನಾನು ಹೇಳಬಯಸುತ್ತೇನೆ. ಆದ್ದರಿಂದ ಹಿಂದಿಗಿಂತ ಬಹಳ ಅಧಿಕವಾಗಿ ದುಆಗಳ ಕಡೆಗೆ ಗಮನವಹಿಸಿರಿ. ಅಲ್ಲಾಹನು ಬೇಗನೇ ಈ ಕಷ್ಟತೆಗಳನ್ನು ನಮ್ಮಿಂದ ನೀಗಿಸಲಿ, ಸುಗಮತೆಯನ್ನು ಉಂಟುಮಾಡಲಿ, ಯಥಾರ್ಥ ಇಸ್ಲಾಮಿನ ಸಂದೇಶವನ್ನು ಪಾಕಿಸ್ತಾನದಲ್ಲೂ ಹಾಗೂ ಲೋಕದ ಪ್ರತಿಯೊಂದು ಮೂಲೆಯಲ್ಲೂ ಸ್ವತಂತ್ರವಾಗಿ ತಲುಪಿಸಲು ನಮಗೆ ಸಾಧ್ಯವಾಗುವಂತಾಗಲಿ.

ಜುಮಾ ನಮಾಝ್ ನಂತರ ಕೆಲವರ ಜನಾಝ ಗಾಇಬ್ ಸಹ ನಿರ್ವಹಿಸುವೆನು. ಮೊದಲ ಜನಾಝ ರಬ್ವದ ಡಾಕ್ಟರ್ ತಾಹಿರ್ ಅಹ್ಮದ್‌ರದ್ದಾಗಿದೆ. ಇವರು ಅಬ್ದುರ್ರಝ್ಝಾಕ್ ಶಹೀದ್ ಸಾಹಿಬ್‌ರ ಮಗನಾಗಿದ್ದರು. ನವಾಬ್‌ಶಾಹ್ ಜಿಲ್ಲೆಯ ಮಾಜಿ ಅಮೀರ್ ಆಗಿದ್ದರು. ಡಿಸೆಂಬರ್ 4ರಂದು, 60ನೇ ವಯಸ್ಸಿನಲ್ಲಿ ಹೃದಯಘಾತದ ಕಾರಣದಿಂದ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರು ಸರ್ಕಾರಿ ಡಾಕ್ಟರ್ ಆಗಿದ್ದರು. 1995ರಲ್ಲಿ ಮೊದಲ ಬಾರಿಗೆ ಅವರಿಗೆ ಹಾರ್ಟ್ ಅಟೇಕ್ ಉಂಟಾಗಿತ್ತು. ರೋಗಗ್ರಸ್ತರಾಗಿದ್ದರೂ ವಖ್‌ಫೆ ಜದೀದಿನ ಯೋಜನೆಯಡಿಯಲ್ಲಿ ಅಲ್‌ಮಹ್‌ದಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುವಂತಾಗಲು ಮಿಟ್ಟಿ ಎಂಬ ಸ್ಥಳಕ್ಕೆ ತಮ್ಮ ಡ್ಯೂಟಿಯನ್ನು ಸ್ಥಳಾಂತರಗೊಳಿಸಿದರು. ಡಾಕ್ಟರ್ ಸಾಹಿಬ್‌ರು ಐ ಸ್ಪೆಶಲಿಸ್ಟ್ ಆಗಿದ್ದರು. ದಿನಾಲು ಸಂಜೆ ಮತ್ತು ರವಿವಾರಗಳಲ್ಲಿ ಅಲ್‌ಮಹ್‌ದಿ ಆಸ್ಪತ್ರೆಗೆ ಕಣ್ಣಿನ ರೋಗಿಗಳ ಚಿಕಿತ್ಸೆಗಾಗಿ ಹೋಗುತ್ತಿದ್ದರು. ಅದೇ ರೀತಿಯಲ್ಲಿ ರಜಾದಿನಗಳಲ್ಲೂ ಮಹ್‌ದಿ ಆಸ್ಪತ್ರೆಗೆ ಬರುತ್ತಿದ್ದರು. ಮೆಡಿಕಲ್ ಕ್ಯಾಂಪುಗಳಲ್ಲಿ ಯಾವಾಗಲೂ ಭಾಗವಹಿಸುತ್ತಿದ್ದರು. ಕೆಲವು ವೇಳೆ ಪೂರ್ತಿ ದಿನ ಆಪರೇಶನಿನಲ್ಲಿ ನಿರತರಾಗುತ್ತಿದ್ದರು. ಥರ್‌ಪಾರ್‌ಕರ್‌ನಲ್ಲಿರುವ ಅಹ್ಮದಿಯರಿಗೆ ಮಾತ್ರವಲ್ಲ ಅಹ್ಮದಿಯೇತರರಿಗೂ ಇವರು ಪ್ರಿಯರಾಗಿದ್ದರು. ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಇವರ ಹೃದಯದ ಬೈಪಾಸ್ ಆಪರೇಶನ್ ಸಹ ಆಗಿತ್ತು. ಕೊನೆಯ ವರ್ಷಗಳಲ್ಲಿ ಎರಡು ಮೂರು ಬಾರಿ ಕಠಿಣವಾದ ನೋವನ್ನು ಅನುಭವಿಸಿದ್ದರು. ಆದರೆ ಥರ್‌ಪಾರ್‌ಕರ್‌ನಲ್ಲಿ ತನ್ನ ಕೆಲಸವನ್ನು ಜಾರಿಯಲ್ಲಿರಿಸಿದ್ದರು. ಇವರು ಮಿಟ್ಟಿಯಲ್ಲಿ ಸುಮಾರು 15 ವರ್ಷಗಳ ಕಾಲ ಜನಸೇವೆಯಲ್ಲಿ ಕಳೆದರು. ದರಿದ್ರರನ್ನು ತುಂಬ ಸಹಾಯ ಮಾಡುತ್ತಿದ್ದರು. ಅತಿಥಿ ಸತ್ಕಾರ ಪ್ರಿಯರಾದ, ಖಿಲಾಫತ್ ಮತ್ತು ಜಮಾಅತಿನ ವ್ಯವಸ್ಥೆಯನ್ನು ಬಹಳ ಗೌರವಿಸುವ ವ್ಯಕ್ತಿಯಾಗಿದ್ದರು. ಅಲ್ಲಾಹನ ಅನುಗ್ರಹದಿಂದ ಯೌವ್ವನದಲ್ಲೇ ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗವಹಿಸಿದ್ದರು. ಪ್ರತಿಯೊಂದು ಧನತ್ಯಾಗದ ಯೋಜನೆಗಳಲ್ಲಿ ಉತ್ಸಾಹದಿಂದ ಭಾಗವಹಿಸುತ್ತಿದ್ದರು. ಅಲ್ಲಾಹನು ದಿವಂಗತರೊಂದಿಗೆ ಕಾರುಣ್ಯ ಮತ್ತು ಕ್ಷಮೆಯಿಂದ ವರ್ತಿಸಲಿ, ಪದವಿಗಳನ್ನು ಉನ್ನತಗೊಳಿಸಲಿ, ಮಕ್ಕಳಿಗೂ ಇವರ ಒಳಿತುಗಳ ಪ್ರಕಾರ ನಡೆಯುವಂತೆ ಮತ್ತು ಅವುಗಳನ್ನು ನೆಲೆನಿಲ್ಲಿಸಲು ಸೌಭಾಗ್ಯ ನೀಡಲಿ.

ಎರಡನೇ ಜನಾಝ ಚೌಧರಿ ಅಲ್ಲಾದತ್ತ ಸಾಹಿಬ್‌ರ ಮಗನಾದ ಹಬೀಬುಲ್ಲಾಹ್ ಮಝ್‌ಹರ್ ಸಾಹಿಬ್‌ರದ್ದಾಗಿದೆ. ಹಬೀಬುಲ್ಲಾಹ್ ಮಝ್‌ಹರ್ ಸಾಹಿಬ್‌ರು ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳು ಸಹ ಆಗಿದ್ದರು. ಅಕ್ಟೋಬರ್24ರಂದು, 75ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಇವರ ತಂದೆಯವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯರ(ರ) ಕೈಯಲ್ಲಿ ಬೈಅತ್ ಮಾಡಿ ಅಹ್ಮದಿಯ್ಯತ್ತಿಗೆ ಪ್ರವೇಶಿಸಿದ್ದರು. ಚೌಧರಿ ಹಬೀಬುಲ್ಲಾಹ್ ಮಝ್‌ಹರ್ ಸಾಹಿಬ್‌ರು ಸರ್ಕಾರಿ ಕಛೇರಿಗಳಲ್ಲಿ ವಿವಿಧ ಸ್ಥಾನಗಳಲ್ಲಿ ಕೆಲಸಮಾಡುತ್ತಿದ್ದರು. ಸರ್ಕಾರದ ಒಂದು ವಿಭಾಗದಿಂದ ಡೈರೆಕ್ಟರ್ ಎಂಬ ನೆಲೆಯಿಂದ ನಿವೃತ್ತರಾಗಿದ್ದರು. ಐವತ್ತು ವರ್ಷಗಳಿಗಿಂತ ಹೆಚ್ಚು ಕಾಲ ಜಮಾಅತಿನ ಸೇವೆ ಸಹ ಮಾಡಿದ್ದರು. ಖಾಇದ್ ಮಜ್‌ಲಿಸ್‌ನಿಂದ ಝಈಮ್ ಅನ್ಸಾರುಲ್ಲಾಹ್ ವರೆಗೆ ಜಮಾಅತಿನ ಹಲವು ಹುದ್ದೆಗಳಲ್ಲಿ ಮತ್ತು ಸದರ್ ಜಮಾಅತ್ ಎಂಬ ನೆಲೆಯಲ್ಲೂ ಸೇವೆಗಳನ್ನು ಸಲ್ಲಿಸಲು ಸೌಭಾಗ್ಯ ಪಡೆದಿದ್ದರು. ಪ್ರವಾದಿತ್ವದ ನಿಂದನೆ ಎಂಬ ಕಾನೂನಾದ 295 ಪ್ರಕಾರ, ಅಹ್ಮದಿಯರಲ್ಲಿ ಗಲ್ಲುಶಿಕ್ಷೆಯ ಮೊದಲ ಮೊಕದ್ದಮೆ ಚೌಧರಿ ಹಬೀಬುಲ್ಲಾಹ್ ಮಝ್‌ಹರ್ ಸಾಹಿಬ್‌ರ ಮೇಲೆ ಹೂಡಲಾಗಿತ್ತು. ಅದು 1991ರ ಅಕ್ಟೋಬರ್ 29ರಲ್ಲಿ ಥಾನಶಾಹ್‌ದರದಲ್ಲಿ ಹೂಡಲಾಗಿತ್ತು. ಈ ರೀತಿಯಲ್ಲಿ ಇವರು ಚರಿತ್ರೆಯ ಪ್ರಕಾರ, ಕಾನೂನಿನ ಕೆಳಗೆ ಅಲ್ಲಾಹನ ಮಾರ್ಗದಲ್ಲಿ ಸೆರೆಯಾಳಾಗಿ ಕಷ್ಟತೆಗಳನ್ನು ಸಹಿಸುವ ಸೌಭಾಗ್ಯ ಪಡೆದ ಮೊದಲ ಅಹ್ಮದಿಯರಾಗಿದ್ದರು. ಸೆಶನ್ ಕೋರ್ಟ್ ಅವರ ಪರವಾಗಿ ತೀರ್ಪು ನೀಡಿದ್ದರು

ಆದರೆ ವಿರೋಧಿಗಳು ಹೈಕೋರ್ಟಿನಲ್ಲಿ ಅಪೀಲ್ ಮಾಡಿದಾಗ ಹೈಕೋರ್ಟಿನ ಜಸ್ಟಿಸ್ ಅಬ್ದುಲ್ ಮಜೀದ್ ಪ್ರವಾದಿತ್ವದ ನಿಂದನೆಯ ಮೊಕದ್ದಮೆಯಲ್ಲಿ ಅವರು ಜಾಮೀನು ರದ್ದುಗೊಳಿಸಿದರು. ಅವರಿಗೆ ಶಿಕ್ಷೆ ವಿಧಿಸಲು ಆ ಸಮಯದಲ್ಲಿ ಸಾಧ್ಯವಾದಷ್ಟು ಪ್ರಯತ್ನಗಳನ್ನು ವಿರೋಧಿಗಳು ಮಾಡಿದ್ದರು. ಇಂಗ್ಲಿಷ್ ಮತ್ತು ಉರ್ದುವಿನಲ್ಲಿ ಪಂಫ್ಲೆಟ್‌ಗಳನ್ನು ವಿತರಿಸಿದ್ದರು. ತುಂಬ ಕೆಟ್ಟದಾದ ಪದಗಳನ್ನು ಅವರ ಬಗ್ಗೆ ಉಪಯೋಗಿಸಿದ್ದರು. ಹೇಗಿದ್ದರೂ ಹಬೀಬುಲ್ಲಾಹ್ ಸಾಹಿಬ್‌ರು ಅತ್ಯಂತ ಧೈರ್ಯದಿಂದ ಮತ್ತು ಶೌರ್ಯದಿಂದ ಅಲ್ಲಾಹನ ಸಂಪ್ರೀತಿಯಲ್ಲಿ ತೃಪ್ತಿಪಡುತ್ತಾ ಸೆರೆಮನೆವಾಸದ ಕಷ್ಟತೆಗಳನ್ನು ಸಹಿಸಿದ್ದರು. ಅನಂತರ ಕೆಲವೇ ತಿಂಗಳಲ್ಲಿ ಅವರು ಬಿಡುಗಡೆಗೊಳ್ಳುವಂತೆ ಅಲ್ಲಾಹನು ಮಾಡಿದನು. ಇವರು ನಿಯತವಾಗಿ ತಹಜ್ಜುದ್ ನಮಾಜ಼್ ಮತ್ತು ಐದು ಹೊತ್ತಿನ ನಮಾಝ಼್‌ಗಳನ್ನು ಅನುಷ್ಠಿಸುವವರಾಗಿದ್ದರು. ಕೊನೆಯುಸಿರು ವರೆಗೆ ನಮಾಝ಼್ ಸ್ಥಿರಗೊಳಿಸಲು ಮಕ್ಕಳನ್ನು ಉಪದೇಶಿಸುತ್ತಿದ್ದರು. ಅತ್ಯಂತ ಸ್ನೇಹಮಯಿ, ಇತರರನ್ನು ಸಾಂತ್ವನಪಡಿಸುವ, ವಿನಯಾನ್ವಿತ ಮತ್ತು ಖಿ಼ಲಾಫತಿನ ಸತ್ಯಸಂಧರಾದ ಪ್ರೇಮಿಯಾಗಿದ್ದರು. ಖ಼ಲೀಫತುಲ್ ಮಸೀಹ್‌ರ ಖುತ್‌ಬ ಮತ್ತು ಇತರ ಭಾಷಣಗಳನ್ನು ಸಕ್ರಮವಾಗಿ ಕೇಳುತ್ತಿದ್ದರು. ಮಾತ್ರವಲ್ಲ, ಖುತ್‌ಬದ ಸಮಯದಲ್ಲಿ ಎಲ್ಲ ಕೆಲಸಗಳನ್ನು ಬಿಟ್ಟುಕೊಂಡು ಖುತ್‌ಬವನ್ನು ಕೇಳಲು ಮನೆಯವರೊಂದಿಗೆ ಹೇಳುತ್ತಿದ್ದರು ಮತ್ತು ತನ್ನ ಉಪಸ್ಥಿತಿಯಲ್ಲಿ ಎಲ್ಲರೂ ಕೇಳುವಂತೆ ಮಾಡುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಮೂಸಿಯಾಗಿದ್ದರು. ಒಂಬತ್ತರಲ್ಲಿ ಒಂದು ಭಾಗದ ವಸಿಯ್ಯತ್ ಮಾಡಿದ್ದರು. ದಿವಂಗತರು ಪತ್ನಿಯಾದ ರುಖಿಯಾ ಬೇಗಂ ಸಾಹಿಬರನ್ನಲ್ಲದೆ ಐವರು ಪುತ್ರರನ್ನು ಮತ್ತು ಒಬ್ಬಳು ಪುತ್ರಿಯನ್ನು ಅಗಲಿರುವರು. ಇವರ ಒಬ್ಬ ಮಗನಾದ ಹಸೀಬ್ ಅಹ್ಮದ್ ಸಾಹಿಬ್ ಜಮಾಅತಿನ ಮುಬಲ್ಲಿಗ್ ಆಗಿರುವರು. ಫರ್ಝ್ಲೋ ಉಮರ್ ಫೌಂಡೇಶನನ ಇಂಗ್ಲಿಷ್ ಡೆಸ್ಕಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಇವರ ಮಕ್ಕಳಿಗೂ ಇವರ ಒಳಿತುಗಳನ್ನು ಜಾರಿಗೊಳಿಸಲು ಸೌಭಾಗ್ಯ ನೀಡಲಿ.

ಮುಂದಿನ ಜನಾಝ಼ ಖ಼ಲೀಫ ಬಶೀರುದ್ದೀನ್ ಸಾಹಿಬ್‌ರದ್ದಾಗಿದೆ. ನವೆಂಬರ್ 30ರಂದು 86ನೇ ವಯಸ್ಸಿನಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಭಾರತದ ಫೀರೋಝ಼್‌ಪೂರ್ ಪಟ್ಟಣದಲ್ಲಿ ಜನಿಸಿದ್ದರು. ಇವರು ಡಾಕ್ಟರ್ ಖ಼ಲೀಫ ತಖಿಯುದ್ದೀನ್ ಸಾಹಿಬ್‌ರ ಮಗನಾಗಿದ್ದರು. ಹಝ್ರತ್ ಖ಼ಲೀಫ ರಶೀದುದ್ದೀನ್ ಸಾಹಿಬ್‌ರ ಮೊಮ್ಮಗನಾಗಿದ್ದರು. ಹಝ್ರತ್ ಡಾಕ್ಟರ್ ಖ಼ಲೀಫ ರಶೀದುದ್ದೀನ್ ಸಾಹಿಬ್‌ರು ಹಝ್ರತ್ ಖ಼ಲೀಫತುಲ್ ಮಸೀಹ್ ಸಾನಿಯ ಮೊದಲ ಪತ್ನಿಯಾದ ಉಮ್ಮೇ ನಾಸಿರರ ತಂದೆಯಾಗಿದ್ದರು.

ಹಝ್ರತ್ ಖ಼ಲೀಫ ರಶೀದುದ್ದೀನ್ ಸಾಹಿಬ್‌ರ ಧನತ್ಯಾಗದ ಬಗ್ಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ಬಹಳ ಪ್ರಶಂಸೆಯ ಮಾತುಗಳನ್ನು ಬರೆದಿದ್ದರು. ಹೇಗಿದ್ದರೂ ದಿವಂಗತರು ಇವರ ಸಂತಾನ ಪರಂಪರೆಯವರಾಗಿದ್ದರು. ಜಮಾಅತಿನ ಕೆಲಸಗಳಲ್ಲಿ ಭಾಗವಹಿಸುತ್ತಿದ್ದರು. ಅಹ್ಮದಿಯೇತರರನ್ನು ತಮ್ಮ ಮನೆಗೆ ಕರೆಸಿಕೊಂಡು ತಬ್ಲೀಗ್ ಮಾಡುತ್ತಿದ್ದರು. ಇವರು ಸ್ವೀಡನಿನಲ್ಲಿ ವಿವಿಧ ಸ್ಥಳಗಳಲ್ಲಿ ಇದ್ದರು. ಅನಂತರ 1998ರಲ್ಲಿ ಪುನಃ ಸ್ವೀಡನಿಗೆ ಹೋದರು. 1999ರಲ್ಲಿ ಅಲ್ಲಿ ಅವರಿಗೆ ಹೃದಯಾಘಾತ ಉಂಟಾಯಿತು. ಆರೋಗ್ಯವಂತರಾದ ನಂತರ ಪುನಃ ಮಸೀದಿಯ ಕೆಲಸಗಳಲ್ಲಿ ಮಗ್ನರಾದರು. ತಬ್ಲೀಗಿನ ಸೆಕ್ರಟರಿ ಸಹ ಆಗಿದ್ದರು. ಪ್ರತಿ ವರ್ಷ ಇಲ್ಲಿ ತಮ್ಮ ಪತ್ನಿ ಮಕ್ಕಳೊಂದಿಗೆ ಯು.ಕೆ.ಜಲ್ಸಕ್ಕೆ ಬರುತ್ತಿದ್ದರು. ದಿವಂಗತರು ಪತ್ನಿಯನ್ನಲ್ಲದೆ ಮೂವರು ಪುತ್ರಿಯರನ್ನು ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ಇವರ ಪತ್ನಿ ಆಂಗ್ಲೇಯರಾಗಿದ್ದರು. ಕ್ರೈಸ್ತ ಧರ್ಮದಿಂದ ಅಹ್ಮದಿಯರಾಗಿದ್ದರು. ಆದರೆ ಬಹಳ ಲಜ್ಜೆಯ ವಸ್ತ್ರಗಳನ್ನು ಧರಿಸುವ ಮತ್ತು ಪರ್ದಾ ಧರಿಸುವ ಸ್ತ್ರೀಯಾಗಿದ್ದಾರೆ. ಅತ್ಯಂತ ಸರಳವಾಗಿ ಜೀವನ ಸಾಗಿಸುವವರಾಗಿದ್ದಾರೆ. ಧಾರ್ಮಿಕ ಅರಿವು ಪಡೆಯುವ ಆಸಕ್ತಿಯನ್ನು ಸಹ ಹೊಂದಿದ್ದಾರೆ. ಅದರ ಪ್ರಕಾರ ನಡೆಯಲು ಉತ್ತಮ ರೀತಿಯಲ್ಲಿ ಪ್ರಯತ್ನ ಸಹ ಮಾಡುತ್ತಿರುತ್ತಾರೆ. ಅಲ್ಲಾಹನು ಇವರ ನಂಬಿಕೆ ಮತ್ತು ದೃಢವಿಶ್ವಾಸವನ್ನು ವರ್ಧಿಸಲಿ. ಇವರ ಮಕ್ಕಳಿಗೂ ಇವರ ಒಳಿತುಗಳ ಪ್ರಕಾರ ನಡೆಯಲು ಸೌಭಾಗ್ಯ ನೀಡಲಿ. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ.

ಮುಂದಿನ ಜನಾಝ಼ ಖ಼ಲೀಫ ರಫೀಉದ್ದೀನ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಅಮೀನ ಅಹ್ಮದ್ ಸಾಹಿಬರದ್ದಾಗಿದೆ. ಅಕ್ಟೋಬರ್ 19ಕ್ಕೆ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಗಿಯಾನದವರಾಗಿದ್ದರು. ಗಿಯಾನಾದ ಪ್ರಸಿದ್ಧ ವ್ಯಾಪಾರಸ್ಥರ ಮನೆತನದಲ್ಲಿ 1940ರಲ್ಲಿ ಜನಿಸಿದ್ದರು. ಲಂಡನಿನನಲ್ಲಿ ತನ್ನ ವಿದ್ಯಾಭ್ಯಾಸದ ಕಾಲದಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಅದೇ ಕಾಲದಲ್ಲಿ ಇವರ ವಿವಾಹ ಡಾಕ್ಟರ್ ಖ಼ಲೀಫ ತಖಿಯುದ್ದೀನ್ ಸಾಹಿಬ್‌ರ ಮಗನಾದ ಆರ್ಡ ಅಹ್ಮದ್ ಸಾಹಿಬ್‌ರೊಂದಿಗೆ ಆಯಿತು. ಹಝ್ರತ್ ಖ಼ಲೀಫ ರಶೀದುದ್ದೀನ್ ಸಾಹಿಬ್‌ರ ಸಂತಾನ ಪರಂಪರೆಯವರಾಗಿದ್ದರು. ದಿವಂಗತರು ಸಹಾನುಭೂತಿ ಹೊಂದಿದ್ದ, ಜನರ ಪಾಲನೆ ಪೋಷಣೆ ಮಾಡುವ ಮತ್ತು ಅತಿಥಿ ಸತ್ಕಾರ ಮಾಡುವ ಸ್ತ್ರೀಯಾಗಿದ್ದರು. ನಮಾಝ಼ನ್ನು ನಿಯತವಾಗಿ ನಿರ್ವಹಿಸುತ್ತಿದ್ದರು. ಯಾವಾಗಲೂ ತನ್ನ ನಮಾಝ಼್‌ಗಳ ಬಗ್ಗೆ ಗಮನವಿತ್ತು. ಆರೋಗ್ಯ ಸರಿಯಿಲ್ಲದ ಸಮಯದಲ್ಲೂ ತಹಜ್ಜುದ್ ನಮಾಜ಼್ ನಿರ್ವಹಿಸುತ್ತಿದ್ದರು. ಪವಿತ್ರ ಖುರ್‌ಆನ್ ನಿಯತವಾಗಿ ಪಾರಾಯಣ ಮಾಡುತ್ತಿದ್ದರು. ರೋಗಗ್ರಸ್ತರಾಗಿದ್ದರೂ ಬ್ರಿಟನಿನ ಎಲ್ಲ ಜಲ್ಸಗಳಲ್ಲೂ ಭಾಗವಹಿಸುತ್ತಿದ್ದರು. ದುಆಗಳ ಮೇಲೆ ದೃಢವಿಶ್ವಾಸ ಹೊಂದಿದ್ದರು. ಖಿ಼ಲಾಫತ್‌ನೊಂದಿಗೆ ನಿಷ್ಠೆ ಮತ್ತು ಪ್ರಾಮಾಣಿಕತೆಯ ಸಂಬಂಧವನ್ನು ಹೊಂದಿದ್ದರು. ನನ್ನನ್ನು ಭೇಟಿಯಾದಾಗಲೆಲ್ಲ ಬಹಳ ವಿನಯದಿಂದ ಭೇಟಿಯಾಗುತ್ತಿದ್ದರು ಮತ್ತು ದುಆಗಳನ್ನು ಮಾಡಲು ಹೇಳುತ್ತಿದ್ದರು. ಅಲ್ಲಾಹನು ಇವರೊಡನೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ. ಇವರ ಮಕ್ಕಳಿಗೂ ಜಮಾಅತಿನೊಂದಿಗೆ ದೃಢವಾದ ಸಂಬಂಧವಿರಿಸಲು ಸೌಭಾಗ್ಯ ನೀಡಲಿ.

****************

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಅಲ್ಲಾಹನು ಆ ಸಂತೋಷಗಳ ಮಾರ್ಗ ಬಹು ಬೇಗ ಸರಳಗೊಳಿಸುವಂತಾಗಲಿ. ಮುಸ್ಲಿಂ ಜನಾಂಗಕ್ಕೂ ಸದ್ಬುದ್ಧಿ ದಯಪಾಲಿಸಲಿ. ಅವರು ವಾಗ್ದತ್ತ ಮಹದಿ ಮಸೀಹರನ್ನು ನಂಬುವವರಾಗಲಿ, ಲೋಕಕ್ಕೂ ಸದ್ಬುದ್ಧಿ ದೊರೆಯಲಿ. ಅದು ಅಲ್ಲಾಹ್ ಮತ್ತು ಅವನ ದಾಸರ ಹಕ್ಕುಗಳನ್ನು ಪಾಲಿಸುವತ್ತ ಗಮನ ಹರಿಸುವಂತಾಗಲಿ, ಅಲ್ಲಾಹನು ಪ್ರತಿ ದೇಶದಲ್ಲಿ, ಪ್ರತಿಯೊಬ್ಬ ಅಹ್ಮದಿಗೆ ತನ್ನ ಶರಣದಲ್ಲಿಟ್ಟುಕೊಂಡು ಶಾಂತಿಯನ್ನು ದಯಪಾಲಿಸಲಿ. ಈ ವರ್ಷ ಪ್ರತಿಯೊಂದು ಅಹ್ಮದಿಗೋಸ್ಕರ ಪ್ರತಿಯೊಬ್ಬ ಮಾನವನಿಗೆ ಅಲ್ಲಾಹನ ಅನುಗ್ರಹಗಳ ಕಾರುಣ್ಯಗಳ ವರ್ಷ ಆಗಲಿ ಮತ್ತು ನಮ್ಮ ನ್ಯೂನತೆಗಳನ್ನು, ಕೊರತೆಗಳನ್ನು ಗತವರ್ಷದಲ್ಲಿ ಆದದ್ದು, ಅವನ ಅನಿಷ್ಟಕ್ಕೆ ಗುರಿಯಾಗಿದ್ದಲ್ಲಿ, ಅವನ ಅನುಗ್ರಹಗಳಿಂದ ವಂಚಿತರಾಗಿದ್ದಲ್ಲಿ ಅಲ್ಲಾಹನು ನಮ್ಮನ್ನು ರಕ್ಷಿಸುವಂತಾಗಲಿ ಮತ್ತು ತಮ್ಮ ಅನುಗ್ರಹಗಳಿಂದ ಕಾರುಣ್ಯಗಳಿಂದ ದಯಪಾಲಿಸಲಿ. ನಮ್ಮನ್ನು ನಿಜವಾದ ಸತ್ಯವಿಶ್ವಾಸಿಗಳನ್ನಾಗಿ ಮಾಡಲಿ. ಅಲ್ಲಾಹನು ನಮಗೆ ಇವೆಲ್ಲ ಪ್ರಾರ್ಥನೆಗಳನ್ನು ಮಾಡುವ ಭಾಗ್ಯ ದಯಪಾಲಿಸಲಿ.

************

## ಮಹೋನ್ನತನಾದ ದೇವ

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ:

"ನಮ್ಮ ದೇವನೇ ನಮ್ಮ ಸ್ವರ್ಗ. ನಮ್ಮ ಅತ್ಯುನ್ನತ ಸಂತೋಷಗಳು ನಮ್ಮ ದೇವನಲ್ಲಿವೆ. ಏಕೆಂದರೆ ನಾವು ಅವನನ್ನು ನೋಡಿರುವೆವು ಮತ್ತು ಪ್ರತಿಯೊಂದು ಸೌಂದರ್ಯವನ್ನು ನಾವು ಅವನಲ್ಲಿ ಕಂಡಿರುವೆವು. ಜೀವವನ್ನು ಬಲಿಯರ್ಪಿಸುವುದರಿಂದ (ದೇವನೆಂಬ) ಈ ಸಂಪತ್ತು ಸಿಗಬಹುದಾದರೆ ಹಾಗೆ ಪಡೆಯಲು ಅದು (ಆ ಸಂಪತ್ತು) ಅರ್ಹವಾಗಿದೆ. ಒಬ್ಬನು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳುವುದರಿಂದ ಪಡೆಯಬಹುದಾಗಿದ್ದರೆ ಹಾಗೆ ಖರೀದಿಸಲು ಯೋಗ್ಯವಾದ ಮಾಣಿಕ್ಯ ಇದಾಗಿದೆ. ಎಲೈ ಭಾಗ್ಯಹೀನರೇ, ನೀವು ಈ ಕಾರಂಜಿಯ ಕಡೆಗೆ ಓಡಿ ಬನ್ನಿರಿ. ಇದು ನಿಮ್ಮ ಬಾಯಾರಿಕೆಯನ್ನು ನೀಗಿಸುವುದು. ಇದು ನಿಮ್ಮನ್ನು ರಕ್ಷಿಸುವಂತಹ ಜೀವಜಲವನ್ನೀಯುವ ಕಾರಂಜಿಯಾಗಿದೆ. ನಾನೇನು ಮಾಡಲಿ? ಈ ಶುಭವಾರ್ತೆಯನ್ನು ಜನಹೃದಯಗಳಲ್ಲಿ ಹೇಗೆ ನೆಲೆವೂರುವಂತೆ ಮಾಡಲಿ? ಇವನೇ ನಿಮ್ಮ ದೇವನು ಎಂದು ಜನರು ಆಲಿಸುವಂತೆ ಮಾಡಲು ಯಾವ ಡೋಲು ಬಾರಿಸಿ ಪೇಟೆಗಳಲ್ಲಿ ಡಂಗುರ ಸಾರಲಿ? ಜನರು ಕಿವಿಗೊಟ್ಟು ಕೇಳುವಂತೆ ಮಾಡಲು ನಾನು ಯಾವ ಮದ್ದಿನಿಂದ ಚಿಕಿತ್ಸೆ ನಡೆಸಲಿ? ನೀವು ದೇವನಿಗೆ ಸೇರಿದವರಾಗುವಿರಾದರೆ, ದೇವನು ನಿಮ್ಮವನೇ ಆಗುವನು ಎಂದು ದೃಢವಾಗಿ ಅರಿತುಕೊಳ್ಳಿರಿ."

***(ಕಿಶ್ತೀ ನೂಹ್; ರೂಹಾನೀ ಖ಼ಝ಼ಾಇನ್ ಸಂಪುಟ 19, ಪುಟ 21 – 22)***


## ವಿಶೇಶ ಸೂಚನೆ

**"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.**

**ಮೊಬೈಲ್ ಸಂಖ್ಯೆ: 9866358609** (ವ್ಯವಸ್ಥಾಪಕರು)


**Love for All, Hatred for None**

**ಪ್ರೀತಿ ಯಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

*(ಪುಟ ಸಂಖ್ಯೆ 12ರ ಉಳಿದ ಭಾಗ)*

ಅವನು ಮತ್ತೆ ಕೇಳುತ್ತಾನೆ. ನೀವು ಆ ಮಸೀದಿಗೆ ಹೋಗುವವರೋ ಅಥವಾ ಬೇರೆ ಮಸೀದಿಗೆ, ಅವನು ಬೇರೆ ಮಸೀದಿಗೆ ಹೋಗುವವನಾಗಿದ್ದ. ಆಗ ರಕ್ಷಿಸುವವನು ಅವನನ್ನು ನೀನು ಕಾಫಿರ್ ಎಂದು ಹೇಳಿ ದೂಡುತ್ತಾನೆ. ಪಂಥಗಳನ್ನು ಎಣಿಸುವುದು ಪಂಥಗಳಲ್ಲ ಎನ್ನುವವರ ಕೆಲಸವಾಗಿದೆ. ನಾವಂತೂ ಪಂಥಗಳಾಗಿವೆ ಎಂದು ನಂಬುವವರಾಗಿದ್ದೇವೆ. ಜನರು ಹೇಳುತ್ತಾರೆ. ಚಂದ್ರ ಸೂರ್ಯ ಗ್ರಹಣದ ಹದೀಸ್ ದುರ್ಬಲವಾಗಿದೆ ಎಂದು. ಆದರೆ ಅದು ಸಾಬೀತಾದಾಗ ದುರ್ಬಲ ಆಗುವುದಿಲ್ಲ. ಇಡೀ ಜಗತ್ತಿನಲ್ಲಿ ಒಬ್ಬನೇ ನೇತಾರನ ಅಡಿಯಲ್ಲಿ ಜಮಾಅತ್ ಎಂದು ಹೇಳಿಕೊಳ್ಳುವ ಯಾವುದೇ ಒಂದು ಜಮಾಅತಿನ ಹೆಸರು ತಿಳಿಸಿರಿ. ಜಮಾಅತ್ ಅಧ್ಯಯನ ಹೇಳುತ್ತಿದೆ. ಆದರೆ ಅದು ಒಂದೇ ದೇಶದಲ್ಲಿದೆ. ಆದರೆ ಜಮಾಅತ್ ಅಹ್ಮದಿಯಾ ಆಗಿದೆ, ನೀವು ಎಲ್ಲಿಯಾದರೂ ಹೋಗಿ, ಆಫ್ರಿಕಾ, ಯೂರೋಪ್, ಫಾರ್‌ಈಸ್ಟ್, ಆಸ್ಟ್ರೇಲಿಯಾ, ದಕ್ಷಿಣ ಅಮೇರಿಕಾ, ಒಂದೇ ಜಮಾಅತ್ ಆಗಿರುತ್ತದೆ. ಉಳಿದವರು ಒಪ್ಪುವುದಿಲ್ಲ ಎಂದರೆ ಒಪ್ಪದಿರಲಿ, ನಿಮ್ಮ ಕೆಲಸ ಪ್ರಚಾರ (ತಬ್ಲೀಗ್) ಮಾಡುವುದಾಗಿದೆ. ಸಂದೇಶ ತಲುಪಿದೆ, ಮಾರ್ಗದರ್ಶನ ನೀಡುವುದು ಅಲ್ಲಾಹ ಕೆಲಸವಾಗಿದೆ. ಅವರು ಮತ್ತೆ ಹೇಳಿದರು. ಹದೀಸ್ ಸರಿಯೋ ತಪ್ಪೋ ಎಂಬುದನ್ನು ಜಮಾಅತ್ ಹೇಗೆ ನಿರ್ಧರಿಸುತ್ತದೆ?

ಹುಝೂರ್ ಹೇಳಿದರು. ಹಝ್ರತ್ ಮಸೀಹ್ ಮೌಊದ್(ಅ) ನಮಗೆ ಮಾರ್ಗದರ್ಶನಕ್ಕಾಗಿ ಮೂರು ವಿಧಾನಗಳನ್ನು ತಿಳಿಸಿದ್ದಾರೆ. ಖುರ್‌ಆನ್, ಹದೀಸ್ ಮತ್ತು ಸುನ್ನತ್, ಖುರ್‌ಆನ್ ಮತ್ತು ಸುನ್ನತ್‌ಗೆ ವಿರುದ್ಧವಾಗಿರುವ ಹದೀಸುಗಳು ತಪ್ಪಾಗಿವೆ. ಹದೀಸುಗಳು ಮತ್ತೆ ಸಂಗ್ರಹಿಸಲಾಗಿದೆ. ಖುರ್‌ಆನ್‌ಗೆ ವಿರುದ್ಧವಲ್ಲದ ಹದೀಸುಗಳು ಸರಿಯಾಗಿವೆ ಆರು ಹದೀಸುಗಳ "ಸಹೀಹ್ ಸಿತ್ತ" ಅದು ಅಧ್ಯಯನವಾದುದು.

* ಇನ್ನೋರ್ವ ವಿದ್ಯಾರ್ಥಿನಿ ಪ್ರಶ್ನೆ ಕೇಳಿದರು. ಇಸ್ಲಾಮ್ ಪುರುಷರಿಗೆ ಎರಡನೆಯ, ಮೂರನೆಯ, ನಾಲ್ಕನೆಯ ವಿವಾಹವಾಗಲು ಅನುಮತಿ ನೀಡುತ್ತದೆ. ಕೆಲ ಪುರುಷರು ವಿಷಯ ಅಡಗಿಸಿಟ್ಟು ಎರಡನೆಯ ವಿವಾಹ ಮಾಡಿಕೊಳ್ಳುತ್ತಾರೆ. ಕೆಲ ವರ್ಷಗಳ ನಂತರ ತಿಳಿಯುತ್ತದೆ. ಅವರು ಎರಡನೆಯ ವಿವಾಹವಾಗಿದ್ದಾರೆಂದು. ಇಂತಹ ವಿವಾಹಕ್ಕೆ ಸುನ್ನತ್ ಎನ್ನಬಹುದೆ?

ಹುಝೂರ್ ಹೇಳಿದರು. ಈ ಆಜ್ಞೆ ಯುದ್ಧಗಳ ಸಮಯದ್ದಾಗಿತ್ತು. ಅಥವಾ ಮಹಿಳೆಯರು ಅತ್ಯಧಿಕ ಸಂಖ್ಯೆಯಲ್ಲಿರುವ ಸಮಯ ಆಗಬಹುದು. ಹಝ್ರತ್ ಮಸೀಹ್ ಮೌಊದ್(ಅ) ಪುರುಷರ ಎರಡು ಮೂರು ಅಗತ್ಯಗಳನ್ನು ಉಲ್ಲೇಖಿಸಿದ್ದಾರೆ. ಆ ಕಾರಣಗಳಿದ್ದರೆ ಸರಿ ಎನ್ನಬಹುದು. ಆದರೆ ಅದರ ಜೊತೆಯಲ್ಲಿಯೇ ಹೇಳಿದರು. ನ್ಯಾಯ ಒದಗಿಸಿರಿ ಮತ್ತು ಸಮಾಜದಲ್ಲಿ ಅದನ್ನು ಬಹಿರಂಗಗೊಳಿಸಿರಿ. ಯಾರಾದರೂ ಅಡಗಿಸಿಟ್ಟು ವಿವಾಹ ಮಾಡಿಕೊಂಡಿದ್ದರೆ ಅದು ತಪ್ಪಾಗುತ್ತದೆ. ಆದರೆ ಈ ವಿವಾಹದಲ್ಲಿ ಯಾವನೇ ಪುರುಷ ತಪ್ಪಿತಸ್ಥನೆಂದಾದರೆ ಮಹಿಳೆಯರೂ ಇದರಲ್ಲಿ ಸೇರಿರುತ್ತಾರೆ. ಆ ಮಹಿಳೆ ಇದು ಅವನ ಎರಡನೆಯ ವಿವಾಹ ಎಂದು ತಿಳಿಸಿದ್ದರೆ ಗೊತ್ತಿದ್ದೂ ಅವನ ಜೊತೆ ವಿವಾಹವಾದರೆ ಅಷ್ಟೇ ತಪ್ಪಿತಸ್ಥ ಅವಳಾಗುತ್ತಳೆ. ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. ಸಂಬಂಧದ ಮೇಲೆ ಸಂಬಂಧ ಯಾಚಿಸಬೇಡಿರಿ. ಮಹಿಳೆ ಮಹಿಳೆಯ ಮೇಲೆ ದೌರ್ಜನ್ಯ ಮಾಡಬಾರದು ಇನ್ನೊಬ್ಬರ ಪತಿಯನ್ನು ಪುಸಲಾಯಿಸಿ ಮದುವೆಯಾಗುವುದು ಆ ಮಹಿಳೆಯ ಮೇಲೆ ದೌರ್ಜನ್ಯವಾಗಿದೆ. ಪುರುಷನು ಸಂತಾನಗೋಸ್ಕರ ಮತ್ತು ತನ್ನ ಅಗತ್ಯಗಳಿಗಾಗಿ ಎರಡನೆಯ ವಿವಾಹ ಮಾಡಿಕೊಳ್ಳಬಹುದಾಗಿದೆ. ಮೊದಲು ಪ್ರೇಮ ನಡೆಸಿ ಮತ್ತೆ ವಿವಾಹವಾಗುವುದು ಸರಿ ಅಲ್ಲ. ಹಝ್ರತ್ ಮಸೀಹ್ ಮೌಊದ್(ಅ) ಅದನ್ನು ಪ್ರಬಲವಾಗಿ ವಿರೋಧಿಸಿದ್ದಾರೆ. ಇಸ್ಲಾಂ ಅದನ್ನು ಒಪ್ಪುವುದಿಲ್ಲ. ಅಲ್ಲಾಹನು ಅನುಮತಿ ನೀಡಿದ ಸ್ಥಳದಲ್ಲಿ ಈ ಉಪದೇಶವು ಮಾಡಿರುತ್ತದೆ. ಎಲ್ಲರೊಂದಿಗೆ ನ್ಯಾಯದಿಂದ ವರ್ತಿಸಿರಿ, ನ್ಯಾಯವೆಂದರೆ ಸರಿಸಮಾನದ ವರ್ತನೆ ಇರಬೇಕು. ಅವರ ಹಕ್ಕುಗಳನ್ನು ಪಾಲಿಸಬೇಕು. ಮೊದಲ ಪತ್ನಿಗೆ ಮೂರು ಮಕ್ಕಳಿವೆ, ಬೇರೆ ಮದುವೆಯಾದನು, ಮೊದಲಿನ ಪತ್ನಿಯೆಡೆ ಲಕ್ಷ್ಯವೆ ಇಲ್ಲ, ಹೀಗಾಗಬಾರದು.

* ಆಗ ಪ್ರಶ್ನೆ ಕೇಳಿದ ವಿದ್ಯಾರ್ಥಿನಿ ಕೇಳಿದರು. ಅದರಲ್ಲಿ ಮೊದಲ ಪತ್ನಿಯ ಒಪ್ಪಿಗೆಯ ಎಷ್ಟು ಅವಶ್ಯಕತೆಯಿದೆ?

ಹುಝೂರ್ ಹೇಳಿದರು. ನ್ಯಾಯದಿಂದ ವರ್ತಿಸಿರಿ. ಸರಿಸಮಾನ ರೀತಿಯಲ್ಲಿ ವರ್ತಿಸಿರಿ. ಮೊದಲ ಪತ್ನಿಗೆ ತಿಳಿಸುವುದು ಅವಶ್ಯವಾಗಿದೆ. ಅನುಮತಿ ಪಡೆಯಬೇಕು ಎಂದು ಬರೆಯಲ್ಪಟ್ಟಿಲ್ಲ.

ವಿದ್ಯಾರ್ಥಿನಿಯರ ಈ ಕ್ಲಾಸ್ 8 ಗಂಟೆ 45 ನಿಮಿಷದವರೆಗೆ ನಡೆಯಿತು. ಅನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**ಆಮೀನ್ ಸಮಾರಂಭ**

ಒಂಭತ್ತುವರೆ ಗಂಟೆಗೆ ಹುಝೂರ್ ಮಸೀದಿಯ ಪುರುಷರ ಸಭಾಂಗಣಕ್ಕೆ ಆಗಮಿಸಿದರು. ಕಾರ್ಯಕ್ರಮದನ್ವಯ ಆಮೀನ್ ಸಮಾರಂಭ ಏರ್ಪಡಿಸಲಾಗಿತ್ತು.

ಹುಝೂರ್ ಈ ಕೆಳಗೆ ನಮೂದಿತ 26 ಬಾಲಕ ಬಾಲಕಿಯರನ್ನು ಪವಿತ್ರ ಖುರ್‌ಆನ್‌ನಿಂದ ಒಂದೊಂದು ವಚನ ಆಲಿಸಿದರು ಮತ್ತು ಕೊನೆಯಲ್ಲಿ ದುಆ ಮಾಡಿಸಿದರು.

ಕೆಳಗೆ ನಮೂದಿತ ಅದೃಷ್ಟಶಾಲಿ ಬಾಲಕ ಬಾಲಕಿಯರು ಈ ಆಮೀನ್ ಸಮಾರಂಭದಲ್ಲಿ ಭಾಗವಹಿಸಿದ್ದರು.

ಇಸಾಮ್ ಚೌದರಿ, ಮೊನಿಸ್ ಅಹ್ಮದ್, ಲುಬೈದ್ ಅಹ್ಮದ್, ಫಾರಾನ್ ಖ್ವಾಜ, ಸಫೀರ್ ಅಹ್ಮದ್ ಸೋಹಲ್, ಮುಫ್‌ಲಿಹ್ ರೂಹಾನ್ ಖಾಲಿದ್, ಇನ್‌ತೆಸಾರ್ ಅಹ್ಮದ್, ಸಾಹ್ ಝೋಬ್ ಖುರೈಶಿ, ನುಮಾನ್ ಅಹ್ಮದ್ ಮುಝಫ್ಫರ್, ತಮ್‌ಸೀಲ್ ಅಹ್ಮದ್ ಅರ್‌ಸಲಾನ್, ಖವೀಮ್ ಅಹ್ಮದ್ ಕಾಶಿಫ್, ಲುಬೈದ್ ಅಹ್ಮದ್, ಅಸದ್ ಇಮ್ರಾನ್ ಮಿರ್ಝಾ, ಅತ್‌ಹರ್ ಅಹ್ಮದ್, ಶಹರ್ ಯಾರ್ ಮಲಿಕ್, ಇಹ್ಸಾನ್ ಅಹ್ಮದ್ ತಾಹಿರ್.

ಅಝೀಝು ಮಾರಿಯ ಹಫೀಝ್, ಉರೂಸ ಶಾಹ್, ಅಮತುಲ್ ಮುಸವ್ವಿರ್ ನಾಯಿಲ, ಅಲೀಸ ಅಹ್ಮದ್, ನಮೂದೆ ಸೆಹ್ರಾನ್, ಸೂಫಿಯಾ ನಾಝ್, ಶುಮಾಈಝು ಖಾನ್, ಶಾಝಿಯಾ ಸೀದ್ ಬಾಜ್ವಹ್, ಆಈಶ ಅಹ್ಮದ್, ಮೀಶಾ ಝುಕಾ.

ಅನಂತರ ಹುಝೂರ್ ಮಗ್ರಿಬ್ ಇಶಾಅ ನಮಾಝುಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಿರ್ವಹಣೆಯ ನಂತರ ಹುಝೂರ್ ತಮ್ಮ ವಸತಿನಿಲಯಕ್ಕೆ ತೆರಳಿದರು.

**(ಅಖ್ಬಾರ್ ಬದರ್ ಉರ್ದು 25 ಜೂನ್, 2 ಜುಲೈ 2015)**

**ವಿವಾಹ ಪ್ರಚಾರಪಡಿಸಲು ದಫ್ ಉಪಯೋಗಿಸಬಹುದು ಹೊರತು ಡೋಲು ಬಾರಿಸುತ್ತಾ ಕುಣಿಯುವುದು ನಿಷಿದ್ಧವಾಗಿದೆ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಕೆಟ್ಟ ವಸ್ತುಗಳು ಹರಾಮ್ ಆಗಿದೆ ಮತ್ತು ಶುದ್ಧ ವಸ್ತುಗಳು ಹಲಾಲ್ ಆಗಿದೆ. ಅಲ್ಲಾಹನು ಯಾವುದೇ ಶುದ್ಧ ವಸ್ತುಗಳನ್ನು ನಿಷಿದ್ಧ (ಹರಾಮ್) ಗೊಳಿಸುವುದಿಲ್ಲ. ಬದಲು ಎಲ್ಲ ಶುದ್ಧ ವಸ್ತುಗಳು ಹಲಾಲ್ (ಧರ್ಮಬದ್ಧ) ಎನ್ನುತ್ತದೆ. ಆದರೆ ಶುದ್ಧ ವಸ್ತುಗಳೊಂದಿಗೆ ಅಶುದ್ಧ ವಸ್ತುಗಳನ್ನು ಬೆರಕೆ ಮಾಡಿದರೆ ಅದು ನಿಷಿದ್ಧವಾಗುತ್ತದೆ, ಈಗ ನೋಡಿ ವಿವಾಹವನ್ನು ಪ್ರಚಾರಪಡಿಸಲು ದಫ್ ಬಾರಿಸುವುದನ್ನು ಧರ್ಮಸಮ್ಮತವೆಂದಿದೆ. ಆದರೆ ಅದರಲ್ಲಿ ಡೋಲು ಬಾರಿಸುತ್ತಾ ಕುಣಿಯುವುದು ಇತ್ಯಾದಿ ಸೇರಿಸುವುದನ್ನು ನಿಷಿದ್ಧಗೊಳಿಸಲಾಗಿದೆ. ಆದರೆ ನಬಿ ಕರೀಂ ಸಲ್ಲಲ್ಲಾಹು ಅಲೈಹಿವಸಲ್ಲಮರ ರೀತಿಯನ್ನು ಅನುಸರಿಸಿದರೆ ಯಾವುದೂ ನಿಷಿದ್ಧವಲ್ಲ.

**(ಮಲ್‌ಫೂಝಾತ್, ಸಂಪುಟ–5, ಪುಟ–354, ಮುದ್ರಣ ಖಾದಿಯಾನ್ 2003)**

**ವಿವಾಹ ಸಂದರ್ಭದಲ್ಲಿ ನಿಷ್ಪ್ರಯೋಜಕ ಸಂಗೀತ, ಕುಣಿತ ಹಾಗೂ ಹಾಡುಗಳನ್ನು ಹಾಡಲು ಅನುಮತಿ ಇಲ್ಲ.**

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್ (ಅತಬಿಅ) ಹೇಳುತ್ತಾರೆ: "ಸಂತೋಷದ ಸಂದರ್ಭಗಳಲ್ಲಿ ಅಲ್ಲಾಹನ ಅನುಗ್ರಹಗಳನ್ನು ಬೇಡುವ ವಿವಾಹವನ್ನು ಅಲ್ಲಾಹನು ಎಲ್ಲಾ ರೀತಿಯಿಂದ ಯಶಸ್ಸಿಗೊಳಿಸಲಿ. ಬರುವ ಪೀಳಿಗೆ ಇಸ್ಲಾಮ್ ಧರ್ಮದ ಸೇವಕರಾಗಿರಲಿ, ಅಲ್ಲಾಹನ ವಿಧೇಯ ದಾಸರಾಗಿರಲಿ ಎನ್ನುವ ಬದಲು ಅಜಾಗೃತಗೊಂಡು ಹಾಡುಗಳನ್ನು ಹಾಡುತ್ತ ಶಿರ್ಕ್ (ಬಹು ದೇವಾರಾಧನೆ) ಮಾಡುವವರಾಗಿರುತ್ತಾರೆ. ದೂರುಗಳು ಬರುತ್ತಿರುತ್ತವೆ ಆದುದರಿಂದ ಇಂತಹ ಮನೆಯವರಿಗೆ ನಾನು ಎಚ್ಚರಿಕೆ ನೀಡುತ್ತೇನೆ, ಈ ರೀತಿಯ ನಿಷ್ಪ್ರಯೋಜಕ ಹಾಗೂ ನಿರರ್ಥಕತೆಯಿಂದ ದೂರವಿರಬೇಕು, ಹೀಗೆಯೇ ಡ್ಯಾನ್ಸ್ ಕುಣಿತಗಳಿಂದ, ವಧುವಿನ ಮನೆಯಲ್ಲಿ ನಾನಾ ರೀತಿಯ ಶೃಂಗಾರಗಳು ಅಥವಾ ವಿವಾಹ ನಂತರ ವಧು ವಿವಾಹವಾಗಿ ವರನ ಮನೆಗೆ ಹೋದಾಗ ಅಲ್ಲಿ ಕೆಲವು ಸಂದರ್ಭಗಳಲ್ಲಿ ನಿಷ್ಪ್ರಯೋಜಕ ರೀತಿಯ ಸಂಗೀತ ಅಥವಾ ಹಾಡುಗಳಿಗೆ ಕುಣಿಯುತ್ತಾರೆ, ಇದಕ್ಕೆ ಯಾವ ಕಾರಣಕ್ಕೂ ಅನುಮತಿ ನೀಡಲಾಗುವುದಿಲ್ಲ."

**(ಖುತ್‌ಬಾತೆ ಮಸ್‌ರೂರ್, ಸಂಪುಟ–3, ಪುಟ–687)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE**
**1800–103–2131**

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 21 January 2021, Issue No. 03

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.500/- (Per Issue: 10/- ) (WEIGHT: 20-50, grms / issue)


## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 49ರ ವರದಿಯ ಉಳಿದ ಭಾಗ)**

* ವಿದ್ಯಾರ್ಥಿನಿ ಒಬ್ಬಾಕೆ ಕೇಳಿದರು. ಶಿಕ್ಷಕಿಯರಾಗಬಯಸುವ ಕೆಲ ಮಹಿಳೆಯರು ಹೇಳುತ್ತಿದ್ದರು. ಜನರು ಹೇಳುತ್ತಾರೆ. ನನಗೆ ನನ್ನ ಧರ್ಮ ತ್ಯಾಗ ಮಾಡಲು ಹೇಳುತ್ತದೆ ಎಂದು.

ಹುಝೂರ್ ಹೇಳಿದರು. ತ್ಯಾಗ ಮಾಡುತ್ತಿದ್ದೇನೆ ಎಂದರೆ ಅವರು ಹೇಳುವರು. ನಿಮ್ಮ ಧರ್ಮ ನಿಮ್ಮಿಂದ ತ್ಯಾಗ ಬಯಸುತ್ತದೆ ಎಂದು. ಪುರುಷರಿಂದ ಏಕೆ ಬಯಸುವುದಿಲ್ಲ. ಹಲವು ಜನರು ನಿಮಗೆ ದಯೆ ತೋರುವರು. ನೀವು ಅವರಿಗೆ ಹೇಳಿ ಅದರಿಂದ ಏನು ಪ್ರಯೋಜನ, ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಮೊದಲು ಪುರುಷರಿಗೆ ಕಣ್ಣುಗಳನ್ನು ಕೆಳಗಿರಿಸಲು ಆಜ್ಞೆ ನೀಡಿದೆ. ಹಲವು ಯೂರೋಪಿಯನ್ ಮಹಿಳೆಯರು ನಮ್ಮ ಜಲ್ಸ ಸಾಲಾನ ಉದಾಹಣರೆಗೆ ಯು.ಕೆ ಜಲ್ಸದಲ್ಲಿ ಪತ್ರಕರ್ತೆಯೊಬ್ಬಳು ಬಂದಿದ್ದರು. ದಿನವೆಲ್ಲ ಮಹಿಳೆಯರ ಆ ಮಾರ್ಕಿನಲ್ಲಿ ಕಳೆದರು. ಮೊದಲು ಅವಳು ಹೇಳುತ್ತಿದ್ದಳು. ಈ Segregation ಎಕೆ? ದಿನವೆಲ್ಲ ಕಳೆದ ನಂತರ ಸಂಜೆ ಬಂದು ಹೇಳಿದಳು. ನಾನು ಹೆಚ್ಚು ಸ್ವತಂತ್ರತೆಯಿಂದ ಇದ್ದೇನೆ. ನಾನು ಪುರುಷರ ಕಣ್ಣುಗಳನ್ನು ಎಳೆದುಕೊಂಡಿದ್ದೇನೆ ಎಂಬ ಅನುಭವವಾಯಿತು. ಅವರು ತಪ್ಪು ದೃಷ್ಟಿಯನ್ನು ಹಾಕುತ್ತಿದ್ದರು. ನಾನು ನನ್ನ ಸ್ವತಂತ್ರತೆಯಿಂದ ಇದ್ದ ಹಾಗಾಯಿತು. ಇಲ್ಲಿ ಎಲ್ಲಾ ಮಹಿಳೆಯರೆ ಕಾರ್ಯಪ್ರವೃತ್ತರಾಗಿದ್ದರು, ಮಹಿಳೆಯರಿಗೆ ಒಂದು value (ಮೌಲ್ಯ) ಇದೆ. ಇದನ್ನು ಇಸ್ಲಾಮ್ ಎತ್ತಿ ಹಿಡಿಯುತ್ತದೆ.

* ಆಗ ವಿದ್ಯಾರ್ಥಿನಿ ಒಬ್ಬಾಕೆ ಹೇಳಿದರು. ಈ ಸಮಾಜದಲ್ಲಿ ಅವರು ಹೇಳುತ್ತಾರೆ. ನೀವು ದಿನವೆಲ್ಲ ಮನೆಯಲ್ಲಿ ಬಯಸಿದ್ದನ್ನು ಧರಿಸಿಕೊಳ್ಳಿರಿ. ಆದರೆ ಶಾಲೆಗೆ ಬಂದು ಪರದೆ ಬೇಡ.

ಹುಝೂರ್ ಹೇಳಿದರು. ಶಾಲೆಯಲ್ಲಿರುವ ಸಮವಸ್ತ್ರ (uniform) ಧರಿಸಿಕೊಳ್ಳಿರಿ. ಮತ್ತು ಅವರನ್ನು ಹೇಳಿ ಶಿರದ ಮೇಲೆ ಹಿಜಾಬ್ (ಪರದೆ) ಧರಿಸುವುದು ನನ್ನ ಅಭ್ಯಾಸವಾಗಿದೆ. ಕೆಲ ಯೂರೋಪಿಯನ್ ವೃದ್ಧ ಮಹಿಳೆಯರು ಈಗಲೂ ಶಿರವನ್ನು ಮುಚ್ಚಿಕೊಳ್ಳುತ್ತಾರೆ. ಚಳಿಗಾಲದಲ್ಲಿ ಸ್ಕಾರ್ಫ್ ಅಲ್ಲದೇ ಕೊರಳಲ್ಲಿ ಮಫಲರ್ ಹಾಕಿಕೊಳ್ಳುತ್ತಾರೆ. ಉದಾಹರಣೆಗೆ ನೀವು Research ಮಾಡುತ್ತಿದ್ದರೆ, ಅದಕ್ಕಾಗಿ ಒಂದು special cap ಧರಿಸಬೇಕಾಗಿದ್ದಲ್ಲಿ ಧರಿಸಿಕೊಳ್ಳಿರಿ. ಆದರೆ ಆ ಕೋಣೆಯಿಂದ ಹೊರಗೆ ಬಂದ ನಂತರ ಸರಿಯಾದ ಬಟ್ಟೆಗಳನ್ನು ಧರಿಸಿಕೊಳ್ಳಿ. ಲಜ್ಜೆ (ಹಯಾ) ಮುಖ್ಯವಾಗಿದೆ. ಮಹಿಳೆ ತನ್ನ ಮಾನವನ್ನು ಕಾಪಾಡಿಕೊಳ್ಳಲು ಲಜ್ಜೆ ಇರಬೇಕು. ಇಲ್ಲಿ ಲಜ್ಜೆ ಎಂಬುದಿಲ್ಲ. ಆದುದರಿಂದ ಇಲ್ಲಿ ಬಹುದೊಡ್ಡ ಸಂಖ್ಯೆ (percentage) ವಿವಾಹಕ್ಕಿಂತ ಮೊದಲೇ ದಾರಿತಪ್ಪುತ್ತಾರೆ. ನಾವು ಕೇವಲ ತ್ಯಾಗ ಮಾಡುತ್ತಿಲ್ಲ. ಹೌದು ನೀವು ಇದನ್ನು ಹೇಳಬಹುದು. “ನನ್ನ ಧರ್ಮ ಹೀಗೆ ಮಾಡಲು ಅನುಮತಿ ನೀಡುವುದಿಲ್ಲ. ಆದುದರಿಂದ ನಾನು ದಾರಿ ತಪ್ಪುವುದು ಸಹಿಸಲಾಗುವುದಿಲ್ಲ. ಆದರೆ ತ್ಯಾಗ ಪದದ ಬಳಕೆ ಸರಿಯಲ್ಲ. ನೀವು ತ್ಯಾಗ ಪದವನ್ನು ಬಳಸಿಕೊಂಡರೆ ಇತರರು ನಿಮ್ಮ ಮೇಲೆ ಆಕ್ಷೇಪ ಎತ್ತುವರು.

* ಇನ್ನೊಬ್ಬಾಕೆ ವಿದ್ಯಾರ್ಥಿನಿ ಪ್ರಶ್ನೆ ಮಾಡಿದಳು. ಪವಿತ್ರ ಖುರ್‌ಆನ್‌ನಲ್ಲಿ ಪರದೆಯ ಕುರಿತು ಹಲವು ವಚನಗಳಿವೆ. ‘ಸಮಿಅನ ವ ಅತಲಿನ’ ಎಂದೂ ಹೇಳಲಾಗುತ್ತಿದೆ. ಆದರೆ ಇಲ್ಲಿ ಜನರು ಹೇಳುವುದು ಪರದೆಯು ಆಜ್ಞೆ ಇದೆ ಸರಿ, ಮೊದಲು ನಾನು ಆ ಆಜ್ಞೆಯನ್ನು ತಿಳಿದುಕೊಳ್ಳುತ್ತೇನೆ. ಮತ್ತೆ ನಡೆದುಕೊಳ್ಳುತ್ತೇನೆ. ಇಂತಹ ಜನರಿಗೆ ಹೇಗೆ ತಿಳಿಸುವುದು?

ಹುಝೂರ್ ಹೇಳಿದರು. ಅವರಿಗೆ ಹೇಳಬೇಕು. ತಿಳಿದುಕೊಳ್ಳಿರಿ. ಆದರೆ ತಿಳಿದುಕೊಳ್ಳಲು ಮೊದಲು ನಿಮ್ಮ ಮಿದುಳು ಸ್ವಚ್ಛಗೊಳಿಸಿಕೊಳ್ಳಿರಿ. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಪುರುಷರನ್ನು ನಂಬಬೇಡಿರಿ, ಅದು ಹೇಗೆಂದರೆ ನಾಯಿಯ ಮುಂದೆ ರೊಟ್ಟಿ ಹಾಕಿರಿ ಮತ್ತು ಹೇಳಿರಿ, ತಿನ್ನುವುದು ಬೇಡ ಎಂದು. ನೀವು ಪರದೆ ಬಿಟ್ಟರೆ ಪುರುಷರ ಗ್ಯಾರಂಟಿ ಏನು? ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ನೀವು ಪರದೆ ಇರಬಾರದು ಎನ್ನುತ್ತೀರಿ. ನಾನು ಒಪ್ಪುತ್ತೇನೆ. ಆದರೆ ನೀವು ಪುರುಷರು ಕೆಟ್ಟ ದೃಷ್ಟಿ ಹಾಕುವುದಿಲ್ಲ ಎಂಬ ಗ್ಯಾರಂಟಿ ನೀಡಬಲ್ಲಿರೇ? ಆಗ ವಿದ್ಯಾರ್ಥಿನಿ ಹೇಳಿದರು ಇಲ್ಲ. ಹುಝೂರ್ ಹೇಳಿದರು. ಪರದೆಯಿಂದ ಮಾನ ಮತ್ತು ಘನತೆ ಖಾಯಂ ಆಗುತ್ತದೆ. ಸಾಮಾನ್ಯವಾಗಿ ನಾನು ನೋಡುತ್ತೇನೆ. ಜನರು ಪರದೆ ಮಾಡುವ ಮಹಿಳೆಯರನ್ನು ಗೌರವಿಸುತ್ತಾರೆ. ಆದುದರಿಂದ ಹಝ್ರತ್ ರಸೂಲುಲ್ಲಾಹ್(ಸ) ಹೇಳಿದರು. “ಅಲ್ ಹಿಯಾವು ಮಿನಲ್ ಈಟೂನಿ” ಅಂದರೆ ಲಜ್ಜೆಯು ವಿಶ್ವಾಸದ ಭಾಗವಾಗಿದೆ. ಮಹಿಳೆಯ ಲಜ್ಜೆಯೇ ಅವಳ ಮಾನವನ್ನು ರಕ್ಷಿಸುತ್ತದೆ. ತನ್ನ ಮೇಲೆ ಆರೋಪಗಳನ್ನು ಬರುವ ಮೊದಲು, ಇತರರ ಬೆರಳುಗಳು ಎತ್ತುವ ಮೊದಲು, ಅವರು ತಮ್ಮ ಘನತೆಯನ್ನು ಕಾಪಾಡಿಕೊಳ್ಳಬೇಕು. ಕಾರಣಗಳಿಲ್ಲದೆ ಹುಡುಗರೊಡನೆ ಗೆಳೆತನ ಮಾಡಬಾರದು. ವಿಶ್ವವಿದ್ಯಾನಿಲಯಗಳಲ್ಲಿ ಓದುತ್ತೀರಿ. ಸಂಶೋಧನೆ ನಡೆಸುತ್ತೀರಿ ಸರಿ. ಅಲ್ಲಿ ಹುಡುಗರೊಡನೆ ಮತನಾಡಬೇಕಾಗುತ್ತದೆ. ಅದೇ ಪರಿಸರದಲ್ಲಿದ್ದು ಘನತೆಯಿಂದ ಮಾತನಾಡಿರಿ. ಆ ಪರಿಸರದಿಂದ ಹೊರಗೆ ಬಂದು ಅಂಗಡಿಗಳಲ್ಲಿ, ರೆಸ್ಟೋರೆಂಟ್‌ಗಳಲ್ಲಿ ಭೇಟಿಯಾಗುವುದು, ಸಂಶೋಧನೆಗೆ ಹೊರತಾದ ಮಾತನಾಡುವುದು ಸರಿಯಲ್ಲ. ಇಸ್ಲಾಮ್ ಅದಕ್ಕಾಗಿಯೇ ಹೇಳುವುದು ಘನತೆಯಿಂದ ಮಾತನಾಡಿರಿ, ಅದರಿಂದ ಪುರುಷರು ತಿಳಿಯುವವರು ನಾನು ಇಂತಹವರಿಂದ ತಪ್ಪು ದಾರಿ ಹಿಡಿಯಲು ಆಗುವುದಿಲ್ಲ, ಭಾವನೆಗಳನ್ನು ನಿಯಂತ್ರಿಸಲು ಇಸ್ಲಾಮ್ ಧರ್ಮ ಕಲಿಸುತ್ತದೆ. ಅದರ ಆಜ್ಞೆ ಪುರುಷರಿಗೂ ಇದೆ, ಮಹಿಳೆಯರಿಗೂ ಇದೆ. ಆದರೆ ಮಹಿಳೆಯರು ದುರ್ಬಲ ಮನೋಭಾವನೆ ಉಳ್ಳವರಾಗುತ್ತಾರೆ. ಬಹು ಬೇಗ ಪುರುಷರ ಮಾತುಗಳ ಜಾಲದಲ್ಲಿ ಬೀಳುತ್ತಾರೆ. ಅದಕ್ಕೆ ಅವರಿಗೆ ಹೇಳಲಾಗುತ್ತದೆ ಒಂದು ತಡೆ (Barriar)ಒಡ್ಡಬೇಕು. ಆ ತಡೆ (Barriar) ಪರದೆ ಆಗಿದೆ.

* ಇನ್ನೊರ್ವ ವಿದ್ಯಾರ್ಥಿನಿ ಪ್ರಶ್ನೆ ಮಾಡಿದರು. ಹುಝೂರ್ ಸುಮಾರು ಸಮಯವಾಯಿತು, ನೀವು ಹೆಂಬರ್ಗ್‌ಗೆ ಆಗಮಿಸಲಿಲ್ಲ?

ಹುಝೂರ್ ಹೇಳಿದರು. ಅಲ್ಲಿಯ ಮಹಿಳೆಯರು 100% ಪರದೆ ಮಾಡತೊಡಗಿದ್ದಾರೆಯೇ, ಸಂದರ್ಭ ಬಂದಾಗ ಅವಶ್ಯವಾಗಿ ಬರುವೆನು. ಕೆಲವರು ಪರದೆಯ ವಿಷಯದಲ್ಲಿ Extreme (ಸೀಮಾತೀತ) ಮಟ್ಟಕ್ಕೆ ಹೋಗುತ್ತಾರೆ. ನಾನು ಮುಂದೆಯೂ ಒಂದು ಉದಾಹರಣೆ ಕೊಟ್ಟಿದ್ದೆ. ಒಂದು ಚಿತ್ರ ಬಿಡಿಸಿದ್ದರು. ಕಾರಿನ ಮೇಲೆ ಶಟಲ್‌ಕಾಕ್ ಪರದೆ ಹಾಕಲಾಗಿತ್ತು. ಮತ್ತು ಹೀಗೆ ಬರೆಯಲಾಗಿತ್ತು. “ತಾಲಿಬಾನ್‌ಗಳು ಮಹಿಳೆಯರಿಗೆ Driving ಮಾಡುವ ಅನುಮತಿ ನೀಡಿದ್ದಾರೆ. ಇಸ್ಲಾಮ್ ಮಧ್ಯಸ್ಥಿಕೆಯ ಧರ್ಮವಾಗಿದೆ, ಮಧ್ಯಸ್ಥಿಕೆಯಲ್ಲಿಯೇ ಇರಿ.

* ವಿದ್ಯಾರ್ಥಿನಿ ಒಬ್ಬಾಕೆ ಹೇಳಿದರು. ಅಮೇರಿಕ ಮತ್ತು ರಷ್ಯಾ ಯಅ್‌ಜೂಜ್ ಮಾಜೂಜ್‌ಗಳಾಗಿದ್ದರೆ ಅವರ ನಡುವೆ ದ್ವೇಷಗಳಿಗೆ ಕಾರಣಗಳೇನು?

ಹುಝೂರ್ ಹೇಳಿದರು. ಇಸ್ಲಾಮ್ ಧರ್ಮವನ್ನು ವಿನಾಶ ಮಾಡಲು ಪ್ರಯತ್ನಪಡುತ್ತಿರುವುದು ಅವರೇ ಆಗಿದ್ದಾರೆ. ಇಸ್ಲಾಮ್ ಧರ್ಮವನ್ನು ವಿನಾಶ ಮಾಡಬಯಸುವ ಎಲ್ಲ ಶಕ್ತಿಗಳು ಯಾಜೂಜ್ ಮಾಜೂಜ್‌ಗಳಾಗಿವೆ.

* ಇನ್ನೋರ್ವ ಲಜ್ನ ಸದಸ್ಯೆ ಪ್ರಶ್ನೆ ಕೇಳಿದರು. ನನ್ನ ಪ್ರೋಫೆಸರ್ ಹೇಳುತ್ತಾರೆ. 72 ಪಂಗಡಗಳು ತಪ್ಪು, ಒಂದೇ ಪಂಗಡ ಸರಿಯಾಗಿರುವುದು ಎಂಬ ಈ ಹದೀಸ್ ದುರ್ಬಲವಾಗಿದೆ.

ಹುಝೂರ್ ಹೇಳಿದರು. ಒಂದು ಹದೀಸ್ ಸಿಹಾಹ್ ಸಿತ್ತನಿಂದ ಇಲ್ಲದಿದ್ದರೂ, ಆ ಹದೀಸ್ ಪೂರ್ಣಗೊಂಡರೆ ದುರ್ಬಲ ಎಂದು ಹೇಳಲಾಗದು. ಸುನ್ನಿಗಳಲ್ಲಿ 34–35 ಪಂಥಗಳಿವೆ. ಅಷ್ಟೇ ಶಿಯಾಗಳಲ್ಲಿವೆ ಅದರ ಮುಂದೆ ಇನ್ನು ಭೇಧಗಳಿವೆ. ಜನರು ಅದನ್ನು ನಂಬುತ್ತಾರೆ. ಹಿಂದೆ ಯಾರೊಬ್ಬರು ನನಗೆ ಜೋಕ್ ಹೇಳಿದ್ದರು. ಒಬ್ಬ ವ್ಯಕ್ತಿ ಆತ್ಮಹತ್ಯೆ ಮಾಡಿಕೊಳ್ಳಲು ಸಮುದ್ರದಲ್ಲಿ ಜಂಪು ಹೊಡೆಯಲು ಹೋಗುತ್ತಾನೆ. ಆಗ ಇನ್ನೊಬ್ಬ ವ್ಯಕ್ತಿ ಬಂದು ಅವನನ್ನು ರಕ್ಷಿಸುತ್ತಾನೆ. ರಕ್ಷಿಸುವ ವ್ಯಕ್ತಿ ಅವನಿಗೆ ಕೇಳುತ್ತಾನೆ. ನೀನು ಯಾವ ಪಂಗಡದವನು, ಮತ್ತೆ ಕೇಳುತ್ತಾನೆ. ಯಾವ ಶಾಖೆಯಿಂದ, ಅವನು ಹೇಳುತ್ತಾನೆ. ಇಬ್ಬರು ಒಂದೇ ಪಂಗಡದ ಶಾಖೆಗೆ ಸಂಬಂಧಿಸಿದವರಾಗಿದ್ದೇವೆ ಎಂದು, ಅನಂತರ

*(ಪುಟ ಸಂಖೆ 11 ರಲ್ಲಿ ಮುಂದುವರಿಸಲಾಗಿದೆ)*

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.